
ಪಂಚಪರಮೇಷ್ಠಿಗಳು
ಓಂ ಣಮೋ ಅರಹಂತಾಣಂ
ಣಮೋ ಸಿದ್ಧಾಣಂ
ಣಮೋ ಆಯಿರಿಯಾಣಂ
ಣಮೋ ಉವಜ್ಝಾಯಾಣಂ
ಣಮೋ ಲೋಏ ಸವ್ವಸಾಹೂಣಂ

# 1. ಜೈನ ಧರ್ಮ

ಸರ್ವ ಮಂಗಲ ಮಾಂಗಲ್ಯಂ ಸರ್ವ ಕಲ್ಯಾಣ ಕಾರಕಂ
ಪ್ರಧಾನಂ ಸರ್ವಧರ್ಮಾಣಾಂ ಜೈನಂ ಜಯತಿ ಶಾಸನಂ

ಮಂಗಲ ಮಯವೂ, ಕಲ್ಯಾಣಕಾರಿಯೂ, ಶ್ರೇಷ್ಠವಾದುದೂ ಆದ ಜೈನ ಧರ್ಮವು ಮತ್ತದರ ಶಾಸನವೂ ಶಾಶ್ವತವಾಗಿ ಕಂಗೊಳಿಸಲಿ.

ಜಿನೇಂದ್ರರು ಬೋಧಿಸಿದುದೇ ಜೈನಧರ್ಮ. ಕರ್ಮಶತ್ರುಗಳನ್ನು ಜಯಿಸಿದವರು ಜಿನರು, ಹೊರಗಿನ ಶತ್ರುಗಳಿಗಿಂತ ಅಂತರಂಗದಲ್ಲಿ ಆತ್ಮನಿಗೆ ಅಂಟಿರುವ ಕರ್ಮವೆಂಬ ಶತ್ರುಗಳ ಕಾಟ ಬಹಳ ಕ್ರೂರವಾದುದು. ಈ ಕರ್ಮ ಶತ್ರುಗಳು ಭವಭವದಲ್ಲೂ ಆತ್ಮನೊಂದಿಗೆ ಇದ್ದು ಕಾಡುತ್ತವೆ. ಆತ್ಮನ ಸುಖ ಶಾಂತಿ ನೆಮ್ಮದಿಗಳನ್ನು ಕೆಡಿಸುತ್ತವೆ. ಲೌಕೀಕವೂ ಇಂದ್ರಿಯಾಧೀನವೂ, ಕ್ಷಣಿಕವೂ ಆದ ಹೊರಗಿನ ಸುಖ ಭೋಗವು ಕರ್ಮಜನ್ಯವಾದುದು. ಇದಕ್ಕಿಂತ ಆತ್ಮನಲ್ಲಿಯೇ ಇರುವ ಶಾಶ್ವತವಾದ ಜ್ಞಾನಾನಂದ ಸುಖ-ಶಾಂತಿಗಳು ಸ್ವತಂತ್ರವೂ ನಿತ್ಯತೃಪ್ತಿದಾಯಕವೂ ಆದುದು. ಇದನ್ನು ಪಡೆಯಲು ಕರ್ಮದ ಆವರಣವನ್ನು ತೆಗೆದುಹಾಕಬೇಕು. ಅದಕ್ಕೆ ಸರ್ವಸಂಗ ಪರಿತ್ಯಾಗಿಯಾಗಿ ತಪಸ್ಸನ್ನು ಮಾಡಬೇಕು. ಹೀಗೆ ತಿಳಿದು ಜ್ಞಾನದಿಂದ ಧ್ಯಾನ ಮತ್ತು ತಪಸ್ಸುಗಳನ್ನು ಮಾಡಿ ತನ್ನಾತ್ಮನನ್ನು ಶತ್ರುವಿನಂತೆ ಕಾಡುತ್ತಿರುವ ದುಃಖವನ್ನುಂಟುಮಾಡುವ, ಕರ್ಮಗಳನ್ನು ಗೆದ್ದವರೇ ಜಿನರು. ಇವರೂ ನಮ್ಮ ನಿಮ್ಮಂತಹ ಜೀವಿಗಳಾಗಿದ್ದವರೇ. ಪ್ರತಿಯೋರ್ವ ಜೀವಾತ್ಮಾನೂ ಜಿನನೆಂಬ ಪರಮಾತ್ಮನಾಗಬಲ್ಲನು. ಜೀವಾತ್ಮನೂ ಕರ್ಮಗಳನ್ನು ಬಂಧಿಸಿಕೊಳ್ಳುತ್ತಾ ಜನ್ಮ ಜನ್ಮಗಳಲ್ಲಿ ಸುತ್ತಾಡುತ್ತಾ ನಿಜವಾದ ಸುಖ ಶಾಂತಿಗಳಿಗಾಗಿ ಪರದಾಡುತ್ತಿರುತ್ತಾನೆ. ಅವನೇ ಧರ್ಮವನ್ನು ನಂಬಿ ತಿಳಿದು, ಆಚಾರವಂತನಾಗಿ ಕರ್ಮಗಳನ್ನು ಕಳೆದುಕೊಂಡು ಪರಮಾತ್ಮನಾಗುತ್ತಾನೆ. ಈ ಪರಮಾತ್ಮನಿಗೆ ರಾಗ ದ್ವೇಷಗಳಿಲ್ಲ, ಕೋಪ ತಾಪಗಳಿಲ್ಲ, ಜನನ ಮರಣಗಳಿಲ್ಲ, ರೋಗ ರುಜಿನಗಳಿಲ್ಲ. ಕಾಮಕ್ರೋಧಾದಿಗಳನ್ನು ಗೆದ್ದವರೂ, ಇಂದ್ರೀಯ ಮತ್ತು ಮನಸ್ಸುಗಳನ್ನು ಜಯಿಸಿದವರೂ, ವೀತರಾಗಿಗಳೂ, ಸರ್ವಜ್ಞರೂ, ಜೀವರುಗಳಿಗೆ ಹಿತವಾಗುವ ಸುಖ ಶಾಂತಿಯನ್ನು ನೀಡಬಲ್ಲ ಧರ್ಮೋಪದೇಶವನ್ನು ಮಾಡುವ ಮಹಾನ್ ಆತ್ಮರುಗಳೇ ಜಿನರು. ಇವರಿಗೆ ಜಿನೇಶ, ಕೇವಲಿ, ಜಿನೇಂದ್ರ, ಅರಹಂತ,

ವೀತರಾಗ, ಸರ್ವಜ್ಞ, ಹಿತೋಪದೇಶಿ, ಪರಮೇಷ್ಠಿ, ಪರಂಜ್ಯೋತಿ, ಪರಮಾತ್ಮ, ಭಗವನ್, ಆಪ್ತ, ತೀರ್ಥಂಕರ ಮುಂತಾದ ಹಲವು ಹೆಸರುಗಳುಂಟು.

ಇವರಿಗೆ ಅನಂತಜ್ಞಾನ, ಸುಖ, ಬಲ, ದರ್ಶನ ಮತ್ತು ಆನಂದ ಗಳುಂಟಾಗುತ್ತವೆ. ಇಂತಹ ಜಿನೇಶರು ಬೋಧಿಸಿದ ಧರ್ಮವೇ ಜಿನಧರ್ಮ. ಈ ಜಿನಧರ್ಮವನ್ನು ನಂಬಿ ತಿಳಿದು ಪಾಲಿಸುವವರೇ ಜೈನರು. ಈ ಜೀವಾತ್ಮರೇ ಜಿನರಾಗುತ್ತಿರುವುದರಿಂದ ಇವರೆಲ್ಲಾ ಈ ಧರ್ಮವನ್ನು ಬೋಧಿಸುತ್ತಾ ಪ್ರಚಾರ ಮಾಡುತ್ತಾ ಪುನರುದ್ಧಾರ ಮಾಡುತ್ತಾ ಬಂದಿರುವುದರಿಂದ ಜೈನಧರ್ಮವು ಅನಾದಿಯಾದುದದು ಇದಕ್ಕೆ ಕೊನೆಯೇ ಇಲ್ಲ. ಅಲ್ಲದೇ ಇದೊಂದು ಸ್ವತಂತ್ರ ವಾದ ಧರ್ಮ. ಇದು ಯಾವುದೇ ಒಂದು ಪಂಥದ ಶಾಖೆಯಲ್ಲ, ಇದು ಜೀವಿ ಗಳೆಲ್ಲರಿಗೂ ಹಿತವನ್ನುಂಟುಮಾಡುವ ಉದ್ದೇಶ್ಯವನ್ನು ಹೊಂದಿರುವುದರಿಂದ ಇದೇ ಜಿನಧರ್ಮ, ಮಾನವಧರ್ಮ, ಲೋಕಕಲ್ಯಾಣವನ್ನು ಬಯಸುವುದರಿಂದ ವಿಶ್ವಧರ್ಮ, ಸನಾತನ ಧರ್ಮವಾಗಿದೆ. ಸರ್ವರ ಏಳಿಗೆಯನ್ನು ಬಯಸುವುದರಿಂದ ಇದು ಸರ್ವೋದಯ ಧರ್ಮ ತೀರ್ಥವೆನಿಸಿದೆ.

## ಜೈನ ಧರ್ಮದ ಬುನಾದಿ

ದೇವ, ಮನುಷ್ಯ, ನರಕ, ತಿರ್ಯಂಚಗಳೆಂಬ ನಾಲ್ಕು ಗತಿಗಳಲ್ಲಿನ ಜೀವಿಗಳ ದುಃಖವನ್ನು ನಿವಾರಣೆ ಮಾಡಿ ಉತ್ತಮವಾದ ಮತ್ತು ಶಾಶ್ವತವಾದ ಸುಖಶಾಂತಿ ನೆಮ್ಮದಿಗಳನ್ನು ದೊರಕಿಸುವುದೇ ಜೈನಧರ್ಮದ ಮೂಲ ಉದ್ದೇಶ. ಜೈನ ಧರ್ಮದಲ್ಲಿ ಅಹಿಂಸೆಯೇ ಪ್ರಧಾನವಾದುದರಿಂದ 'ಅಹಿಂಸಾ ಪರಮೋ ಧರ್ಮಃ' ಎಂಬುದೇ ಈ ಜಿನಧರ್ಮದ ಬುನಾದಿ (ತಳಹದಿ-ಮೂಲ)-ಯಾವ ಪ್ರಾಣಿಗೂ ಹಿಂಸೆ ಮಾಡದಿರುವುದೇ ಅಹಿಂಸೆ. ಇದನ್ನು ಕಾಪಾಡಿಕೊಳ್ಳುವುದಕ್ಕೆ ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳ ಪಾಲನೆಯು ಅತ್ಯಗತ್ಯ. ಇದನ್ನು ಅಲ್ಪ ಸ್ವಲ್ಪವಾಗಿ ಪಾಲಿಸುವವರು ಗೃಹಸ್ಥರು. ಮಹತ್ತರವಾಗಿ ಪೂರ್ಣರೂಪವಾಗಿ ಪಾಲಿಸುವವರು ಮುನಿಗಳು ಆದ್ದರಿಂದ ಈ ಧರ್ಮದಲ್ಲಿ ಗೃಹಸ್ಥಧರ್ಮ, ಮುನಿಧರ್ಮ ಎಂದು ಎರಡು ವಿಧವಾಗಿದೆ. ಮುನಿಧರ್ಮಕ್ಕೆ ಗೃಹಸ್ಥ ಧರ್ಮವು ಭದ್ರವಾದ ಬುನಾದಿ, ಇವುಗಳನ್ನು ತಮ್ಮ ತಮ್ಮ ಶಕ್ತಿಗೆ ತಕ್ಕಂತೆ ಪಾಲಿಸಬಹುದು. ಎಷ್ಟೆಷ್ಟು ಪಾಲಿಸಿದರೆ ಅಷ್ಟಷ್ಟು ಸುಖ ಶಾಂತಿಗಳ ಫಲ ಪ್ರಾಪ್ತವಾಗುತ್ತದೆ. ಈ ಜೀವನಿಗೆ ಮಹಾನ್ ಮುನಿಧರ್ಮದ ನಿರತಿಚಾರವಾದ ಪಾಲನೆಯಿಂದ ಮಾತ್ರ



ಜೀವನ್ಮುಕ್ತಿ ಸಾಧ್ಯ. ಆದರೂ ಗೃಹಸ್ಥನೇ ಮುಂದೆ ಸಾಗಿ ಮುನಿಧರ್ಮವನ್ನು ಸಾಧಿಸಲು ಅರ್ಹನಾಗುತ್ತಾನೆ.

ಈ ಜನ್ಮದಲ್ಲಿ ನಾವು ಅನುಭವಿಸುತ್ತಿರುವ ಸುಖ ದುಃಖಾದಿ ಸ್ಥಿತಿಯು ನಮ್ಮ ಪೂರ್ವಾರ್ಜಿತ ಕರ್ಮದಿಂದಲೇ ಒದಗುತ್ತದೆ. ಅಂದರೆ ಈ ಧರ್ಮವು ಪುನರ್ಜನ್ಮವನ್ನು ಒಪ್ಪುವಂತಹುದು. ಮುಂದಿನ ಜನ್ಮದಲ್ಲಿ ಅನುಭವಿಸಲುಬೇಕಾದ ಕರ್ಮಗಳು ಈ ಜನ್ಮದಲ್ಲಿ ಸಿದ್ಧವಾಗುತ್ತವೆ. ಮಾಡಿದ್ದುಣ್ಣೋ ಮಹಾರಾಯ ಎಂಬಂತೆ ಒಳ್ಳೆಯದ್ದನ್ನು ಮಾಡಿದ್ದರೆ ಸುಖವನ್ನೂ, ಕೆಟ್ಟದ್ದನ್ನು ಮಾಡಿದ್ದರೆ ದುಃಖವನ್ನೂ ಅನುಭವಿಸಬೇಕಾಗುತ್ತದೆ. ಕರ್ಮಗಳಿಗೆ ತಕ್ಕಂತೆ ಹಲವು ಗತಿಗಳಲ್ಲಿ ಜನ್ಮ ತಾಳಬೇಕಾಗುತ್ತದೆ. ಸತ್ಕರ್ಮದಿಂದ ಸದ್ಗತಿ-ದುಷ್ಕರ್ಮದಿಂದ ದುರ್ಗತಿ, ಎಲ್ಲಾ ಕರ್ಮಗಳ ಜಯದಿಂದ ಮುಕ್ತಿ. ಇದೇ ಜೈನ ತತ್ವಗಳಿಂದ ಅಂಗೀಕರಿಸುವಂತಹ ಮುಖ್ಯ ಬೋಧನೆ. ಇದೇ ಜಿನೇಶರು ಹೇಳಿರುವ ಧರ್ಮ. ಇದನ್ನೇ ಜೈನರು ಪಾಲಿಸುವುದು. ಜೈನರ ಅಂತಿಮ ಗುರಿ ಮೋಕ್ಷ ಪಡೆಯುವುದು. ಇದು ನಿರಂತರ ಪಾಲನೆಯಿಂದ ಒಂದಲ್ಲೊಂದು ಭವದಲ್ಲಿ ದೊರತೇ ದೊರೆಯುತ್ತದೆ. ಮೋಕ್ಷ ಹೊಂದಿದ ಆತ್ಮ ಮತ್ತೆ ಸಂಸಾರಕ್ಕೆ ಬರುವುದಿಲ್ಲ.

## ಜೈನ ಧರ್ಮದ ಕೆಲವು ಪಂಗಡಗಳು

ಗೃಹಸ್ಥ ಧರ್ಮವನ್ನು ಚೆನ್ನಾಗಿ ಪಾಲಿಸಿ ನಂತರ ಸಂಸಾರ-ಶರೀರ-ಭೋಗಗಳಲ್ಲಿ ವೈರಾಗ್ಯವನ್ನು ಹೊಂದಿ ದಿಗಂಬರ ಮುನಿಯಾಗಿ, ಜ್ಞಾನ-ಧ್ಯಾನ ತಪಾರಾಧನೆ ಮಾಡಿ, ಕರ್ಮ ನಿರ್ಮೂಲ ಮಾಡಿದ ಜಿನೇಂದ್ರನ ಪ್ರಕೃತಿಯಾದ ಜಿನ ಬಿಂಬವನ್ನು ಜೈನರು ಪೂಜಿಸುತ್ತಾರೆ. ಜೈನರಲ್ಲಿ ಮುಖ್ಯವಾಗಿ ಮೂರು, ಪಂಗಡಗಳಿವೆ. ದಿಗಂಬರ, ಶ್ವೇತಾಂಬರ, ಸ್ಥಾನಿಕವಾಸಿ ಎಂದು. ದಿಗಂಬರರು ತೀರ್ಥಂಕರರ, ಜಿನೇಂದ್ರ ನಗ್ನ ಮೂರ್ತಿಗಳನ್ನು ಪೂಜಿಸುತ್ತಾರೆ. ಗುರುಗಳಾದ ಜಿನಮುನಿಗಳೂ ನಗ್ನರಾಗಿರುತ್ತಾರೆ. ಈ ದಿಗಂಬರ ಪಂಥವೇ ಬಹುಪ್ರಾಚೀನವೂ, ಮೂಲವೂ ಆದುದು. ಶ್ವೇತಾಂಬರರು ತೀರ್ಥಂಕರರ ಬಾಲ್ಯದ-ಗೃಹಸ್ಥ ವೈಭವದ ಸ್ಥಿತಿಯಲ್ಲಿನ ಮೂರ್ತಿಗಳನ್ನು ವಸ್ತ್ರ ಆಭರಣಗಳಿಂದ ಅಲಂಕರಿಸಿ ಪೂಜಿಸುತ್ತಾರೆ. ಸ್ಥಾನಿಕ ವಾಸಿಗಳು ಮೂರ್ತಿಪೂಜಕರಲ್ಲ ಈ ಎರಡು ಪಂಥದ ಗುರುಗಳು ಬಿಳಿ ವಸ್ತ್ರಧಾರಿಗಳಾಗುತ್ತಾರೆ. ಇವು ಇತ್ತೀಚಿನವುಗಳು ಈ ಮೂರು ಪಂಥಗಳಲ್ಲಿ ಮೂಲ ತತ್ವಗಳಲ್ಲಿ, ತೀರ್ಥಂಕರರಲ್ಲಿ, ಹೆಚ್ಚೇನೂ

ವ್ಯತ್ಯಾಸವಿಲ್ಲ. ಆಚಾರ ವಿಚಾರದಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವುಂಟು. ಎಲ್ಲರ ಗುರಿಯೂ ಒಂದೇ ಆಗಿದೆ. ಏನಿದ್ದರೂ ಯಾರೂ ಯಾರನ್ನೂ ನಿಂದಿಸಬಾರದು. ಧರ್ಮ ಬಂಧುಗಳಾಗಿ ಬಾಳಬೇಕು. ಎಲ್ಲರಿಗೂ ಧರ್ಮ ಒಂದೆ, ಅದು ಎಲ್ಲಾ ಜೀವಿಗಳಿಗೂ ಹಿತಮಾಡುವಂತಹುದು. ಜೀವಿಯು ಜಿನನಾಗುವುದಕ್ಕೆ ಸಹಕಾರಿಯಾಗಿರುವುದು. ಜಾತಿಗಿಂತ ನೀತಿಶ್ರೇಷ್ಠ. ಉತ್ತಮವಾದ ನೀತಿ ನಿಯಮಗಳನ್ನು ಹೊಂದಿರುವ ಈ ಜೈನಧರ್ಮವು ಯಾವುದೇ ಪಂಥ, ಜಾತಿ, ದೇಶ, ಭಾಷೆ, ಪಂಗಡ ಜನಗಳಿಗೆ ಸೀಮಿತವಾದುದಲ್ಲ. ಯಾರೇ ಆಗಲಿ ಈ ಧರ್ಮವನ್ನು ನಂಬಿ, ತಿಳಿದು, ಪಾಲಿಸಿ ತಮ್ಮ ಆತ್ಮ ಕಲ್ಯಾಣವನ್ನು ಮಾಡಿಕೊಳ್ಳಬಹುದಾಗಿದೆ. ಇಂತಹ ಉದಾರ ಗುಣಗಳನ್ನು ಹೊಂದಿರುವ ಇದು ವಿಶ್ವಧರ್ಮ, ಮಾನವಧರ್ಮ, ಜೀವಧರ್ಮ, ಜಿನಧರ್ಮವೆಂದು ಪ್ರಸಿದ್ಧವಾಯಿತು. ಇದು ಯಾರನ್ನೂ ಬಲವಂತವಾಗಿ ಮತಾಂತರ ಮಾಡಿಸುವುದಿಲ್ಲ. ತಾನಾಗಿಯೇ ಈ ಧರ್ಮದಿಂದ, ತತ್ತ್ವ ಬೋಧನೆಯಿಂದ ಪ್ರಭಾವಿತನಾಗಿ ಈ ಧರ್ಮವನ್ನು ಸ್ವೀಕರಿಸಲು ಅವಕಾಶ ಉಂಟು. ತನ್ನಲ್ಲಿರುವ ಮಿಥ್ಯಾತ್ವ, ಅನಾಚಾರ, ಮೂಢನಂಬಿಕೆ ಅಜ್ಞಾನಗಳನ್ನು ತೊರೆದು, ಅಹಿಂಸಾಮಯವಾದ ಈ ಧರ್ಮವನ್ನು ನಂಬಿ ತಿಳಿದು ಪಾಲಿಸಿ ಪಾವನರಾಗಬಹುದು. ಇಂತಹ ಉತ್ತಮವಾದ ಜೈನಧರ್ಮವು ಹಲವು ಗುಣ ಲಕ್ಷಣಗಳನ್ನು ಹೊಂದಿದೆ. ಅಹಿಂಸೆ-ಸತ್ಯ-ಪಾಲನೆಮಾಡುವುದು, ಕಳ್ಳತನ ಮಾಡದಿರುವುದು, ಶೀಲವಂತನಾಗಿರುವುದು, ಅತಿಯಾದ ಮೋಹ, ಆಸೆಗಳನ್ನು ತೊರೆದು ಅಲ್ಪ ಪರಿಗ್ರಹಿಯಾಗಿರುವುದು ರಾತ್ರಿ ಭೋಜನ ತ್ಯಾಗ, ನೀರನ್ನು ಶೋಧಿಸಿ ಉಪಯೋಗಿಸುವುದು, ಮಧು, ಮದ್ಯ, ಮಾಂಸ ತ್ಯಾಗ, ಜೂಜಾಡದಿರುವುದು, ಕಂದ ಮೂಲಗಳನ್ನು ಉಪಯೋಗಿಸದಿರುವುದು, ಜನಿವಾರಧಾರಣೆ, ಜಿನಪೂಜೆ, ದಿಗಂಬರ ಗುರುಗಳ ಸೇವೆ, ಜಿನ ಧರ್ಮಗ್ರಂಥಗಳ ಅಧ್ಯಯನ, ಇಂದ್ರಿಯ ಮತ್ತು ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವುದು, ಶಕ್ತಿ ಇದ್ದಷ್ಟು ದಾನ, ಪರೋಪಕಾರ ಮಾಡುವುದು, ವ್ರತ ಉಪವಾಸ, ಧ್ಯಾನಗಳನ್ನು ಮಾಡುವುದು. ಒಟ್ಟಿನಲ್ಲಿ ಸಾತ್ವಿಕನಾಗಿ ಸುಖದಲ್ಲಿ ಹಿಗ್ಗದೆ ದುಃಖದಲ್ಲಿ ಕುಗ್ಗದೆ ಸಮತಾ ಭಾವನೆಯಿಂದ ಶಾಂತಿಯಿಂದ ಜೀವನವನ್ನು ಸಾಗಿಸುವುದು ಮುಖ್ಯ. ಇಂತಹವನ ಜೀವನ ಇತರರಿಗೆ ಆದರ್ಶವಾಗುವುದು. ಮಾನವಜನ್ಮದ ಸಾರ್ಥಕವಾಗುವುದು. ಇವನಿಂದ ಯಾರಿಗೂ ತೊಂದರೆ ಇಲ್ಲ. ಶಾಂತಿ-ಸುಖ-ನೆಮ್ಮದಿಗಳು ಇಹಪರದಲ್ಲಿ ಸಿಗುವುದರಲ್ಲಿ ಸಂದೇಹವಿಲ್ಲ, ಇವನ ಬಾಳು ಬಂಗಾರವಾಗುವುದು.



## 2. ಪ್ರಾಥರ್ವಿಧಿ

ಬಂಧುಗಳೇ,

ಪ್ರತಿಯೊಬ್ಬರೂ ದಿನವೂ ಸೂರ್ಯೋದಯಕ್ಕೆ ಮುಂಚೆಯೇ ಓಂನಮಃ ಸಿದ್ಧೇಭ್ಯಃ ಎನ್ನುತ್ತಾ ಬಲಪಕ್ಕದಲ್ಲಿ ಏಳಬೇಕು, ಅಲ್ಲಿಯೇ ಪೂರ್ವಕ್ಕೆ ಮುಖಮಾಡಿ ಕುಳಿತು ಏಕಾಗ್ರತೆಯಿಂದ 9 ಸಾರಿ ಣಮೋಕಾರವನ್ನು ಜಪಿಸಬೇಕು. ನಂತರ ಮನಸ್ಸಿನಲ್ಲಿ ಹೀಗೆ ವಿಚಾರ ಮಾಡಬೇಕು.

'ನಾನು ಅನಾದಿಕಾಲದಿಂದ ಭಯಂಕರವಾದ ಸಂಸಾರದಲ್ಲಿ ಹಲವು ಕುಗತಿಗಳಲ್ಲಿ ಹುಟ್ಟಿ ಸತ್ತು ಬಳಲಿ ಸಾಕಾಗಿ ಹೋಗಿದ್ದೇನೆ. ಪುಣ್ಯವಶಾತ್ ಜಿನಧರ್ಮದಲ್ಲಿ ಹುಟ್ಟಿ ಗೃಹಸ್ಥನಾಗಿದ್ದೇನೆ. ಈ ಧರ್ಮವನ್ನು ಚೆನ್ನಾಗಿ ಪಾಲಿಸುವಂತಾಗಲಿ. ಉತ್ತರೋತ್ತರ ಒಳ್ಳೆಯ ಉತ್ತಮ ಸುಖ ಪ್ರಾಪ್ತವಾಗಲಿ-ನನ್ನ ಬಾಳು ಹಸನಾಗಿ ನನ್ನಿಂದ ಯಾರಿಗೂ ತೊಂದರೆಯಾಗದಿರಲಿ. ಈ ದಿನ ನನಗೆ ಒಳ್ಳೆಯದಾಗಲಿ. ನನ್ನ ಕರ್ತವ್ಯದಲ್ಲಿ ಯಾವ ವಿಘ್ನಗಳೂ ಬರದಂತಿರಲಿ, ಹೇ ಜಿನೇಂದ್ರ ಭಗವಾನ್ ನಾನು ಧರ್ಮವನ್ನು ಮರೆಯದೆ ನನ್ನ ಯಥಾಶಕ್ತಿ ಪಾಲಿಸುವಂತಾಗಲೀ ತಮ್ಮ ಪಾದವೇ ನನಗೆ ಶರಣು' ಎಂದು ಅಂದುಕೊಂಡು ಹಾಸಿಗೆಯನ್ನು ಬಿಟ್ಟು ಬಂದು ಮನೆಯಲ್ಲಿನ ದೇವರ ಬಿಂಬ-ಫೋಟೋಗಳನ್ನು ಕಣ್ತುಂಬಾ ನೋಡಿ ಮನಃಪೂರ್ವಕವಾಗಿ ವಂದಿಸಬೇಕು.

ಅನಂತರ ಶೌಚ-ಸ್ನಾನಾದಿಗಳನ್ನು ಮಾಡಿ ಜಿನಮಂದಿರ ಹತ್ತಿರದಲ್ಲಿದ್ದರೆ ಅಲ್ಲಿಗೆ ಹೋಗಿ ಜಿನದರ್ಶನ ಪೂಜೆ (ಅಷ್ಟವಿಧಾರ್ಚನೆ) ಜಪ ಮಾಡಿ ಮನೆಗೆ ಬರಬೇಕು. ದೂರವಿದ್ದರೆ ಮನೆಯಲ್ಲಿರುವ ದೇವರ ಗುಡಿಯಲ್ಲಿ ಕುಳಿತು ಪೂಜೆ-ಜಪ, ಸ್ತೋತ್ರ-ಭಜನೆ ಸಂಕ್ಷಿಪ್ತವಾಗಿ ಸಮಯವಿದ್ದರೆ ವಿಸ್ತಾರವಾಗಿ ಮಾಡಬೇಕು. ನಂತರ ತಮ್ಮ ಇತರ ಕ್ರಿಯೆಗಳಿಗೆ ತೊಡಗಬೇಕು. ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ಅಂದರೆ ವಿದ್ಯಾರ್ಥಿಗಳು ಓದು-ಬರಹ, ನೌಕರರು ನಿಷ್ಠಾವಂತನಾಗಿ ನೌಕರಿ, ವ್ಯಾಪಾರ-ವಹಿವಾಟು, ಗೃಹಿಣಿಯರು ತಮ್ಮ ಪಾಲಿನ ಕರ್ತವ್ಯವನ್ನು ಮಾಡಬೇಕು. ಈ ಕಾರ್ಯಗಳಲ್ಲಿ ಧರ್ಮಕ್ಕೆ ಧಕ್ಕೆ ಬರದಂತೆ ಪಾಪಕಾರ್ಯಗಳನ್ನು ಮಾಡದಂತೆ ಎಚ್ಚರವಹಿಸಬೇಕು.

ಸಾಧ್ಯವಿದ್ದರೆ ಆಟೋಟಪಾಠಗಳಲ್ಲಿ, ಯೋಗ-ಸಾತ್ವಿಕವಾದ ಮನರಂಜನೆಗಳಲ್ಲಿಯೂ ಭಾಗವಹಿಸಿ ತನ್ನ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು.

ಶುದ್ಧವಾದ ಊಟ ತಿಂಡಿಗಳನ್ನು ಸೇವಿಸಬೇಕು. ಬೀಡಿ ಚುಟ್ಟ ತಂಬಾಕು, ಮದ್ಯಪಾನ ಮಾಂಸಭಕ್ಷಣೆ, ಜೂಜಾಡುವುದನ್ನು ಯಾವಾಗಲೂ ಮಾಡಬಾರದು. ಶೋಧಿಸಿದ ನೀರನ್ನು ಕುಡಿಯಬೇಕು. ಕಂದಮೂಲಗಳನ್ನು ತಿನ್ನಬಾರದು, ಆದಷ್ಟು ಇವುಗಳನ್ನು ತಮ್ಮ ಶಕ್ತ್ಯಾನುಸಾರ ಪಾಲಿಸಿದರೆ ಸದ್‌ಗೃಹಸ್ಥನಾಗಿ ಬಾಳಿನಲ್ಲಿ ಸುಖಶಾಂತಿಯನ್ನು ಪಡೆಯಬಹುದು.

ಸಂಜೆಗೆ ಹೊತ್ತು ಮುಳುಗುವ ಮುನ್ನವೇ ಊಟವೋ ತಿಂಡಿಯೋ ಅಥವಾ ಫಲಾಹಾರವೋ ಮಾಡಿ ಮತ್ತೆ ದೇವರ ದರ್ಶನ, ಸುತ್ತಿ-ಭಜನೆ-ಧರ್ಮಗ್ರಂಥಗಳ ಅಧ್ಯಯನಗಳನ್ನು ಮತ್ತು ತಮ್ಮ ಶಾಲಾ ಪಠ್ಯ ಪುಸ್ತಕಗಳನ್ನು ಓದಿ ರಾತ್ರಿ ಒಳ್ಳೆಯ ಮನಸ್ಸಿನಿಂದ ಅರಿಹಂತ ಸಿದ್ಧಭಗವಂತಾ ನಮೋ ನಮಃ ಎಂದು ಎಡಪಕ್ಕದಿಂದ ಮಲಗಬೇಕು.

ಇದು ನಿತ್ಯ ರೂಢಿಯಾದರೆ ಕಷ್ಟವೇನಲ್ಲ, ಸದಾಚಾರ-ಸದ್ವಿಚಾರ ಎಲ್ಲರಿಗೂ ಮುಖ್ಯ. ಇದರಿಂದ ತನಗೂ-ದೇಶಕ್ಕೂ ಹಿತ. ಬಾಲ್ಯದಲ್ಲಿ ವಿದ್ಯೆ, ಯೌವ್ವನದಲ್ಲಿ ನೌಕರಿ ವ್ಯಾಪಾರ-ಕೃಷಿ ಮುಂತಾದ ದುಡಿಮೆ ಮಾಡಿ, ವೃದ್ಧಾಪ್ಯದಲ್ಲಿ ಅಪರಿಗ್ರಹಿಯಾಗಿ ಶಾಂತಿಯಿಂದ ಕಾಲ ಯಾಪನೆ ಮಾಡಬೇಕು.

ಒಳ್ಳೆಯ ಕಾರ್ಯದಲ್ಲಿ ಆಸಕ್ತಿ, ಕೆಟ್ಟ ಕಾರ್ಯದಲ್ಲಿ ತೊಡಗದಿರುವುದು, ಪರೋಪಕಾರ, ದಯೆ-ಸತ್ಯ, ನಿರ್ವಂಚನೆ ಮುಂತಾದ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕು. ದುಷ್ಟರ ಸಹವಾಸ ಮಾಡಬಾರದು. ದೌರ್ಜನ್ಯ ಮಾಡಬಾರದು. 'ಸದಾಚಾರ ಸ್ವರ್ಗದ ದ್ವಾರ' ಎಂಬಂತೆ ತನ್ನ ಬಾಳು ಆದರ್ಶವಾಗಿರುವಂತೆ ಬಾಳಬೇಕು.

## 3. ಗೃಹಸ್ಥರ ಷಟ್ಕ್ರಿಯೆಗಳು

ಜೈನ ಗೃಹಸ್ಥರಿಗೆ ಶ್ರಾವಕರೆಂಬ ಹೆಸರೂ ಉಂಟೆಂಬುದನ್ನು ಈಗಾಗಲೇ ತಿಳಿದಿರುವಿರಿ. ಈಗ ಆ ಗೃಹಸ್ಥರು ಮುಖ್ಯವಾಗಿ ಆಚರಿಸಬೇಕಾದ ಕ್ರಿಯೆಗಳು ಯಾವುವು? ಎಂಬುದನ್ನು ತಿಳಿಯೋಣ. ಇಲ್ಲಿ ಕ್ರಿಯೆಯೆಂದರೆ ಅವನು ಧರ್ಮ ಸಂರಕ್ಷಣೆಗಾಗಿ ಆಚರಿಸತಕ್ಕ ಕಾರ್ಯಗಳು ಎಂದಾಗುತ್ತದೆ. ಶ್ರಾ-ಧರ್ಮದಲ್ಲಿ



ಶ್ರದ್ಧೆಯುಳ್ಳವನೂ, ವ-ಧರ್ಮದ ವಿವೇಕಶಾಲಿಯೂ, ಕ-ಧರ್ಮಕ್ರಿಯಾ ನಿರತನೂ ಅಂದರೆ ಶ್ರದ್ಧಾವಾನ್, ವಿವೇಕವಾನ್, ಕ್ರಿಯಾವಾನ್ ಆದವನೇ ಶ್ರಾವಕ. ಇವನು ನಿತ್ಯವೂ ಆಚರಿಸುವ ಧರ್ಮಕ್ರಿಯೆಗಳು ಆರು ಇವೆ.

ದೇವ ಪೂಜಾಗುರೂಪಾಸ್ತಿಃ ! ಸ್ವಾಧ್ಯಾಯಃ ಸಂಯಮಃ ತಪಃ ॥
ದಾನಂಚೇತಿ ಗೃಹಸ್ಥಾನಾಂ । ಷಟ್ಕರ್ಮಾಣಿ ದಿನೇ ದಿನೇ ॥

ದೇವಪೂಜೆ, ಗುರುಸೇವೆ, ಸ್ವಾಧ್ಯಾಯ, ಸಂಯಮ, ತಪಸ್ಸು ಮತ್ತು ದಾನ ಇವೇ ಆರು ಕ್ರಿಯೆಗಳು.

1. ದೇವಪೂಜೆ :- ಜೈನ ಸಿದ್ಧಾಂತದಲ್ಲಿ ತಿಳಿಸಿರುವಂತೆ ಹದಿನೆಂಟು ದೋಷಗಳಿಲ್ಲದವರೂ, ಸರ್ವಜ್ಞರೂ ಎಂದರೆ ಎಲ್ಲವನ್ನು ಬಲ್ಲವರೂ, ದಿವ್ಯಧ್ವನಿಯ ಮೂಲಕ ಉಪದೇಶ ಮಾಡುವವರೂ ಆದ ಪರಮಾತ್ಮರೇ ದೇವರೆನಿಸುತ್ತಾರೆ. ಅಂದರೆ ಈ ಲಕ್ಷಣಗಳನ್ನು ಹೊಂದಿರುವ "ಜಿನ" ದೇವರು. ಅವರನ್ನು ಆರಾಧಿಸುವುದೇ ದೇವಪೂಜೆಯೆನಿಸುವುದು. ಗೃಹಸ್ಥರು ಭಾವಸಹಿತ ದ್ರವ್ಯಪೂಜೆಯನ್ನು ಮಾಡಬೇಕು. ಅವಕಾಶವಿದ್ದರೆ ಅಭಿಷೇಕ ಅಷ್ಟವಿಧಾರ್ಚನೆ ಮಾಡಬೇಕು.

2. ಗುರುಸೇವೆ :- ಜೈನಸಿದ್ಧಾಂತದಲ್ಲಿ ತಿಳಿಸಿರುವ ವಿಧಿಯನ್ನು ಅನುಸರಿಸಿ ಸಂಸಾರಶರೀರ ಭೋಗಗಳಿಂದ ನಿವೃತ್ತರಾಗಿ ದೀಕ್ಷೆ ತೆಗೆದುಕೊಂಡವರು 'ಗುರು' ಗಳೆನಿಸುತ್ತಾರೆ. ಇವರಲ್ಲಿ ನಿರ್ಗ್ರಂಥರು, ಕ್ಷುಲ್ಲಕರು, ಐಲಕರು, ಭಟ್ಟಾರಕರೂ, ಬ್ರಹ್ಮಚಾರಿಗಳು, ಗೃಹಸ್ಥಾಚಾರ್ಯರು ಮೊದಲಾದ ಭೇಧಗಳಿವೆ. ಇವರಿಗೆ ಆಹಾರಾದಿ ಚತುರ್ವಿಧ ದಾನಗಳನ್ನು ಯಥಾಶಕ್ತಿಯಿಂದ ನೀಡಿ ಸತ್ಕರಿಸುವುದಕ್ಕೆ 'ಗುರುಸೇವೆ' ಎಂದು ಹೆಸರು.

3. ಸ್ವಾಧ್ಯಾಯ :- "ಸ್ವಾಧ್ಯಾಯ" ವೆಂದರೆ ಶಾಸ್ತ್ರಗಳನ್ನು ಓದುವುದು ಎಂದರ್ಥ. ಜೈನ ಸಿದ್ಧಾಂತಗಳನ್ನು ತಿಳಿಸುವ ಶಾಸ್ತ್ರಗಳನ್ನು ಓದುವುದು, ಓದಲಿಕ್ಕೆ ಬಾರದಿದ್ದರೆ ವಿದ್ಯಾವಂತರಿಂದ ಓದಿಸಿ ತಿಳಿದುಕೊಳ್ಳುವುದು, ತಿಳಿದುದನ್ನು ಮನನ ಮಾಡುವುದು, ಅಂದರೆ ಪದೇ ಪದೇ ಆಲೋಚಿಸಿ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡಿಕೊಳ್ಳುವುದು, ಇವೆಲ್ಲವೂ 'ಸ್ವಾಧ್ಯಾಯ' ಎನಿಸುತ್ತವೆ. "ಸ್ವಾಧ್ಯಾಯಂ ಪರಮಂ ತಪಃ" ಎನ್ನುತ್ತಾರೆ.

4. ಸಂಯಮ :- ಜೀವನದ ಪ್ರತಿಯೊಂದು ವ್ಯವಹಾರದಲ್ಲೂ

ಒಂದು ಮಿತಿಯನ್ನು ಅನುಸರಿಸುವುದು 'ಸಂಯಮ' ವೆನಿಸುವುದು. ಕಣ್ಣು, ಮೂಗು, ನಾಲಿಗೆ, ಕಿವಿ ಮತ್ತು ಸ್ಪರ್ಶಗಳೆಂಬ ಐದು ಇಂದ್ರಿಯಗಳನ್ನು ಚಾಪಲ್ಯಕ್ಕೆ ಒಳಪಡಿಸದಂತೆ, ಹತೋಟಿಯಲ್ಲಿಟ್ಟುಕೊಂಡು ನಡೆಯಬೇಕು. ಹೀಗೆ ಜೀವನದಲ್ಲಿ 'ಸಂಯಮ' ವನ್ನು ಆಚರಿಸಲು ವ್ರತ, ಜಪ, ಪೂಜೆ ಮೊದಲಾದವು ಸಹಾಯವಾಗುತ್ತವೆ. ಹಾಗೂ ಮನಸ್ಸಿನ ಹಾರಾಟ ಆಸೆ-ಆಕಾಂಕ್ಷೆಯನ್ನು ತಡೆಗಟ್ಟುವುದೂ ಅಹಿಂಸಾ ಪಾಲನೆಯೂ ಸಂಯಮವೇ ಆಗಿದೆ.

5. ತಪಸ್ಸು :- ಪರಿಗ್ರಹ ಮತ್ತು ಪದಾರ್ಥಗಳನ್ನು ಸಂಗ್ರಹಿಸುವುದನ್ನು ಆದಷ್ಟು ಕಡಿಮೆ ಮಾಡುತ್ತಾ, ಅಪರಿಗ್ರಹದತ್ತ ಸಾಗುವುದಕ್ಕೆ "ತಪಸ್ಸು" ಎಂದು ಹೆಸರು. ಇದರಲ್ಲಿ ಅಭ್ಯಂತರ ಮತ್ತು ಬಾಹ್ಯ ತಪಸ್ಸು ಎಂದು ಎರಡು ಬಗೆ ಇವೆ. ಮನಸ್ಸಿಗೆ ಸಂಬಂಧಪಟ್ಟದ್ದಕ್ಕೆ ಅಭ್ಯಂತರ ತಪಸ್ಸೆಂದೂ, ಶರೀರಕ್ಕೆ ಸಂಬಂಧ ಪಟ್ಟಿದ್ದಕ್ಕೆ ಬಾಹ್ಯ ತಪಸ್ಸೆಂದೂ ಹೆಸರು. ಈ ತಪಸ್ಸುಗಳ ಆಚರಣೆಗೆ ವ್ರತೋಪವಾಸಾದಿಗಳು ನೆರವಾಗುತ್ತವೆ. ಇಚ್ಛೆಯ ನಿರೋಧವೇ ತಪಸ್ಸು.

6. ದಾನ :- ಯಥಾಶಕ್ತಿಯಿಂದ ಮತ್ತು ಸಂತೋಷದಿಂದ ಇತರರಿಗೆ ಯಾವುದಾದರೂ ವಸ್ತುವನ್ನು ನೀಡುವುದರ ಮೂಲಕ ಮಾಡುವ ಸಹಾಯಕ್ಕೆ 'ದಾನ' ಎಂದು ಹೆಸರು. ಇದು ಜೈನಸಿದ್ಧಾಂತದ ರೀತಿಯಿಂದ ಆಹಾರ, ಅಭಯ, ಭೈಷಜ್ಯ ಮತ್ತು ಶಾಸ್ತ್ರವೆಂದುನಾಲ್ಕು ಬಗೆ ಇದೆ. ಮುನಿಗಳು ಮೊದಲಾದ ಸಂಯಮಿಗಳಿಗೆ ಶಾಸ್ತ್ರದ ವಿಧಿಯಂತೆ ಆಹಾರವನ್ನು ನೀಡುವುದು 'ಆಹಾರದಾನ' ಎನಿಸುತ್ತದೆ. ಕಷ್ಟದಲ್ಲಿರುವವರಿಗೆ ಸಹಾನುಭೂತಿಯನ್ನು ತೋರಿಸಿ ಸಹಾಯ ಮಾಡುವುದು 'ಅಭಯದಾನ' ಎನಿಸುತ್ತದೆ. ಮುನಿಗಳಿಗೆ, ರೋಗಪೀಡಿತರಿಗೆ, ರೋಗದಿಂದ ನರಳುವ ಪಶುಪಕ್ಷಿಗಳಿಗೆ ಉಚಿತವಾಗಿ ಔಷಧವನ್ನಿತ್ತು ಅವರ ರೋಗ ಬಾಧೆಯನ್ನು ಹೋಗಲಾಡಿಸಲು ಪ್ರಯತ್ನಿಸುವುದಕ್ಕೆ "ಔಷಧದಾನ" ಎನಿಸುತ್ತದೆ. ಶಾಸ್ತ್ರ ಗ್ರಂಥಗಳನ್ನು ಬರೆಯಿಸಿ, ಅಥವಾ ಅಚ್ಚು ಹಾಕಿಸಿ, ಅವನ್ನು ಉಚಿತವಾಗಿ ಹಂಚಿ, ಎಲ್ಲರೂ ಶಾಸ್ತ್ರದ ವಿಚಾರಗಳನ್ನು ತಿಳಿಯುವಂತೆ ಮಾಡುವುದು "ಶಾಸ್ತ್ರದಾನ" ಎನಿಸುತ್ತದೆ. ಇದಕ್ಕೆ ಜ್ಞಾನದಾನವೆಂದೂ ಹೆಸರು.

ಈ ನಾಲ್ಕು ಬಗೆಯ ದಾನಗಳಲ್ಲಿ ಯಾವುದನ್ನೂ ಪ್ರತಿಫಲಾಪೇಕ್ಷೆಯಿಂದ ಮಾಡಬಾರದು. ಇದಲ್ಲದೆ ಬಡವರಿಗೆ, ಅನಾಥರಿಗೆ, ಕೈಲಾಗದವರಿಗೆ ತನ್ನ ಕೈಲಾದ ಸಹಾಯ ಮಾಡುವುದು ಕರುಣಾದಾನ ಎನಿಸುತ್ತದೆ.

ಮೇಲೆ ತಿಳಿಸಿದ ಆರು ಕ್ರಿಯೆಗಳನ್ನು ಗೃಹಸ್ಥರು ಯಥಾಶಕ್ತಿ ಆಚರಿಸುವ



ಅಭ್ಯಾಸವನ್ನು ಮಾಡಬೇಕು. ಈ ಕ್ರಿಯೆಗಳಲ್ಲಿ ಶ್ರದ್ಧಾ, ಭಕ್ತಿ, ಆಸಕ್ತಿಯಿಂದ ಭಾವಸಹಿತವಾಗಿ ಸಹನೆಯಿಂದ ಬಾಳುವೆ ಮಾಡಬೇಕು.

# 4. ಅಷ್ಟ ಮೂಲಗುಣಗಳು

ಇಂದಿನ ಸಮಾಜದಲ್ಲಿ ಜೈನರ ಮನೆಯಲ್ಲಿ ಜನಿಸಿದ ಕಾರಣ 'ಜೈನ' ಎಂಬುದಾಗಿ ಕರೆಯಲಾಗುತ್ತದೆ ಮತ್ತು ಜಿನದೇವ, ಗುರು, ಧರ್ಮ, ಶಾಸ್ತ್ರಗಳನ್ನು ನಂಬಿ, ತಿಳಿದು ಆರಾಧಿಸುವವರನ್ನು ಜೈನರು ಎಂದು ಪರಿಗಣಿಸಲಾಗುವುದು. ಕೇವಲ ಜೈನ ಪರಿವಾರದಲ್ಲಿ ಜನಿಸಿದ ಕಾರಣದಿಂದಿಷ್ಟೇ ಯಾರೂ ಜೈನರಾಗಲಾರರು. ಆದರೆ ಯಾವ ವ್ಯಕ್ತಿ ಜೈನ ಧರ್ಮದ ನಿಯಮಗಳನ್ನೂ, ವಿಚಾರಗಳನ್ನು ಒಪ್ಪುವನೋ ಮತ್ತು ಅನುಸರಿಸುವನೋ ಅವನೇ ನಿಜವಾದ ಅರ್ಥದಲ್ಲಿ ಜೈನನೆಂದು ಕರೆಯಬೇಕು. ಜೈನ ಧರ್ಮದ ನಿಯಮಗಳನ್ನು ಒಪ್ಪದೆ ಅವುಗಳ ವಿರುದ್ಧ ನಡೆಯುವವರು ಜೈನರೆನಿಸಿಕೊಳ್ಳಲು ಯೋಗ್ಯರಾಗುವುದಿಲ್ಲ.

ಜೈನರು ಕೆಲವು ನೀತಿ ನಿಯಮಾನುಸರಣೆ ಮಾಡಬೇಕು. ಅವುಗಳಲ್ಲಿ ಅಷ್ಟಮೂಲ ಗುಣಗಳ ಪಾಲನೆಯನ್ನೂ ಮಾಡಬೇಕು. ಅಷ್ಟ ಮೂಲ ಗುಣಗಳು ಈ ರೀತಿ ಇವೆ :-

1. ನಿತ್ಯ ದೇವದರ್ಶನ ಮಾಡುವುದು. 2. ರಾತ್ರಿ ಊಟ ಮಾಡದಿರುವುದು, 3. ಶೋಧಿಸಿದ ನೀರನ್ನುಪಯೋಗಿಸುವುದು, 4. ಮದ್ಯಪಾನ ತ್ಯಾಗ. 5. ಮಾಂಸಾಹಾರ ಮಾಡದಿರುವುದು. 6. ಜೀವದಯೆಯನ್ನು ಪಾಲಿಸುವುದು. 7. ಐದು ಔದುಂಬರ ಫಲಗಳನ್ನು ತಿನ್ನದಿರುವುದು, ಹಾಗೂ 8. ಮಧು (ಜೇನುತುಪ್ಪ) ತಿನ್ನದಿರುವುದು.

ಈಗ ಒಂದೊಂದರ ಕುರಿತು ವಿವೇಚನೆ ಮಾಡೋಣ.

**1. ನಿತ್ಯ ದೇವದರ್ಶನ ಮಾಡುವುದು.**

ವೀತರಾಗನೂ, ಸರ್ವಜ್ಞನೂ, ಹಿತೋಪದೇಶಿಯೂ ಆದ ಶ್ರೀ

ಜಿನೇಂದ್ರದೇವರ ದರ್ಶನ ಮಾಡಬೇಕು. ಇದು ನಮ್ಮ ಪೂರ್ವಾರ್ಜಿತ ಪುಣ್ಯೋದಯದಿಂದ ಒದಗಿದೆ ಎಂದು ತಿಳಿದು ಪುಳಕಿತನಾಗಿ ಆನಂದ ಹೊಂದಬೇಕು. ದೇವರ ಗುಣಗಳನ್ನು ನೆನಪು ಮಾಡಿಕೊಂಡು ಪೂಜಿಸುವುದರಿಂದ ಸಮ್ಯಕ್ತ್ವ ಉತ್ಪನ್ನವಾಗುತ್ತದೆ. ನಿತ್ಯಪೂಜೆ, ದೇವದರ್ಶನದಿಂದ ಸಮ್ಯಕ್ತ್ವದ ನಿರ್ಮಲತೆ, ಧರ್ಮದಲ್ಲಿ ಶ್ರದ್ಧೆ, ಚಿತ್ತ ಶುದ್ಧಿ, ಧರ್ಮದ ಕಡೆಗೆ ಆಸಕ್ತಿ ಹೆಚ್ಚುತ್ತದೆ. ಜಿನೇಂದ್ರ ದೇವನ ದರ್ಶನಮಾತ್ರದಿಂದ ಉತ್ತಮ ಫಲವಾದ ಮುಕ್ತಿಯು ಪ್ರಾಪ್ತವಾಗುತ್ತದೆ. ಆದುದರಿಂದ ಮೋಕ್ಷರೂಪಿ ಮಹಾನಿಧಿಯನ್ನು ದೊರಕಿಸಿಕೊಡುವ ದೇವದರ್ಶನ, ಪೂಜೆ, ಸ್ತೋತ್ರ, ಜಪಗಳನ್ನು ಪ್ರತಿಯೊಬ್ಬ ಜೈನನು ತನ್ನ ಕಲ್ಯಾಣಕ್ಕಾಗಿ ಯೋಗ್ಯತಾನುಸಾರವಾಗಿ ಪ್ರತಿನಿತ್ಯ ಮಾಡಬೇಕು. ಅಷ್ಟವಿಧಾರ್ಚನಾ ದ್ರವ್ಯಗಳಿಂದ ಪೂಜಿಸಬೇಕು. ಇವನ್ನು ಅವರವರ ಶಕ್ತ್ಯಾನುಸಾರ ಮಾಡಲೇಬೇಕು. ಪುಣ್ಯಾರ್ಜನೆಗೆ ಮತ್ತು ಸುಖ ಶಾಂತಿಗಾಗಿ ಗೃಹಸ್ಥನು ಜಿನಪೂಜೆ ಮಾಡಬೇಕು.

## 2. ರಾತ್ರಿ ಊಟ ಮಾಡದಿರುವುದು.

ಜೈನ ಧರ್ಮದಲ್ಲಿ ರಾತ್ರಿ ಊಟ ಮಾಡುವುದನ್ನು ಮಹಾಪಾಪವೆಂದು ತಿಳಿಯಲಾಗಿದೆ. ರಾತ್ರಿ ಊಟ ಮಾಡುವುದರಿಂದ ಹಿಂಸೆ ಮತ್ತು ವಿಶೇಷವಾದ ನಿರ್ದಯತೆಯಾಗುತ್ತದೆ. ರಾತ್ರಿ ಅಡಿಗೆ ಮಾಡುವುದರಿಂದ ಅಸಂಖ್ಯ ಜೀವಿಗಳ ಹಿಂಸೆಯಾಗುತ್ತದೆ. ಅದೇ ರೀತಿ ಊಟ ಮಾಡುವಾಗಲೂ ಅಸಂಖ್ಯ ಜೀವಿಗಳ ಹಿಂಸೆಯಾಗುತ್ತದೆ. ವಿಜ್ಞಾನದ ದೃಷ್ಟಿಯಿಂದಲೂ ಮಲಗುವ ಮುಂಚೆ ಕನಿಷ್ಠ ಪಕ್ಷ 4 ಗಂಟೆ ಮುಂಚಿತವಾಗಿ ಊಟ ಮಾಡಿರಬೇಕು. ಆಗಲೇ ಆರೋಗ್ಯವಾಗಿರಲು ಸಾಧ್ಯ. ಇದರಿಂದ ರಾತ್ರಿ ಭೋಜನ ತ್ಯಾಗ ಮಾಡಿದವರು ಆರೋಗ್ಯವಂತರಾಗಿರುತ್ತಾರೆ. ಮತ್ತು ಅಹಿಂಸಾಪಾಲನೆಯೂ ಆಗುತ್ತದೆ.

## 3. ನೀರನ್ನು ಶೋಧಿಸಿ ಉಪಯೋಗಿಸುವುದು.

ವಿಜ್ಞಾನದಿಂದಲೂ ಈಗ ಸಿದ್ಧವಾಗಿರುವ ವಿಷಯವೆಂದರೆ ಶೋಧಿಸದ ನೀರಿನ ಪ್ರತಿಯೊಂದು ಹನಿಯಲ್ಲಿ 36450 ಸೂಕ್ಷ್ಮ ಜೀವಿಗಳಿರುತ್ತವೆ. ನೀರನ್ನು ಶೋಧಿಸದೆ ಕುಡಿಯುವುದರಿಂದ ಅಸಂಖ್ಯ ಜೀವಿಗಳ ಹಿಂಸೆಯಾಗುವುದೆಂದು ಜೈನಾಚಾರ್ಯರು ಹೇಳಿದ್ದಾರೆ. ನೀರನ್ನು ಶೋಧಿಸದೆ ಕುಡಿಯುವುದರಿಂದ



ಆರೋಗ್ಯವೂ ಕೆಡುತ್ತದೆ.

ಶುದ್ಧವಾದ ದಪ್ಪನೆಯ ಬಿಳಿ ಬಟ್ಟೆಯನ್ನು ತೆಗೆದುಕೊಂಡು ಅದರ ಎರಡು ಮಡಿಕೆ ಮಾಡಿ ನೀರನ್ನು ಶೋಧಿಸಬೇಕು. ಹಳೆಯ ಜೀರ್ಣವಾದ, ಕೊಳೆಯಾದ ಬಟ್ಟೆಯನ್ನು ನೀರು ಶೋಧಿಸಲು ಉಪಯೋಗಿಸಬಾರದು. ಶೋಧಿಸಿದ ನೀರು 48 ನಿಮಿಷಗಳವರೆಗೆ ಜೀವರಹಿತವಾಗಿರುತ್ತದೆ. ನಂತರ ಪುನಃ ಈ ನೀರಿನಲ್ಲಿ ತ್ರಸ ಜೀವಗಳು ಉತ್ಪನ್ನವಾಗುತ್ತವೆ. ಆದುದರಿಂದ 48 ನಿಮಿಷಗಳ ನಂತರ ಮತ್ತೆ ನೀರನ್ನು ಶೋಧಿಸಬೇಕು ನಂತರ ಅದರಲ್ಲಿ ಲವಂಗ, ಏಲಕ್ಕಿ ಹಾಕುವುದರಿಂದ ನೀರು ಪ್ರಾಸುಕ (ಶುದ್ಧ)ವಾಗುತ್ತದೆ. ಈ ನೀರನ್ನು 6 ಗಂಟೆಗಳವರೆಗೆ ಉಪಯೋಗಿಸಬಹುದು. ಶೋಧಿಸಿದ ನೀರನ್ನು ಕುದಿಸಿದರೆ 24 ಗಂಟೆಗಳವರೆಗೆ ಶುದ್ಧವಿರುತ್ತದೆ. ಶೋಧಿಸಿದ ಬಟ್ಟೆಯಲ್ಲಿರುವ ಜೀವಿಗಳನ್ನು ಸುರಕ್ಷಿತವಾಗಿ ನೀರನ್ನು ಎಲ್ಲಿಂದ (ಜಲಾಶಯ, ಬಾವಿ) ತರಲಾಗಿತ್ತೋ ಈ ನೀರಿನಲ್ಲಿಯೇ ಬಿಡಬೇಕು. ವೈದ್ಯರೂ ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಶೋಧಿಸಿದ ನೀರನ್ನು ಸೇವಿಸಿದರೆ ಮಲೇರಿಯಾ ಜ್ವರ ಮುಂತಾದ ಭಯಂಕರ ರೋಗಗಳು ಉಂಟಾಗುತ್ತವೆ. ಇದರಿಂದ ಪ್ರತಿಯೊಬ್ಬ ಶ್ರಾವಕ, ಬುದ್ಧಿವಂತ ಮನುಷ್ಯನ ಕರ್ತವ್ಯವೆಂದರೆ ಶಾಸ್ತ್ರದಲ್ಲಿ ಹೇಳಿರುವಂತೆ ನೀರನ್ನು ಶೋಧಿಸಿ ಕುಡಿಯಬೇಕು. ನಲ್ಲಿಯ ನೀರನ್ನು ಉಪಯೋಗಿಸುವವರು ನೀರು ಶೋಧಿಸಲು ಉಪಯೋಗಿಸಿದ ಬಟ್ಟೆಯಲ್ಲಿನ ಜೀವಗಳನ್ನು ಯಾವುದಾದರೂ ಗಿಡದ ನೆರಳಿನಲ್ಲಿ ಅಥವಾ ಹತ್ತಿರದಲ್ಲಿ ಬಾವಿ ಇದ್ದರೆ ಅದರಲ್ಲಿ ಬಿಡಬಹುದು.

## 4. ಮದ್ಯಪಾನ ತ್ಯಾಗ.

ಹೆಂಡ, ಬ್ರಾಂದಿ, ಸಾರಾಯಿ ಕುಡಿದರೆ ಅಮಲು ಬಂದು ಬುದ್ಧಿ ಕೆಡುತ್ತದೆ. ಮದ್ಯವನ್ನು ತಯಾರಿಸಲು ಬೆಲ್ಲ (ಮದ್ಯಸಾರ) ದ್ರಾಕ್ಷಿ, ಬಾಳೆಹಣ್ಣು ಇತ್ಯಾದಿ ಅನೇಕ ವಸ್ತುಗಳನ್ನು ಬಹಳ ದಿನಗಳವರೆಗೆ ಕೊಳೆಯಿಸಲಾಗುವುದು. ಇದರಿಂದ ಅಸಹ್ಯವಾದ ದುರ್ಗಂಧವು ಉಂಟಾಗುತ್ತದೆ. ಮದ್ಯ ತಯಾರಿಕೆಯಲ್ಲಿ ಅಸಂಖ್ಯ ತ್ರಸ ಮತ್ತು ಸ್ಥಾವರ ಜೀವಿಗಳ ಹಿಂಸೆಯಾಗುತ್ತದೆ. ಮದ್ಯಪಾನ ಮಾಡುವುದರಿಂದ ಆಯಾಸ, ಕಂಪನ, ಬೆವರು, ಮೂರ್ಛೆ, ಕಣ್ಣುಗಳು ಕೆಂಪಾಗುವುದು ಮತ್ತು ಬುದ್ಧಿನಾಶ ಮೊದಲಾದವು ಮುಂತಾದ ದೋಷಗಳ ಜೊತೆಗೆ ಮಾನಸಿಕ ಶಕ್ತಿಯೂ ನಾಶವಾಗುತ್ತದೆ. ಇಂಥ ಸ್ಥಿತಿಯಲ್ಲಿ ಧರ್ಮಪಾಲನೆ ಮಾಡುವುದು ಅಸಂಭವವಾಗಿ

ಬಿಡುತ್ತದೆ. ಮದ್ಯಪಾನ ಮಾಡುವವನು ಈ ಲೋಕದಲ್ಲಿ ಮಹಾ ದುಃಖಿಯಾಗಿರುತ್ತಾನೆ ಮತ್ತು ಸತ್ತ ಮೇಲೆ ನರಕಗತಿಯಲ್ಲಿ ಜನ್ಮ ಪಡೆದು ಅತಿ ತೀವ್ರವಾದ ಕಷ್ಟಗಳನ್ನು ಅನುಭವಿಸುತ್ತಾರೆ. ಅದರಂತೆಯೇ ಚರಸ್, ಬೀಡಿ, ಸಿಗರೇಟ್, ಚುಟ್ಟಾ, ಗಾಂಜಾ, ಹೊಗೆಸೊಪ್ಪು (ತಂಬಾಕು) ಅಫೀಮು ಮುಂತಾದ ವಸ್ತುಗಳೂ ಮಾದಕ ಪದಾರ್ಥಗಳಾಗಿದ್ದು ಅವುಗಳ ಸೇವನೆಯಿಂದಲೂ ಜೀವಿಯು ದುಃಖವನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ಇವನ್ನು ಸೇವಿಸಬಾರದು.

**5. ಮಾಂಸಾಹಾರ ಮಾಡದಿರುವುದು.**

ಪಶು, ಪಕ್ಷಿ ಮುಂತಾದ ಜೀವಿಗಳನ್ನು ಕೊಂದು ಮಾಂಸವನ್ನು ಪಡೆಯಲಾಗುತ್ತದೆ. ಇದರ ಸ್ಪರ್ಶದಿಂದ, ತಿನ್ನುವುದರಿಂದ, ಮಾನಸಿಕ ಮತ್ತು ದೈಹಿಕ ಸ್ಥಿತಿ ಕೆಡುತ್ತದೆ. ಮಾಂಸವು ಒಣಗಿರಲಿ ಅಥವಾ ಬೇಯಿಸಿದ್ದಾಗಿರಲಿ ಅದರಲ್ಲಿ ಪ್ರತಿಕ್ಷಣ ಅಸಂಖ್ಯ ತ್ರಸ ಜೀವಿಗಳ ಉತ್ಪತ್ತಿಯಾಗಿರುತ್ತದೆ. ಮೀನು, ಮೊಟ್ಟೆಗಳೂ ಮಾಂಸಹಾರವೇ ಆಗಿದೆ, ಮಾಂಸ ತಿನ್ನುವರ ಸ್ವಭಾವವು ನಿರ್ದಯ ಕಠೋರವಾಗಿದ್ದು ಆತ ಸರ್ವಥಾ ಧರ್ಮಧಾರಣೆ ಮಾಡಲು ಯೋಗ್ಯವಾಗುವುದಿಲ್ಲ. ಮಾಂಸಭಕ್ಷಣೆ ಮಾಡುವವನು ಇಹಲೋಕದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಯಲ್ಲಿ ಎಣಿಕೆಯಾಗುವುದಿಲ್ಲ (ಸೇರುವುದಿಲ್ಲ). ಪರಲೋಕದಲ್ಲಿ ಅನೇಕ ಭಯಂಕರ ದುಃಖಿಗಳನ್ನು ಅನುಭವಿಸಬೇಕಾಗುವುದು. ನರಕದಲ್ಲಿ ಕಾಯ್ದ ಕಬ್ಬಿಣದ ಚೆಂಡುಗಳನ್ನು ಬಾಯಿಗೆ ತುರುಕಿ ಹರಿದು ತಿನ್ನಿಸಲಾಗುತ್ತದೆ. ಹಾಗೆಯೇ ಚರ್ಮದ ಚೀಲಗಳಲ್ಲಿ ಶೇಖರಿಸಿದ ನೀರು, ಎಣ್ಣೆ, ತುಪ್ಪ ಮತ್ತು ಹಿಟ್ಟುಗಳನ್ನು ತಿನ್ನಬಾರದು. ಚರ್ಮದಿಂದ ತಯಾರಿಸಿದ ಯಾವ ವಸ್ತುಗಳೂ ಉಪಯೋಗಿಸಲು ಯೋಗ್ಯವಲ್ಲ.

**6. ಜೀವ ದಯೆ (ಪ್ರಾಣಹಿಂಸೆ ಮಾಡದಿರುವುದು)**

ಇಂದಿನ ಜಗತ್ತಿನಲ್ಲಿ ಪ್ರತಿಯೊಬ್ಬರೂ ನನ್ನ ಪ್ರಾಣ ಉಳಿಯಲಿ ಎಂದು ಬಯಸುತ್ತಾರೆ. ನಾವು ನಮ್ಮ ಜೀವ ಉಳಿಯಬೇಕೆನ್ನುವಂತೆಯೇ ಏಕೇಂದ್ರಿಯದಿಂದ ಮೊದಲಾಗಿ ಪಂಚೇಂದ್ರಿಯವರೆಗಿನ ಎಲ್ಲಾ ಪ್ರಾಣಿಗಳಿಗೂ ತಮ್ಮ ತಮ್ಮ ಪ್ರಾಣವು ಪ್ರಿಯರಾಗಿರುತ್ತದೆ. ಯಾರಿಗಾದರೂ ಶರೀರದ ಯಾವುದೇ ಭಾಗಕ್ಕೆ ಸ್ವಲ್ಪವೇ ಗಾಯ ಉಂಟಾದರೂ ಅವರು ಸಹಿಸಲಾರರು. ಇದೇ ರೀತಿ ನೊಣ, ಸೊಳ್ಳೆ, ಪಶು ಗಿಡ-ಮರ, ಮನುಷ್ಯ ಮುಂತಾದ ಎಲ್ಲಾ ಜೀವಿಗಳು ದುಃಖ ಅನುಭವಿಸುವುದನ್ನು



ಇಚ್ಛೆ ಪಡುವುದಿಲ್ಲ. ಆದ್ದರಿಂದ ಪ್ರತಿಯೊಂದು ಪ್ರಾಣಿಯನ್ನು ರಕ್ಷಿಸಬೇಕು. ಅಹಿಂಸಾ ಪರಮೋಧರ್ಮ ವೆಂಬುದು ಜೈನ ಧರ್ಮದ ಬುನಾದಿ (ತಳಪಾಯ), ಪ್ರಾಣಿ ಹಿಂಸೆ ಮಹಾ ಪಾಪ.

**7. ಐದು ಔದುಂಬರ ಫಲಗಳನ್ನು ತಿನ್ನದೇ ಇರುವುದು.**

ಯಾವ ಹಾಲುಬರುವ ವೃಕ್ಷಗಳ ಕಾಂಡ ಕೊಂಬೆಯೊಳಗಿನಿಂದ ಒಡಮೂಡಿ ಬಂದು ಫಲಕೊಡುವವೋ ಅವುಗಳನ್ನು ಉದುಂಬರ ಎಂದು ಕರೆಯಲಾಗಿದ್ದು ಅವುಗಳ ಫಲಗಳನ್ನು ಔದುಂಬರ ಫಲಗಳೆಂದು ಕರೆಯಲಾಗಿದೆ. ಅತ್ತಿ, ಅರಳಿ, ಆಲ, ಬಸರಿ, ಮತ್ತು ಗೋಣಿ ಮರಗಳು ಈ ವರ್ಗದಲ್ಲಿ ಬರುತ್ತವೆ. ಯಾವ ರೀತಿ ಮದ್ಯಪಾನ ಮಾಡುವವರಿಗೆ, ಮಾಂಸಾಹಾರ ಮಾಡುವವರಿಗೆ ಸ್ವಲ್ಪವೂ ದಯಾಪಾಲನೆ ಆಗುವುದಿಲ್ಲವೋ ಅದೇ ರೀತಿಯಲ್ಲಿ ಪಂಚ ಔದುಂಬರ ಫಲಗಳನ್ನು ತಿನ್ನುವುದರಿಂದ ಅಹಿಂಸಾ ಧರ್ಮ, ಜೈನಧರ್ಮ ಪಾಲನೆ ಸಾಧ್ಯವಾಗುವುದಿಲ್ಲ. ಇದಲ್ಲದೆ ಯಾವ ಮರಗಳಿಂದ ಕಡಿದರೆ ಹಾಲು ಬರುವುದೋ, ಯಾವ ವೃಕ್ಷಗಳ ಹಣ್ಣುಗಳಲ್ಲಿ ತ್ರಸ ಜೀವಿಗಳು ಉತ್ಪತ್ತಿಯಾಗುವುದೋ ಅಂತಹ ಎಲ್ಲ ಹಣ್ಣುಗಳನ್ನು ತ್ಯಾಗ ಮಾಡಬೇಕು. ಇದೇ ಪ್ರಕಾರ ಕೊಳೆತ (ಹುಳುಬಿದ್ದ) ಆಹಾರ, ಧಾನ್ಯ ಸಹ ತಿನ್ನಲು ಯೋಗ್ಯವಲ್ಲ. ಇವುಗಳಲ್ಲಿಯೂ ತ್ರಸಜೀವಿಗಳು ಉತ್ಪನ್ನವಾಗಿರುತ್ತವೆ ಯಾದ್ದರಿಂದ ಪಂಚ ಔದುಂಬರ ಫಲಗಳನ್ನು ತಿನ್ನಬಾರದು.

**8. ಮಧು (ಜೇನುತುಪ್ಪ) ತ್ಯಾಗ.**

ಮಧುವೆಂದರೆ ಜೇನು ನೊಣಗಳಿಂದ ಸಂಗ್ರಹಿಸಲ್ಪಟ್ಟ ಸಿಹಿರಸ. ಜೇನು ನೊಣಗಳು ಇದನ್ನು ಬೇರೆ ಬೇರೆ ಹೂವುಗಳಿಂದ ಹೀರಿ ತರುತ್ತದೆ. ಇದನ್ನು ಉಗುಳಿ ತಮ್ಮ ಗೂಡಿನಲ್ಲಿ ಶೇಖರಿಸುತ್ತವೆ. ಇವುಗಳು ಅಲ್ಲಿಯೇ ಇರುವುದಲ್ಲದೆ ಅದರಲ್ಲಿಯೇ ಮೊಟ್ಟೆ ಇರಿಸುತ್ತವೆ. ಭಿಲ್ಲರು ಮುಂತಾದವರು ಈ ಜೇನು ಗೂಡುಗಳನ್ನು ಕಿತ್ತು ಅದರಲ್ಲಿರುವ ಮೊಟ್ಟೆ ಮರಿ ಸಮೇತ ಹಿಂಡಿ ಜೇನನ್ನು ತೆಗೆಯುತ್ತಾರೆ. ಇದರಲ್ಲಿ ಪ್ರತೀಕ್ಷಣ ಅಸಂಖ್ಯ ಜೀವಿಗಳ ಉತ್ಪತ್ತಿಯಾಗುತ್ತಿರುತ್ತದೆ. ಇತರ ಮತಗಳಲ್ಲಿಯೂ ಇದರ ಸೇವನೆಯನ್ನು ನಿಷೇಧ ಮಾಡಲಾಗಿದೆ. ಜೇನು ಸಹ ಅಭಕ್ಷ್ಯ ಮತ್ತು ಸರ್ವಥಾ ತ್ಯಾಗ ಮಾಡಲು ಯೋಗ್ಯವಿದೆ.

ತಾವು ತಮ್ಮ ಮನದಲ್ಲಿ ಈ ನಿಯಮ ಗ್ರಹಣ ಮಾಡಿದರೆ ಮತ್ತು

ಅವುಗಳನ್ನು ಪಾಲಿಸಿದರೆ ಆಗ ತಾವು ತಪ್ಪದೇ ಜೈನ ಧರ್ಮದ ಅನುಯಾಯಿ ಎಂದೆನ್ನಿಸಿಕೊಳ್ಳುವಿರಿ. ಧರ್ಮವು ನಮಗೆ ಮೊಟ್ಟೆ, ಮಾಂಸ ಇತ್ಯಾದಿ ಅಭಕ್ಷ್ಯವನ್ನು ತಿನ್ನಲು ಯಾವಾಗಲೂ ಅನುಮತಿ ಕೊಡುವುದಿಲ್ಲ. ಅಹಿಂಸೆಯ ಬಹಳ ಸೂಕ್ಷ್ಮ ವಿವೇಚನೆ ಇದು. ಇದನ್ನು ಜೈನ ಗ್ರಂಥದಲ್ಲಿ ಮಾತ್ರ ವಿಶೇಷ ರೀತಿಯಲ್ಲಿ ನೋಡಬಹುದು. ನಾವು ಮತ್ತೊಬ್ಬರಿಗೆ ಕಷ್ಟ ಕೊಡದೆ ಸುಖವನ್ನೂ ಉಪಕಾರವನ್ನು ಉಂಟು ಮಾಡುವುದನ್ನೇ ಅಭ್ಯಾಸವಾಗಿಟ್ಟುಕೊಳ್ಳಬೇಕು. ಇದೇ ಪವಿತ್ರವಾದ ಅಹಿಂಸೆಯಾಗಿದೆ. ಭಗವಾನ್ ಮಹಾವೀರರು ಮಧು, ಮದ್ಯ, ಮಾಂಸ ತ್ಯಾಗ ಮತ್ತು ಪಂಚ ಔದುಂಬರ ಫಲ ತ್ಯಾಗವೂ ಅಷ್ಟ ಮೂಲಗುಣವೆಂದು ಹೇಳಿದ್ದಾರೆ. ಸಿದ್ಧಾಂತವೂ 'ನೀನೂ ಇರು ಮತ್ತು ಇತರರೂ ಇರಲುಬಿಡು' ಎಂಬುದೇ ಆಗಿದೆ. ನಿಜವಾದ ಶ್ರಾವಕನೆನಿಸಿಕೊಳ್ಳಬೇಕಾದರೆ ನಿತ್ಯವೂ ಅಷ್ಟ ಮೂಲ ಗುಣಗಳ ಪಾಲನೆ ಮಾಡಬೇಕು.

# 5. ಪಂಚಕಲ್ಯಾಣಗಳು

ಕರ್ಮಶತ್ರುಗಳನ್ನು ಜಯಿಸಿದವರು ಜಿನರು. ಇವರು ಕೇವಲ ಜ್ಞಾನ ಹೊಂದಿರುತ್ತಾರೆ. ಇವರಿಗೆ ಕೇವಲಿಗಳನ್ನುತ್ತಾರೆ. ಇವರಲ್ಲಿ ವಿಶೇಷ ಕೇವಲಿಗಳೆಂದೂ, ಸಾಮಾನ್ಯ ಕೇವಲಿಗಳೆಂದೂ ಎರಡುವಿಧ. ವಿಶೇಷ ಕೇವಲಿಗಳೆಂಬ ಪುಣ್ಯಾತ್ಮರಿಗೆ ಪಂಚ ಕಲ್ಯಾಣಗಳಾಗುತ್ತವೆ. ಇವರನ್ನು ತೀರ್ಥಂಕರರೆನ್ನುತ್ತಾರೆ.

ಆ ಪಂಚಕಲ್ಯಾಣಗಳೆಂದರೇನೆಂಬುದನ್ನು ಈಗ ತಿಳಿಯೋಣ. ಗರ್ಭಾವತರಣ ಕಲ್ಯಾಣ, ಜನ್ಮಾಭಿಷೇಕ ಕಲ್ಯಾಣ, ದೀಕ್ಷಾ ಗ್ರಹಣ ಕಲ್ಯಾಣ, ಕೇವಲ ಜ್ಞಾನ ಕಲ್ಯಾಣ ಮತ್ತು ನಿರ್ವಾಣ ಕಲ್ಯಾಣವೆಂಬ ಇವುಗಳಿಗೆ ಪಂಚಕಲ್ಯಾಣಗಳೆಂದು ಹೆಸರು.

ತೀರ್ಥಂಕರರು ಜಿನಮಾತೆಯ ಗರ್ಭಕ್ಕೆ ಅವತರಿಸಿದಂದಿನಿಂದ ಹಿಡಿದು ಮುಕ್ತಿಯನ್ನು ಪಡೆಯುವವರೆಗಿನ ಗರ್ಭ, ಜನ್ಮ, ದೀಕ್ಷೆ, ಕೇವಲ ಜ್ಞಾನ ಮತ್ತು ಮೋಕ್ಷವೆಂಬ ಈ ಐದು ಸಂದರ್ಭಗಳಲ್ಲಿ ದೇವೇಂದ್ರನು ತನ್ನ ಪರಿವಾರದೊಂದಿಗೆ ಬಂದು ಪೂಜಿಸುತ್ತಾನೆ. ಇವುಗಳಿಗೆ ಪಂಚಕಲ್ಯಾಣಗಳೆಂದು ಹೆಸರು. ಇವುಗಳ ವಿವರಣೆಯನ್ನು ಗಮನಿಸೋಣ. ಇವೆಲ್ಲ ತೀರ್ಥಂಕರರ ಪುಣ್ಯ ವಿಶೇಷದಿಂದ ಆಗುತ್ತವೆ.



## 1. ಗರ್ಭಾವತರಣ ಕಲ್ಯಾಣ.

ತೀರ್ಥಂಕರನಾಗುವ ಪವಿತ್ರಾತ್ಮವು ಜಿನಮಾತೃವಿನ ಗರ್ಭಕ್ಕೆ ಬರುವ ಆರು ತಿಂಗಳ ಮೊದಲಿಂದಲೇ ಕುಬೇರನು ಅರಮನೆಯ ಅಂಗಳದಲ್ಲಿ ರತ್ನದ ಮಳೆ ಕರೆಯಲು ಆರಂಭಿಸುತ್ತಾನೆ. ಆಗ ರಾಜ್ಯದಲ್ಲಿ ಎಲ್ಲೆಲ್ಲೂ ಸುಭಿಕ್ಷವು ಕಂಡುಬರುತ್ತದೆ. ನಗರವು ಮಂದಿರಗಳು, ಉಪವನಗಳು, ಸೌಧಗಳು ಮೊದಲಾದವುಗಳಿಂದ ಅಲಂಕರಿಸಿ ಶೋಭಾಯಮಾನವಾಗಿರುತ್ತದೆ. ಶ್ರೀ ಹ್ರೀ ಮೊದಲಾದ ಅಷ್ಟದಿಕ್ಕನ್ನಿಕೆಯರು ಬಂದು ಜಿನ ಜನನಿಯನ್ನು ಸೇವೆ ಮಾಡಿ ಉಪಚರಿಸುತ್ತಾರೆ. ಜಿನ ಜನನಿಯು ಬೆಳಗಿನ ಜಾವದಲ್ಲಿ ಹದಿನಾರು ಶುಭ ಸ್ವಪ್ನಗಳನ್ನು ಕಾಣುತ್ತಾಳೆ. ಆನೆ, ವೃಷಭ, ಸಿಂಹ, ಲಕ್ಷ್ಮಿ, ಹೂವಿನಮಾಲೆ, ಚಂದ್ರ, ಸೂರ್ಯ, ಎರಡು ಚಿನ್ನದ ಕಲಶಗಳು, ಎರಡು ಮೀನುಗಳು, ತಾವರೆಯ ಕೊಳ, ಸಮುದ್ರ, ಸಿಂಹಾಸನ, ದೇವತೆಗಳ ವಿಮಾನ, ನಾಗ ಭವನ, ರತ್ನಗಳ ರಾಶಿ, ಬೆಂಕಿ ಇವೇ ಆ ಶುಭ ಸ್ವಪ್ನಗಳು. ಆ ಸ್ವಪ್ನಗಳಿಂದ ಮೂರು ಲೋಕಗಳಿಗೂ ಒಡೆಯನಾಗುವ ಸುಪುತ್ರ ಜನಿಸುವನೆಂಬುದು ಅವಳಿಗೆ ಪತಿಯಿಂದ ತಿಳಿದು ಬರುತ್ತದೆ. ಆ ಸಮಯದಲ್ಲಿ ಓರ್ವ ಪುಣ್ಯಾತ್ಮನು ಮಾತೃವಿನ ಗರ್ಭಕ್ಕೆ ಬಂದು ಸೇರುತ್ತಾನೆ. ಆಗ ದೇವೇಂದ್ರನು ಬಂದು ಗರ್ಭಾವತರಣ ಪೂಜಾ ಮಹೋತ್ಸವವನ್ನು ದೇವತೆಗಳೊಂದಿಗೆ ಆಚರಿಸುತ್ತಾನೆ. ಇದಕ್ಕೆ "**ಗರ್ಭಾವತರಣ ಕಲ್ಯಾಣ**"ವೆಂದು ಹೆಸರು. ಆ ಸಮಯದಿಂದಲೇ ಆ ಪವಿತ್ರವಾದ ಪುಣ್ಯಾತ್ಮನು **ತೀರ್ಥೇಶ** ಎನಿಸುತ್ತಾನೆ. ಇವರೇ ಮುಂದೆ ಜಿನೇಶರಾಗುತ್ತಾರೆ.

## 2. ಜನ್ಮಾಭಿಷೇಕ ಕಲ್ಯಾಣ.

ಜಿನ ಮಾತೃವಿನ ಗರ್ಭದಲ್ಲಿ ಜಿನೇಶ್ವರರು ಅವತರಿಸುವಾಗ ಅವರಿಗೆ ಮತಿ, ಶ್ರುತ ಮತ್ತು ಅವಧಿಜ್ಞಾನಗಳಿರುತ್ತವೆ. ಜಿನ ಶಿಶುವು ಹುಟ್ಟಿದ ಕೂಡಲೇ ದೇವೇಂದ್ರನ ಸಿಂಹಾಸನವು ಕಂಪಿಸುತ್ತದೆ. ಆಗ ಅವನು ಪರಿವಾರದೊಂದಿಗೆ ಶ್ರೇಷ್ಠವಾದ ಐರಾವತವೆಂಬ ಆನೆಯನ್ನು ತಂದು ಜಿನ ಬಾಲಕನಿದ್ದಲ್ಲಿಗೆ ಬರುತ್ತಾನೆ. ಜಯ ಜಯ ಧ್ವನಿಯನ್ನು ಮಾಡುತ್ತಾ ದೇವತೆಗಳೊಂದಿಗೆ ನಗರವನ್ನು ಮೂರು ಪ್ರದಕ್ಷಿಣೆ ಮಾಡುತ್ತಾನೆ. ಅನಂತರ ಶಚೀದೇವಿ ಜಿನ ಮಾತೃವಿಗೆ ಮಾಯಾನಿದ್ರೆಯನ್ನು ಬರಿಸಿ, ಅವಳ ಪಕ್ಕದಲ್ಲಿ ಒಂದು ಮಾಯ ಶಿಶುವನ್ನಿಟ್ಟು, ಜಿನ ಶಿಶುವನ್ನೆತ್ತಿಕೊಂಡು ಬಂದು ದೇವೇಂದ್ರನಿಗೆ ಕೊಡುತ್ತಾಳೆ. ದೇವೇಂದ್ರನು

ತನ್ನ ಸಹಸ್ರ ಕಣ್ಗಳಿಂದ ಆ ಶಿಶುವನ್ನು ನೋಡಿ ಆನಂದಪಟ್ಟು, ಐರಾವತವನ್ನೇರಿ ತನ್ನ ತೊಡೆಯ ಮೇಲೆ ಕುಳ್ಳರಿಸಿಕೊಳ್ಳುತ್ತಾನೆ. ಆಗ ಈಶಾನೇಂದ್ರನು ಛತ್ರಿಯನ್ನು ಹಿಡಿಯುತ್ತಾನೆ. ಮೂರನೆಯ ಮತ್ತು ನಾಲ್ಕನೆಯ ಸ್ವರ್ಗದ ಇಂದ್ರರು ಚಾಮರವನ್ನು ಬೀಸುತ್ತಾರೆ. ದೇವತೆಗಳು ಜಯ ಜಯಕಾರದ ನಡುವೆ ಉತ್ಸವದಲ್ಲಿ ಮೇರುಪರ್ವತಕ್ಕೆ ಒಯ್ಯುತ್ತಾರೆ. ಅದರಲ್ಲಿರುವ ರತ್ನ ಖಚಿತವಾದ ಪಾಂಡುಕ ಶಿಲೆಯ ಮೇಲೆ ಜಿನ ಶಿಶುವನ್ನು ಕುಳ್ಳರಿಸುತ್ತಾರೆ. ಆಗ ಮಂಗಲವಾದ್ಯಗಳ ಧ್ವನಿಯಾಗುತ್ತದೆ. ದೇವನರ್ತಕಿಯರು ನರ್ತಿಸುತ್ತಾರೆ. ದೇವತೆಗಳು ಕ್ಷೀರ ಸಮುದ್ರದಿಂದ 1008 ಕಲಶಗಳಲ್ಲಿ ಜಲವನ್ನು ತುಂಬಿ ತರುತ್ತಾರೆ. ಸೌಧರ್ಮೇಂದ್ರ ಮತ್ತು ಈಶಾನೇಂದ್ರರು ಆ ಕಲಶಗಳಿಂದ ಜಿನ ಬಾಲಕನಿಗೆ ಅಭಿಷೇಕ ಮಾಡುತ್ತಾರೆ. ಅನಂತರ ಜಿನ ಶಿಶುವನ್ನು ವಸ್ತ್ರಾಭರಣಗಳಿಂದ ಅಲಂಕರಿಸಿ ನಗರಕ್ಕೆ ಬಂದು ಜಿನ ಮಾತೃವಿನ ಬಳಿ ಮಲಗಿಸಿ ಹೊರಟು ಹೋಗುತ್ತಾರೆ. ಈ ಸಂದರ್ಭದಲ್ಲಿ ಮಾಡುವ ಈ ಪೂಜೋತ್ಸವಕ್ಕೆ ''**ಜನ್ಮಾಭಿಷೇಕ ಕಲ್ಯಾಣ**'' ವೆಂದು ಹೆಸರು.

### 3. ದೀಕ್ಷಾ ಗ್ರಹಣ ಕಲ್ಯಾಣ.

ಇದನ್ನು ''ಪರಿನಿಷ್ಕ್ರಮಣ ಕಲ್ಯಾಣ'' ಎಂದೂ ಹೇಳುತ್ತಾರೆ. ಜಿನ ಬಾಲಕನು ಎಂಟನೇ ವರ್ಷ ವಯಸ್ಸಿನಲ್ಲಿ, ಶ್ರಾವಕರು ಆಚರಿಸುವ ಅಹಿಂಸಾದಿ ಎಲ್ಲಾ ವ್ರತಗಳನ್ನು ಕೈಗೊಂಡು ಪಾಲಿಸುತ್ತಾರೆ. ಕೆಲವರು ಸಂಸಾರಿಗಳಾಗಿ ಕೆಲವರು ಬಾಲಬ್ರಹ್ಮಚಾರಿಗಳಾಗಿ ಇರುತ್ತಾರೆ. ಕೆಲವು ಕಾಲಾನಂತರ ಅವರಿಗೆ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಉಂಟಾಗುತ್ತದೆ. ಆಗ ಅವರು ಅನಿತ್ಯ, ಅಶರಣ, ಸಂಸಾರ, ಏಕತ್ವ ಅನ್ಯತ್ವ, ಅಶುಚಿತ್ವ, ಆಸ್ರವ, ಸಂವರ, ನಿರ್ಜರ, ಲೋಕ, ಬೋಧಿದುರ್ಲಭ ಮತ್ತು ಧರ್ಮ ಎಂಬ ದ್ವಾದಶಾನುಪ್ರೇಕ್ಷಗಳನ್ನು ಭಾವಿಸುತ್ತಾರೆ. ಕೂಡಲೇ ಅವರಿಗೆ ವೈರಾಗ್ಯವು ಪ್ರಾಪ್ತವಾದ ಸಂಗತಿ ಬ್ರಹ್ಮ ಸ್ವರ್ಗದಲ್ಲಿರುವ ಲೌಕಾಂತಿಕ ದೇವತೆಗಳಿಗೆ ತಿಳಿಯುತ್ತದೆ. ಆಗ ಅವರು ಬಂದು ತೀರ್ಥಂಕರರ ಮೂರು ಪ್ರದಕ್ಷಿಣೆ ಮಾಡಿ ಹೂವಿನ ಮಳೆಯನ್ನು ಕರೆಯುತ್ತಾರೆ. ಅನಂತರ ಅವರ ಮನಸ್ಸಿನ ವೈರಾಗ್ಯವು ಸ್ಥಿರವಾಗುವಂತೆ ಬೋಧಿಸಿ ಹೋಗುತ್ತಾರೆ. ಅನಂತರ ದೇವತೆಗಳು ತೀರ್ಥಂಕರರನ್ನು ಪಲ್ಲಕ್ಕಿಯಲ್ಲಿ ಹೊತ್ತು ತಪೋವನಕ್ಕೆ ಒಯ್ಯುತ್ತಾರೆ. ಅಲ್ಲಿ ಅವರು ಎಲ್ಲಾ ಪರಿಗ್ರಹಗಳನ್ನು ತ್ಯಜಿಸುತ್ತಾರೆ, ಪಲ್ಯಂಕಾಸನದಲ್ಲಿ ಕುಳಿತು ''ನಮಸ್ಸಿದ್ಧೇಭ್ಯಃ'' ಎಂದು ಸಿದ್ಧ ಪರಮೇಷ್ಠಿಗಳನ್ನು ಸ್ಮರಿಸಿ, ಪಂಚಮುಷ್ಠಿಯಿಂದ ತಲೆಗೂದಲನ್ನು ಕಿತ್ತು ಲೋಚು ಮಾಡಿಕೊಳ್ಳುತ್ತಾರೆ. ಆಗ ಅವರು ಇಪ್ಪತ್ತೆಂಟು ಮೂಲ ಗುಣಗಳನ್ನು



ಧರಿಸಿದ ಮುನಿಗಳಾಗಿ ಆರನೇ ಗುಣಸ್ಥಾನದಲ್ಲಿರುತ್ತಾರೆ. ಅವರು ಕಿತ್ತು ಹಾಕಿದ ತಲೆಗೂದಲನ್ನು ದೇವೇಂದ್ರನು ರತ್ನದ ಪಾತ್ರೆಯಲ್ಲಿಟ್ಟು ಕ್ಷೀರ ಸಮುದ್ರಕ್ಕೆ ಬಿಡುತ್ತಾನೆ. ಅನಂತರ ಮುನಿಗಳು ತಪೋಧ್ಯಾನದಲ್ಲಿ ತೊಡಗುತ್ತಾರೆ. ಆಗ ಅವರಿಗೆ ಮನಃಪರ್ಯಯ ಜ್ಞಾನವೆಂಬ ನಾಲ್ಕನೇ ಜ್ಞಾನವು ಪ್ರಾಪ್ತಿಯಾಗುತ್ತದೆ. ಆ ಸಮಯದಲ್ಲಿ ದೇವೇಂದ್ರನು ಮಾಡುವ ಈ ಪೂಜೆಗೆ ''**ದೀಕ್ಷಾಗ್ರಹಣ ಕಲ್ಯಾಣ**'' ಎನ್ನುತ್ತಾರೆ.

### 4. ಕೇವಲಜ್ಞಾನ ಕಲ್ಯಾಣ.

ದೀಕ್ಷಾಗ್ರಹಣಾನಂತರ ಧ್ಯಾನ, ತಪಸ್ಸು ಮಾಡಿದ ತೀರ್ಥಂಕರರು ಘಾತಿಕರ್ಮಗಳನ್ನು ನಷ್ಟಪಡಿಸಿಕೊಳ್ಳುತ್ತಾರೆ. ಆಗ ಅವರಿಗೆ ಅರಿಹಂತಾವಸ್ಥೆ ಪ್ರಾಪ್ತವಾಗುತ್ತದೆ. ಆಗ ಹದಿಮೂರನೇ ಗುಣಸ್ಥಾನದಲ್ಲಿರುತ್ತಾರೆ. ಅವರು ಅನಂತಜ್ಞಾನ, ಅನಂತ ದರ್ಶನ, ಅನಂತವೀರ್ಯ ಮತ್ತು ಅನಂತ ಸುಖಗಳನ್ನು ಪಡೆಯುತ್ತಾರೆ. ಕೇವಲ ಜ್ಞಾನವುಂಟಾಗುತ್ತದೆ. ಸಿಂಹಾಸನ ಕಂಪನದಿಂದ ದೇವೇಂದ್ರನು ತಿಳಿದು ಸಮಸ್ತ ದೇವತೆಗಳೊಡಗೊಂಡು ಬಂದು ಸಮವಸರಣ ಸಭೆಯನ್ನು ರಚಿಸುತ್ತಾನೆ. ಆ ಸಭೆಯಲ್ಲಿ ಹನ್ನೆರಡು ವಿಭಾಗಗಳಿರುತ್ತವೆ. ಅವುಗಳಲ್ಲಿ ಮುನಿ, ಕಲ್ಪವಾಸಿನೀ ದೇವಿಯರು, ಭವನವಾಸಿ, ವ್ಯಂತರ, ಜ್ಯೋತಿಷ್ಕ, ಕಲ್ಪವಾಸಿ ದೇವತೆಗಳು ಮನುಷ್ಯರು ಮತ್ತು ಪಶುಪಕ್ಷಿಗಳು ಇರುತ್ತಾರೆ. ಅಲ್ಲಿ ದೇವತೆಗಳು ಅರಿಹಂತರನ್ನು ಸ್ತೋತ್ರ-ಪೂಜೆ ಮಾಡುತ್ತಾರೆ, ಆಗ ಭಗವಾನ್ ಅರಿಹಂತ ಪರಮದೇವರು ದಿವ್ಯಧ್ವನಿಯ ಮೂಲಕ ಸದ್ಧರ್ಮವನ್ನು ಉಪದೇಶಿಸುತ್ತಾರೆ. ಈ ಸಂದರ್ಭದಲ್ಲಿ ದೇವೇಂದ್ರನು ಮಾಡುವ ಈ ಪೂಜೆಗೆ ''**ಕೇವಲ ಜ್ಞಾನ ಕಲ್ಯಾಣ**'' ಎಂದು ಹೇಳುತ್ತಾರೆ. ಈ ಅವಸ್ಥೆಯಲ್ಲಿ ಅವರಿಗೆ ಜಿನರು, ಅರ್ಹಂತರು, ತೀರ್ಥಂಕರರು ಎಂದು ಕರೆಯಲಾಗುತ್ತದೆ. ಇವರು ಸರ್ವಜ್ಞರೂ, ವೀತರಾಗಿಗಳೂ, ಹಿತೋಪದೇಶಿಗಳೂ ಆಗಿರುತ್ತಾರೆ.

### 5. ನಿರ್ವಾಣ ಕಲ್ಯಾಣ.

ಇದಕ್ಕೆ ''ಮೋಕ್ಷ ಕಲ್ಯಾಣ'' ಎಂಬ ಹೆಸರೂ ಇದೆ. ಕೇವಲ ಜ್ಞಾನವನ್ನು ಪಡೆದ ಅರಿಹಂತ ಪರಮೇಷ್ಠಿಗಳು ತಮ್ಮ ಆಯುಷ್ಯ ಮುಗಿಯುತ್ತಾ ಬಂದಾಗ ಶುಕ್ಲ ಧ್ಯಾನವನ್ನು ಮಾಡುತ್ತಾರೆ. ಆಗ ಹದಿನಾಲ್ಕನೇ ಗುಣಸ್ಥಾನವನ್ನು ಹೊಂದಿರುತ್ತಾರೆ.

ಅವರಿಗೆ ಅಘಾತಿ ಕರ್ಮಗಳು ಸಹ ನಷ್ಟವಾಗುತ್ತವೆ. ಆಗ ಮುಕ್ತಿಯು ಲಭಿಸುತ್ತದೆ. ಆಗ ಅವರ ಆತ್ಮ ಸಿದ್ಧಲೋಕವನ್ನು ತಲುಪುತ್ತದೆ. ಈ ಸಮಯದಲ್ಲಿ ಅವರ ದೇಹ ಕರ್ಪೂರದಂತೆ ಕರಗಿ ಹೋಗುತ್ತದೆ. ಅಲ್ಲಿ ಅವರ ಉಗುರು, ಕೂದಲು, ಹಲ್ಲುಗಳು ಮಾತ್ರ ಉಳಿದಿರುತ್ತವೆ. ದೇವೇಂದ್ರನು ದೇವತೆಗಳೊಂದಿಗೆ ಅವನ್ನು ಅಗಿಲು, ಚಂದನ, ಕರ್ಪೂರದ ಬೆಂಕಿಯಿಂದ ದಹಿಸುತ್ತಾನೆ. ಈ ದಹನವನ್ನು ಸಾಕ್ಷಾತ್ ಅಗ್ನಿಕುಮಾರನೇ ಬಂದು ತನ್ನ ಸ್ಪರ್ಶದಿಂದ ದಹಿಸುತ್ತಾನೆ. ಆ ಸ್ಥಾನವನ್ನು ಪವಿತ್ರ ಸ್ಥಾನವೆಂದು ಗೌರವಿಸುತ್ತಾರೆ. ಆ ಸಮಯದಲ್ಲಿ ದೇವೇಂದ್ರನು ಆಚರಿಸುವ ಪೂಜಾ ಸಮಾರಂಭಕ್ಕೆ "**ನಿರ್ವಾಣ ಕಲ್ಯಾಣ**" ವೆಂದು ಹೇಳುತ್ತಾರೆ. ಜಿನರು ಮುಕ್ತರಾದ ಸ್ಥಳದಲ್ಲಿ ಅವರ ಚರಣವನ್ನು ಸ್ಥಾಪಿಸುತ್ತಾರೆ. ಆ ಸ್ಥಳ ಸಿದ್ಧಕ್ಷೇತ್ರವೆಂದು ಪ್ರಸಿದ್ಧವಾಗುತ್ತದೆ.

## ವರ್ತಮಾನ ತೀರ್ಥಂಕರರ ಲಾಂಛನಗಳು

ಲಾಂಛನವೆಂದರೆ ಗುರುತು. ತೀರ್ಥಂಕರರು ಹುಟ್ಟಿದಾಗ ಅವರ ಎಡಗಾಲಿನ ಹೆಬ್ಬೆಟ್ಟಿನ ಮೇಲಿರುವ ಗುರುತಿನಿಂದ ಅವರ ಲಾಂಛನವನ್ನು ಹೇಳುತ್ತಾರೆ. ಪ್ರತಿಯೊಂದು ತೀರ್ಥಂಕರ ಬಿಂಬಗಳ ಪಾದಪೀಠದಲ್ಲಿ ಇಂತಹ ಗುರುತಿರುವುದನ್ನು ನೀವು ಗಮನಿಸಬಹುದು. ಈ ಗುರುತುಗಳಿಂದ ಯಾವ ಯಾವ ತೀರ್ಥಂಕರ ರೆಂಬುದನ್ನು ಪತ್ತೆ ಹಚ್ಚಬಹುದು.

**ಎತ್ತು ಆನೆ ಕುದುರೆ ಕಪಿಯು ಚಕ್ರ ಕಮಲ ಸ್ವಸ್ತಿಕಂ ।**
**ಚಂದ್ರ ಮಕರ ವೃಕ್ಷ ಗಂಡ ಕೋಣ ಹಂದಿ ಕರಡಿಯುಂ ॥**
**ವಜ್ರ ಎರಳೆ ಟಗರು ಮೀನ ಕುಂಭ ಆಮೆ ನೈದಿಲಂ ।**
**ಶಂಖ ಸರ್ಪ ಸಿಂಹ ಚವೀಸ್ ತೀರ್ಥಲಾಂಛನಂ ॥**

## ಶ್ರೀ ಚತುರ್ವಿಂಶತಿ ತೀರ್ಥಂಕರರ ಸ್ತುತಿ

ಪಾಲಿಸು ಪಾವನ ವೃಷಭಜಿನಾ । ಶೀಲಗುಣಾಲಯ ಅಜಿತ ಜಿನಾ।
ಶಂಭವನಾಮಕ ಪರಮಜಿನಾ । ನಂಬಿಭಜಿಪೆ ಅಭಿನಂದಜಿನಾ ॥೧॥

ಅಮಲ ಪ್ರಭಾವನೆ ಸುಮತಿಜಿನಾ । ನಮಿಸುವೆ ಪದ್ಮಪ್ರಭನೆಜಿನಾ ।
ಜಯ ಜಯವೆಂಬೆ ಸುಪಾರ್ಶ್ವಜಿನಾ । ಭಯಹರ ಚಂದ್ರಪ್ರಭನೆಜಿನಾ ॥೨॥

ಪುಷ್ಪದಂತ ತೀರ್ಥೇಶಜಿನಾ । ನಿಷ್ಪಾಪಶೀತಳ ಸುಜನಜಿನಾ ।



ವಾಸವನುತ ಶ್ರೇಯಾಂಸಜಿನಾ । ವಾಸುಪೂಜ್ಯಸುರ ವಂದ್ಯಜಿನಾ ॥೩॥

ಶ್ರೀಕರ ವಿಮಲ ಪರೇಶಜಿನಾ । ಲೋಕಾಧಾರ ಅನಂತಜಿನಾ
ಕೇವಲ ಜ್ಞಾನಿಯೇ ಧರ್ಮಜಿನಾ । ಪಾವನ ಮೂರುತಿ ಶಾಂತಿಜಿನಾ ॥೪॥

ಕಂತು ಹರನೆ ವರಕುಂಥುಜಿನಾ । ಸಂತಸವೀಯ್ಯೆ ಅರನೆಜಿನಾ
ಘನಗುಣ ಮಲ್ಲಿನಾಥಜಿನಾ । ಮುನಿಸುವ್ರತಯತಿ ಪರಮ ಜಿನಾ ॥೫॥

ನಮಿಪೆನು ನಮಿತೀರ್ಥೇಶಜಿನಾ । ಕುಮತಿಯ ಬಿಡಿಸ್ಯೆನೇಮಿಜಿನಾ ।
ಪಾವನಕರ ಪಾರ್ಶ್ವೇಶಜಿನಾ । ಶ್ರೀ ಮಹಾವೀರ ವರ್ಧಮಾನಜಿನಾ ॥೬॥

# 6. ಜೈನಧರ್ಮದ ವಿಶೇಷತೆಗಳು

ಅಂತರಂಗ ಬಹಿರಂಗ ಶತ್ರುಗಳನ್ನೂ ಮತ್ತು ಸಕಲ ಪರಿಗ್ರಹಗಳನ್ನೂ ಜಯಿಸಿ ರಾಗದ್ವೇಷಾದಿ ದೋಷರಹಿತರಾಗಿ ಮೂರುಲೋಕದ ಆಗು ಹೋಗುಗಳನ್ನು ಕ್ಷಣಮಾತ್ರದಲ್ಲಿ ತಿಳಿಯುವವರಾಗಿ, ವಿಶ್ವ ಹಿತೈಷಿಗಳಾಗಿ ಶಾಂತ ಮುದ್ರೆಯ ಕರುಣಾ ಮೂರ್ತಿಗಳಾದ ಚಿದಾನಂದೈಕ ಸ್ವರೂಪರಾದ ಪುರುಷೋತ್ತಮರನ್ನೇ ಪರಮಾತ್ಮರೆಂದೂ, ಜೀವನ್ಮುಕ್ತರೆಂದೂ, ಸರ್ವಜ್ಞರೆಂದೂ, ಜಿನರೆಂದೂ, ತ್ರಿಜಗಸ್ವಾಮಿ ಎಂದೂ ಕರೆಯುತ್ತಾರೆ. ಏಕೆಂದರೆ ಇವರು ಚತುರ್ಗತಿ ಭವಭ್ರಮಣೆಯಿಂದ ಬಿಡುಗಡೆ ಹೊಂದಿ, ಅನಾದಿಕಾಲದಿಂದ ಅಂಟಿದ್ದ ಕರ್ಮವನ್ನು ನಿರ್ಮೂಲ ಮಾಡಿ ತನ್ನ ನೈಜತೆಯನ್ನು ಕಂಡು ಜೀವನದಲ್ಲಿ ಜಯಶೀಲರಾಗಿ ಕೃತಕೃತ್ಯರೆನಿಸಿ ಜಿನರಾಗಿದ್ದಾರೆ. ಈ ಜಿನರು ಉಪದೇಶಿಸಿದ ಧರ್ಮವೇ ಜೈನಧರ್ಮ ಈ ಧರ್ಮಾವಲಂಬಿಗಳೇ ಜೈನರು. ಜಿನರು ಅವತಾರೀ ಪುರುಷರಲ್ಲ.

ನಿರ್ದೋಷತ್ವ, ಸರ್ವಜ್ಞತ್ವ ಮತ್ತು ಆಗಮೇಶಿತ್ವ ಎಂಬ ಗುಣಗಳನ್ನು ಹೊಂದಿದ ಜಿನರು ಅನಾದಿಕಾಲದಿಂದಲೂ ಆಗಿದ್ದಾರೆ. ಅವರು ಆಗಾಗ ಖಿಲವಾಗುತ್ತಿರುವ ಧರ್ಮದ ಪ್ರಚಾರ ಮಾಡುತ್ತಾ ಬಂದಿದ್ದಾರೆ.

ಅವರೆಲ್ಲಾ ಮೋಕ್ಷದ ನೆಲೆಯಾದ ಸಿದ್ಧಲೋಕದಲ್ಲಿ ಅವಿನಾಶಿಯಾದ ಸಹಜಾನಂದದಲ್ಲಿದ್ದಾರೆ. ಆದುದರಿಂದ ಈ ಜೈನಧರ್ಮವು ಅನಾದಿಯಾದುದು. ಈ ಜಗತ್ತು ಕೂಡ ಅನಾದಿಕಾಲದಿಂದಲೂ ಇದೆ. ಇದರೊಂದಿಗೆ ಈ ಧರ್ಮವೂ

ಕೂಡ ಇರುತ್ತಾ ಬಂದಿದೆ. ಇದು ಎಂದೂ ನಾಶ ಹೊಂದದ ಧರ್ಮ. ಈ ಧರ್ಮವು ಹಿಂದಿತ್ತು, ಈಗಲೂ ಇದೆ. ಮುಂದೆಯೂ ಇರುವುದು. ಆದುದರಿಂದ ಈ ಧರ್ಮವು ಅವಿನಾಶಿಯಾದದ್ದು. ಏಕೆಂದರೆ ಧರ್ಮವು ಧಾರ್ಮಿಕರನ್ನು ರಕ್ಷಿಸುತ್ತದೆ. ಧಾರ್ಮಿಕರು ಧರ್ಮವನ್ನು ರಕ್ಷಿಸಿಕೊಂಡು ಬಂದಿದ್ದಾರೆ. ಅನಾದಿಕಾಲದಿಂದಲೂ ಈ ಜೈನ ಧರ್ಮವು ವಿಶ್ವ ಧರ್ಮ, ಆತ್ಮಕಲ್ಯಾಣ ಧರ್ಮವಾಗಿದೆ. ಸರ್ವೋದಯ ಧರ್ಮ, ಸರ್ವಹಿತಕಾರಿ ಧರ್ಮವಾಗಿದೆ. ಆದುದರಿಂದ ಈ ಧರ್ಮವೆಂಬುದು ಯಾರೊಬ್ಬರ ಜಾತೀಯ ಅಥವ ಮತೀಯ ಪಂಗಡಕ್ಕೆ ಸೇರಿದ್ದಲ್ಲ. ಯಾರೊಬ್ಬರ ಸ್ವತ್ತಲ್ಲ. ಆತ್ಮಹಿತಕ್ಕಾಗಿ ದಯೆ, ಸತ್ಯ, ಆಚಾರ, ಶೀಲ ಮತ್ತು ಅಪರಿಗ್ರಹದ ಪಾಲನೆ ಯಾರಿಗೆ ಬೇಕಿಲ್ಲ? ಇವುಗಳ ಪಾಲನೆಯನ್ನು ಯಾರು ಬೇಕಾದರೂ ಮಾಡಬಹುದು. ಈ ಧರ್ಮವು ವಸ್ತುವಿನ ನೈಜಸ್ಥಿತಿಯನ್ನು ತಿಳಿಸುತ್ತದೆ ಆದಕ್ಕಾಗಿ ದೇವರು ಗುರು ಮತ್ತು ಶಾಸ್ತ್ರದ ನೈಜಸ್ವರೂಪವನ್ನು ತಿಳಿಸಿ ಆ ಬಗ್ಗೆ ನಿಜವಾದ ನಂಬಿಕೆ ಜ್ಞಾನ ಆಚರಣೆಯ ವಿಧಿ ವಿಧಾನಗಳನ್ನು ತಿಳಿಸುತ್ತದೆ. ಆದುದರಿಂದ ಇದು ಆಸ್ತಿಕಧರ್ಮ. ಇದರ ಅಸ್ತಿತ್ವವು ಆತ್ಮದಷ್ಟೇ ಸತ್ಯ, ಮೋಕ್ಷದಷ್ಟೇ ಶಾಶ್ವತವಾಗಿರುವುದರಿಂದ ಅನ್ಯ ಧರ್ಮಗಳಿಗಿಂತ ಜೈನಧರ್ಮದಲ್ಲಿ ಕಂಡು ಬರುವ ಇದೊಂದು ವಿಶೇಷತೆಯಾಗಿದೆ.

ಜಡ-ಚೇತನ ಪದಾರ್ಥಗಳ ಸಮುದಾಯ ರೂಪವೇ ಜಗತ್ತು. ಇದು ಅನಾದಿಕಾಲದಿಂದಲೂ ಇದೆ. ಇದನ್ನು ಯಾರೂ ನಿರ್ಮಾಣ ಮಾಡಿಲ್ಲ. ಸೃಷ್ಟಿಸಿಯೂ ಇಲ್ಲ ಲಯವೂ ಇಲ್ಲ. ಜಗತ್ತು ಬಹು ವಿಸ್ತಾರವಾಗಿಯೂ ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ವಿಭಾಗಗಳಿಂದ ಕೂಡಿದೆ. ಜೀವಿಯು ತಾನು ಗಳಿಸಿದ ಪುಣ್ಯವನ್ನು ಅನುಭವಿಸಲು ಸ್ವರ್ಗವನ್ನೂ, ಪಾಪದ ದುಃಖವನ್ನು ಅನುಭವಿಸಲು ನರಕವನ್ನೂ ಸೇರುತ್ತದೆ. ಸುಖ ದುಃಖಗಳ ಮಿಶ್ರಫಲವನ್ನು ಅನುಭವಿಸಲು ಭೂಲೋಕದಲ್ಲಿ ಜನ್ಮತಾಳುತ್ತದೆ. ಈ ಭೂಲೋಕದಲ್ಲಿ ಪುಣ್ಯವನ್ನಾದರೂ ಅಥವಾ ಪಾಪವನ್ನಾದರೂ ಗಳಿಸಬಹುದು. ಅಥವಾ ಎರಡೂ ಕರ್ಮಗಳ ಸಂಕೋಲೆಗಳಿಂದ ಬಿಡುಗಡೆ ಹೊಂದಿ ಜೀವನ್ಮುಕ್ತಿಯನ್ನಾದರೂ ಪಡೆಯಬಹುದು. ಈ ಮುಕ್ತಿ ಪಡೆದ ಆತ್ಮ ಪರಮಾತ್ಮನಾಗಿ ಲೋಕದ ತುತ್ತ ತುದಿಯಲ್ಲಿನ ಸಿದ್ಧ ಶಿಲೆಯನ್ನು ಸೇರಿ ನಿರಂತರ ಸುಖಿಯಾಗುತ್ತದೆ. ಹೀಗೆ ಪ್ರತ್ಯೇಕ ಜೀವಿಯೂ ತನ್ನ ಮನ ವಚನ ಕಾಯದಿಂದ ಶುಭ, ಅಶುಭ, ಶುದ್ಧ ಯೋಗದಿಂದ ಸುಖದುಃಖ ಮೋಕ್ಷಗಳ ಪದವಿಗೆ ಪಾತ್ರಗಳ ಕಾರಣವನ್ನು ತಾನೇ ಮಾಡಿಕೊಳ್ಳುತ್ತದೆ. ಏಕೆಂದರೆ ಆತ್ಮನು ಪರವಸ್ತುಗಳಲ್ಲಿ ಆಸಕ್ತನಾಗಿ ಸ್ವಸ್ವರೂಪವನ್ನು ಮರೆತು ಕ್ರೋಧ, ಮಾನ, ಮಾಯ, ಲೋಭಗಳಿಂದ ವಿಕಾರಿಯಾಗಿ ದೇವ, ಮಾನವ, ನರಕ, ತಿರ್ಯಂಚಗತಿಗಳಲ್ಲಿ



ಸುತ್ತುತ್ತಾ ಅಲ್ಪಸುಖಿ, ನಿರಂತರ ದುಃಖ ಭಾಗಿಯಾಗಿ ತೊಳಲುತ್ತಾ ಇದೆ. ಹೀಗೆ ಸೃಷ್ಟಿ, ಸ್ಥಿತಿ, ಲಯಗಳ ಕರ್ತನು ಬೇರೊಬ್ಬ ಪರಮಾತ್ಮನಲ್ಲ ಎಂಬುದನ್ನು ತಿಳಿಸುವ ಇದೂ ಒಂದು ಜೈನಧರ್ಮದ ವಿಶೇಷತೆ ಅಂದರೆ ಸತ್ಕರ್ಮದಿಂದ ಸದ್ಗತಿ ದುಷ್ಕರ್ಮದಿಂದ ದುರ್ಗತಿಯಾಗುತ್ತದೆ. ಈ ಕರ್ಮವು ಮನ, ವಚನ, ಕಾಯಗಳ ಕ್ರಿಯೆಯಿಂದಾಗುತ್ತದೆ. ಇವುಗಳ ನಿವೃತ್ತಿಯೇ ಮೋಕ್ಷ. ಇದೇ ಆತ್ಮನ ಅಂತಿಮ ಗುರಿ.

ಆತ್ಮನು ಕರ್ಮ ಜಾಲದಿಂದ ಪೂರ್ಣ ಬಿಡುಗಡೆಹೊಂದಿ ಸ್ವತಂತ್ರನಾಗಲು ಸಮ್ಯಕ್ ಶ್ರದ್ಧಾ ಜ್ಞಾನ, ವೈರಾಗ್ಯಗಳು ಬೇಕು. ಇವು ಪರಮೋನ್ನತಿಯ ಸೋಪಾನಗಳು.

ರಾಗ ದ್ವೇಷ, ಲೋಭ, ಮೋಹ, ಮದ, ಮತ್ಸರಗಳೂ ಮತ್ತು ದುರ್ವ್ಯಸನ ಗಳೂ ಆತ್ಮನಿಗೆ ಬಾಧಕಗಳಾಗಿವೆ. ಇವುಗಳಿಂದ ಆತ್ಮನು ಅಧೋಗತಿಯನ್ನು ಹೊಂದುತ್ತಾನೆ. ಜೈನ ಧರ್ಮವು ದುರ್ಗುಣಗಳನ್ನೂ ಶಮನಮಾಡಿ ಸದ್ಗುಣಗಳನ್ನು ಪ್ರಕಟಪಡಿಸಿಕೊಳ್ಳುವ ಉಪಾಯದ ಉಪದೇಶಗಳನ್ನು ಸಾರಿದೆ ಮತ್ತು ಸಮಾಜದ ಸಂಘಟನೆಯೂ ಸಹ ಇದರ ಮುಖ್ಯ ಸಿದ್ಧಾಂತಗಳ ತಳಹದಿಯಿಂದಲೇ ಆಗಿದೆ. ಇದೂಕೂಡ ಜೈನಧರ್ಮದ ವಿಶೇಷತೆ.

ಜೈನಧರ್ಮದ ಮತ್ತೊಂದು ಹೆಚ್ಚಿನ ವಿಶೇಷತೆ ಎಂದರೆ ಜಗತ್ ಹಿತಕಾರಿ ಯಾದ ಅಹಿಂಸಾ ಧರ್ಮದ ಪ್ರತಿಪಾದನೆ. ಅಹಿಂಸೆಯೇ ಧರ್ಮದ ಮೂಲವೆಂದ ಮೇಲೆ ಈ ಮೂಲ ರೂಪದ ಅಹಿಂಸೆಯ ಮಹೋಪದೇಶವು ಜಿನದೇವ ಗುರು ಶಾಸ್ತ್ರಗಳಿಂದ ದೊರೆತಿದೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಮಕ್ಕಳೂ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯ ಸಂಪಾದಕರೂ ಆದ ಶ್ರೀ ದೇವದಾಸ್ ಗಾಂಧಿಯವರು ಒಮ್ಮೆ ಇಂಗ್ಲೇಂಡಿಗೆ ಹೋಗಿದ್ದರು. ಆಗ ಯೂರೋಪಿನ ಭೀಷ್ಮ ಪಿತಾಮಹರೆನಿಸಿದ್ದ ಪ್ರಸಿದ್ಧ ವಿದ್ಯಾವಂತರೂ ಲೇಖಕರೂ ಆದ ಜಾರ್ಜ್ ಬರ್ನಾರ್ಡ್‌ಷಾರವರನ್ನು ಭೇಟಿ ಮಾಡಿದರು. ಹೀಗೇ ಮಾತಾಡುತ್ತಾ "ಪ್ರಪಂಚದಲ್ಲಿಯೇ ಅತ್ಯಂತ ಶ್ರೇಷ್ಠವಾದ ಧರ್ಮ ಯಾವುದು" ಎಂದು ದೇವದಾಸಜೀಯವರು ಬರ್ನಾರ್ಡ್‌ಷಾರವರನ್ನು ಕೇಳಿದರು. ಕೂಡಲೇ ಆ ಆಂಗ್ಲ ಮಹಾಶಯರು "ಜೈನಧರ್ಮ" ಎಂದು ಹೇಳಿದರು.

"ಇದರ ಶ್ರೇಷ್ಠತೆಗೆ ಕಾರಣ?"

"ಧರ್ಮಕ್ಕೆ ಮೂಲವಾದ ಅಹಿಂಸೆಯನ್ನು ಸಾರಿರುವುದೇ ಜೈನಧರ್ಮ. ಜೈನಧರ್ಮದಲ್ಲಿ ನಿರೂಪಿತವಾದ ಅಹಿಂಸೆಯ ಪಾಲನೆಯಿಂದ ಶ್ರೇಷ್ಠ ಪದವಿಯೂ ಜಗತ್ಕಲ್ಯಾಣವೂ ಆಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಎಲ್ಲ ಧರ್ಮಗಳಿಗಿಂತ ಜೈನ ಧರ್ಮವೇ ಶ್ರೇಷ್ಠವಾದುದು. ನನಗಂತೂ ಮುಂದಿನ ಜನ್ಮದಲ್ಲಿ ಜೈನಧರ್ಮೀಯನಾಗಿ ಜನ್ಮತಾಳಬೇಕೆಂಬ ಇಚ್ಛೆ ಇದೆ. ಏಕೆಂದರೆ ಅಹಿಂಸೆಯ ಸೂಕ್ಷ್ಮ ವಿವರವನ್ನು ಅದು ಸಾರಿದೆ" ಎಂದರು.

ಹೌದು ಅವರ ಇಚ್ಛೆ ಸಾಧುವಾದುದೇ ಏಕೆಂದರೆ ಜೈನಧರ್ಮದಲ್ಲಿ ಭವಸಾಗರದಿಂದ ಪಾರುಹೊಂದಿ ಮುಕ್ತಿಯನ್ನು ಪಡೆಯಲು ಬೇಕಾದ ಸಕಲ ಸಾಮಗ್ರಿಯ ಸಾಧನಗಳೂ ದೊರೆಯುತ್ತವೆ. ಹೀಗೆ ಜೈನಧರ್ಮವು ಅಹಿಂಸಾವಾದದಿಂದ ಜಗದ್ವಿಖ್ಯಾತವಾಗಿದೆ.

'ನೀನೂ ಬದುಕು, ಇತರರೂ ಬದುಕಲು ಬಿಡು' ಎಂಬ ಉಪದೇಶವು ಸಕಲ ಜೀವಿಗಳಿಗೂ ಅಮೃತ ಪ್ರಾಯವಾಗಿದೆ. ಇದರಿಂದ ತನ್ನಾತ್ಮನ, ಪರರ ಆತ್ಮನ ಪರಿಚಯವಾಗುತ್ತದೆ. ಜೀವಿಯ ಜೀವಘಾತಕ ಮಾಡುವುದು ಸ್ವಭಾವವಲ್ಲ. ಈ ತತ್ವದ ಉಪಾಸನೆ ಅಥವಾ ಅನುಸರಣೆಯಿಂದ ಯಾರಿಗೂ ಬಾಧಕವಿಲ್ಲ. ಯಾವ ಜೀವಕ್ಕೂ ಯಾವ ವಿಧವಾದ ನೋವು ಅಂದರೆ ಹಿಂಸೆಯನ್ನು ಕೊಡಕೂಡದು. ಏಕೆಂದರೆ ತಾನು ಜೀವಿಸಿರಬೇಕು, ಸುಖವನ್ನು ಅನುಭವಿಸಬೇಕು ಎಂಬ ಆಶೆ ಇದೆಯೋ ಇತರ ಜೀವಿಗೂ ಅದೇ ಇದೆ. ಕೊಲ್ಲುವ ಅಧಿಕಾರ ಯಾರಿಗೂ ಇಲ್ಲ. ಏಕೆಂದರೆ ಕೊಂದಮೇಲೆ ಆ ಸತ್ತ ಪ್ರಾಣಿಯನ್ನು ಯಾರೂ ಬದುಕಿಸಲಾರರು. ಸತ್ತದ್ದನ್ನು ಬದುಕಿಸಲಾರದವನು, ಬದುಕಿದ್ದನ್ನೇಕೆ ಸಾಯಿಸಬೇಕು? ಹುಟ್ಟಿದ್ದು ಸಾಯಲೇ ಬೇಕಾದುದು ಶತಃ ಸಿದ್ಧವಾದರೂ ಅದು ಸ್ವಯಂ ನಿರ್ಧಾರವಾದದ್ದು. ಪ್ರತಿಯೊಂದು ಜೀವಿಯೂ ತನ್ನದೇ ಆದ ಒಂದು ಅವಧಿಯ ಅರ್ಜಿತಕರ್ಮವನ್ನು ಹೊತ್ತು ತಂದಿರುತ್ತದೆ. ಅದು ಅದರ ಫಲವನ್ನು ಅನುಭವಿಸುತ್ತಾ ಮತ್ತೆ ಕರ್ಮಗಳನ್ನು ಹೊತ್ತು ಸಾಯುತ್ತದೆ. ಈ ಫಲ ಅಥವಾ ಪಡೆಯುವ ಕರ್ಮ ಒಳ್ಳೆಯ ಅಥವಾ ಕೆಟ್ಟದ್ದಾಗಿರಬಹುದು. ಒಂದು ವೇಳೆ "ಕೊಲ್ಲಿಸಿಕೊಂಡು ಸಾಯುವುದೇ ಅದರ ಕರ್ಮ ನಾವೇನು ಮಾಡುವುದು?" ಎಂದು ಹೇಳುವುದಾದರೆ ಹೌದು ಅದು ಆ ಕರ್ಮವನ್ನು ಹಿಂದೆ ಮಾಡಿತ್ತು. ಈಗ ಕೊಲ್ಲಿಸಿಕೊಂಡು ಸತ್ತಿರುತ್ತದೆ, ಅಂದರೆ ಕೊಲ್ಲಿಸಿಕೊಳ್ಳುವಂತಹ ಕರ್ಮವನ್ನು ಹೊತ್ತು ತಂದಿತ್ತು. ಹಿಂದೆ ಅದು ಕೊಂದೋ ಅಥವಾ ಕೊಲ್ಲಿಸಿಯೋ ಇರಬೇಕಲ್ಲವೇ? ಈಗ ಅದನ್ನು ಕೊಂದವನೂ ಇಂತಹ ಕರ್ಮವನ್ನು ಹೊತ್ತುಕೊಂಡು ಮುಂದಿನ ಜನ್ಮದಲ್ಲಿ



ಕೊಲ್ಲಿಸಿಕೊಳ್ಳಬೇಕಲ್ಲ! 'ಕೊಂದವನಿಗೆ ಕೊಲೆ ತಪ್ಪದು' ಎಂಬಂತೇ ಅದನ್ನೂ ಅನುಭವಿಸೋಣ ಎನ್ನುವ ಧೈರ್ಯ ಯಾರಿಗೆ ಇದೆ? ಏಕೆಂದರೆ ಪ್ರತಿಯೋರ್ವರೂ ಸುಖಾಭಿಲಾಷಿಗಳು ನೋವನ್ನು ಅಪೇಕ್ಷಿಸುವುದಿಲ್ಲ. ಹೀಗಿದ್ದೂ ತನ್ನಂತೆ ಇತರರು ತನ್ನ ಆತ್ಮದಂತೇ ಮತ್ತೊಂದು ಆತ್ಮ. ತನಗೆ ಸುಖದ ಆಸೆ ಇದ್ದಂತೆ ಇತರರಿಗೂ ಇದೆ ಎಂಬ ಭಾವನೆಯನ್ನು ಏಕೆ ಮಾಡಬಾರದು? ಕೊಂದವನು ಕೊಲ್ಲಿಸಿಕೊಳ್ಳಬೇಕು. ಕೊಲ್ಲಿಸಿಕೊಂಡವನು ಮತ್ತೆ ದ್ವೇಷ ಸಾಧಿಸಬೇಕು. ಈ ಜಂಜಟವೇ ಭವಭ್ರಮಣೆ. ನಿಜವಾಗಿಯೂ ಇದು ಆತ್ಮ ಸ್ವಭಾವವಲ್ಲ. ಈ ಜಂಜಟದಿಂದ ಬಿಡುಗಡೆ ಹೊಂದಬೇಕಾದರೆ ಆತ್ಮ ಗೌರವವನ್ನು ಹೊಂದಬೇಕಾದರೆ ಅಹಿಂಸಾ ಪಾಲನೆ ಬೇಕೇಬೇಕು, ಅಹಿಂಸೆಯೇ ಸರ್ವೋತ್ಕೃಷ್ಟಧರ್ಮವೆಂದು ಎಲ್ಲ ಆಸ್ತಿಕರೂ ಒಪ್ಪಲೇಬೇಕು. ಈ ಅರಿವು ಮಾನವ ಜನ್ಮದಲ್ಲಿ ಮಾತ್ರ ಸಾಧ್ಯವೇ ಹೊರತು ಮತ್ತಾವ ಪರ್ಯಾಯದಲ್ಲೂ ಅಸಾಧ್ಯ. ಈ ಅಹಿಂಸೆಯ ಪೋಷಕಗಳಾದ ಸತ್ಯ, ಪ್ರಾಮಾಣಿಕತೆ, ಶೀಲ ಅಪರಿಗ್ರಹ ಇವುಗಳ ಪಾಲನೆಯನ್ನು ಆತ್ಮನ ಉನ್ನತಿಗಾಗಿ ಮಾಡಬೇಕು. ಅಹಿಂಸಾ ಪಾಲನೆಯನ್ನು ಆತ್ಮನ ಉನ್ನತಿಗಾಗಿ ಮಾಡಬೇಕು. ಅಹಿಂಸಾ ಪಾಲನೆಯೆಂಬುದು ಮುಂದಿನ ಜನ್ಮಕ್ಕಾಗಿ ಮಾಡುವ ಜೀವವಿಮೆ (ಇನ್‌ಷ್ಯೂರೆನ್ಸ್) ಇದ್ದಂತೆ. ಸದ್ಧರ್ಮ ಪಾಲನೆಯಿಂದ ಪುಣ್ಯದ ಬುತ್ತಿಯನ್ನು ಮುಂದಿನ ಜನ್ಮದಲ್ಲಿ ಊಟಮಾಡುತ್ತಾ ಉತ್ತಮೋತ್ತಮಗತಿಯನ್ನು ಹೊಂದಿ ಕೊನೆಗೊಮ್ಮೆ ನಿರಂತರ ಸುಖದ ಸಿದ್ಧಿಯನ್ನು ಸಾಧಿಸಬಹುದು. ಈ ಅರಿವು ದೊರೆಯುವುದು ಜಿನಾಗಮನದಿಂದ ಮಾತ್ರ ಸಾಧ್ಯ. ಆದುದರಿಂದ ಇದೂ ಒಂದು ಜೈನಧರ್ಮದ ವಿಶೇಷತೆಯಾಗಿದೆ.

"ಯದ್ಭಾವಂ ತದ್ಭವತಿ" ಎಂದಹಾಗೆ ಯಾರು ಯಾವ ಭಾವನೆಯುಳ್ಳವರಾಗಿರುತ್ತಾರೆಯೋ ಅದಕ್ಕೆ ತಕ್ಕ ಫಲವನ್ನು ಪಡೆಯುತ್ತಾರೆ. "ಸತ್ಕರ್ಮದಿಂದ ಸದ್ಗತಿ, ದುಷ್ಕರ್ಮದಿಂದ ದುರ್ಗತಿ." ಈ ವಿಷಯದಲ್ಲಿ ಪ್ರತ್ಯೇಕ ಪ್ರಾಣಿಗೂ ಸ್ವಾತಂತ್ರ್ಯವಿದೆ. ಆದರೆ ಇಲ್ಲಿ ಒಳ್ಳೆಯ ಕೆಟ್ಟ ಎಂಬ ವಿಮರ್ಶೆಯು ಮಾನವನೆನಿಸಿಕೊಂಡವನಿಗೆ ಬೇಕೇಬೇಕು. ಇದಕ್ಕಾಗಿಯೇ ಜೈನಧರ್ಮ ಸಿದ್ಧಾಂತವು, ತಿಳಿಸುವುದೇನೆಂದರೆ ಜಗತ್ತಿನ ತುಂಬಾ ನಿಬಿಡವಾಗಿ ಕಾರ್ಮಣಪುದ್ಗಲ ಪರಮಾಣುಗಳು ತುಂಬಿವೆ. ಇವು ಜೀವಿಗಳ ಮನ, ವಚನ, ಕಾಯಗಳ ಕ್ರಿಯೆಗನುಸಾರ ಆತ್ಮಪ್ರದೇಶದಲ್ಲಿ ಅಂಟಿ ಕರ್ಮ ರೂಪವಾಗಿ ಪರಿಣಮಿಸುತ್ತವೆ. ಇವುಗಳ ದೆಶೆಯಿಂದಲೇ ಸುಖದುಃಖದ ಅನುಭವವಾಗುವುದು. ಅದರಿಂದಲೇ ಆತ್ಮನು ತನ್ನ ನೈಜತೆಯನ್ನು ಕಳೆದುಕೊಂಡು ಮಲಿನವಾಗಿರುವುದು. ಅದರಿಂದಾಗಿ

ಎಲ್ಲರಿಗೂ ಸುಖಾನುಭವ ಬೇಕೇ ಹೊರತು ದುಃಖ ಯಾರಿಗೆ ಬೇಕು? ಆದಕ್ಕಾಗಿ ಸುಖ ಪ್ರಾಪ್ತಿಗೆ ತಕ್ಕಂತಹ ನಡೆ, ನುಡಿ, ಮನ ಶುಭವಾಗಿರಬೇಕಲ್ಲವೇ? ಅಶುಭಭಾವನೆಯಿಂದ ಪಾಪ ಬಂಧವೂ, ಶುಭಭಾವನೆಯಿಂದ ಪುಣ್ಯ ಬಂಧವೂ, ಇವೆರಡನ್ನೂ ಕಳೆದ ಶುದ್ಧ ಯೋಗದಿಂದ ಮೋಕ್ಷವೂ ದೊರೆಯುತ್ತದೆ ಎಂಬ ಜಿನರ ಬೋಧೆಯಲ್ಲಿ ಯಾರು ಯಾವುದನ್ನು ಬೇಕಾದರೂ ಆರಿಸಿಕೊಳ್ಳಬಹುದು. ಕರ್ಮಸಿದ್ಧಾಂತವು ಜೈನಧರ್ಮದ ವಿಶೇಷತೆಯಾಗಿದೆ.

ಜೈನ ಸಂಪ್ರದಾಯದಲ್ಲಿ ಆಚರಣೆಯು ಎರಡು ವಿಧವಾಗಿದೆ. ಶ್ರಾವಕಾಚಾರ ಮತ್ತು ಯತಿ ಆಚಾರ.

ಶ್ರಾವಕರು ಎಂದರೆ ಗೃಹಸ್ಥರು ತಮ್ಮ ಜೀವನ ನಿರ್ವಹಣೆಯಲ್ಲಿ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ ಮಾರ್ಗದಲ್ಲಿ ಸಾಗುತ್ತಾ ಅಹಿಂಸಾದಿ ಅಣುವ್ರತ ಗಳನ್ನು ಪಾಲಿಸುತ್ತಾರೆ. ದೇವ ಪೂಜೆ, ಗುರು ಸೇವೆ, ಧರ್ಮ ಗ್ರಂಥಗಳ ಅಧ್ಯಯನ, ಸಂಯಮ, ತಪ, ದಾನ ಮುಂತಾದವನ್ನು ಶುಭಭಾವನೆಯಿಂದ ಮಾಡುತ್ತಿರುತ್ತಾರೆ. ವ್ರತ, ಉಪವಾಸ ಮುಂತಾದ ಪಾವನ ಕಟ್ಟಳೆಗಳನ್ನೂ ನಡೆಸುತ್ತಿರುತ್ತಾರೆ. ಇದನ್ನೇ ಇನ್ನೂ ಹೆಚ್ಚಾಗಿ ಭಾವಪೂರಿತವಾಗಿ, ಜ್ಞಾನ, ಧ್ಯಾನ, ತಪೋನಿರತರಾಗಿರುವ ಮಹಾವ್ರತ ಧಾರಿಗಳೇ ಯತಿಗಳು. ಇವರು ಸಮ್ಯಕ್‌ಶ್ರದ್ಧಾ, ಜ್ಞಾನ, ವೈರಾಗ್ಯ ಮೂರ್ತಿಗಳು. ಹೀಗೆ ಸಮ್ಯಗ್ದರ್ಶನ, ಜ್ಞಾನ ಚಾರಿತ್ರದಿಂದ ಅಂಟಿಬಂದ ಕರ್ಮದ ಬಿಡುಗಡೆಯೂ, ಸುಖದ ಪ್ರಾಪ್ತಿಯೂ ತಾನಾಗಿಯೇ ಆಗುವುದು. ಇದೂ ಜೈನಧರ್ಮದ ವಿಶೇಷತೆಯಾಗಿದೆ.

ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ, ದ್ರವ್ಯಾನುಯೋಗ ಎಂಬಿವೇ ಜೈನ ವೇದಗಳು. ಇವೆಲ್ಲಾ ವೀತರಾಗ ವಿಜ್ಞಾನಿಯಿಂದ ಹೇಳಲ್ಪಟ್ಟಿವೆ. ಇವುಗಳಲ್ಲಿ ಪುಣ್ಯ ಪುರುಷರ ತೀರ್ಥಂಕರರ ಪುರಾಣವೂ, ಧರ್ಮ ಸಿದ್ಧಾಂತವೂ, ಲೋಕದ ವಿವರವೂ ಗೃಹಿಗಳ ಯತಿಗಳ ಆಚರಣೆಯ ನಿಯಮವೂ ಅಡಗಿವೆ. ಅನೇಕಾಂತವು ಜೈನಧರ್ಮ ಸಿದ್ಧಾಂತದ ತಳಹದಿಯಾಗಿದೆ. ಇದಕ್ಕೆ ಸ್ಯಾದ್ವಾದವೆಂದು ಮತ್ತೊಂದು ಹೆಸರು. ಇದು ವಸ್ತುವಿನ ಯಥಾರ್ಥಸ್ಥಿತಿಯನ್ನೂ ನಿರೂಪಿಸುತ್ತದೆ. ಭಿನ್ನ ಭಿನ್ನ ದೃಷ್ಟಿ ಕೋನದಿಂದ ಪ್ರತ್ಯೇಕ ವಸ್ತುವಿನ ಘಟನಾ ಸತ್ವವ ಸಿದ್ಧಿ ಮಾಡಬಹುದು. ಇದಕ್ಕೆ ಅಪೇಕ್ಷಾವಾದವೆಂದು ಹೆಸರು. ಪ್ರತಿಯೊಂದು ಪದಾರ್ಥದಲ್ಲಿಯೂ ವಸ್ತುತ್ವ, ಆಸ್ತಿತ್ವ, ನಾಸ್ತಿತ್ವ, ದ್ರವ್ಯತ್ವ, ಪ್ರಮೇಯತ್ವ, ನಿತ್ಯತ್ವ, ಅನಿತ್ಯತ್ವ ಅಗುರುಲಘುತ್ವ ಏಕತ್ವ ಅನೇಕತ್ವ ಮೊದಲಾದ ಅನೇಕ ಗುಣ ಧರ್ಮಗಳಿವೆ. ಇವುಗಳನ್ನು ದ್ರವ್ಯಕ್ಷೇತ್ರ, ಕಾಲ ಭಾವಗಳಿಂದ ತಿಳಿಯಬೇಕಾಗುತ್ತದೆ.



ಈ ನಿರೂಪಣೆಯು ಜೈನ ಸಿದ್ಧಾಂತದಲ್ಲಿ ಮಾತ್ರ ದೊರೆಯುತ್ತದೆ. ಆದುದರಿಂದ ಇದೂ ಒಂದು ವಿಶೇಷತೆಯೇ ಆಗಿದೆ.

ಜೈನಧರ್ಮದಲ್ಲಿರುವ ಮತ್ತೊಂದು ವಿಶೇಷತೆ ಎಂದರೆ ದಿಗಂಬರತ್ವ. ಅಂದರೆ ಯತಿಧರ್ಮದ ಉಚ್ಛಪದವಿ. ದಿಕ್ಕುಗಳೇ ಅಂಬರ (ಬಟ್ಟೆ)ವಾಗಿ ಉಳ್ಳ ನಗ್ನ ನಿರ್ವಿಕಾರ ಮುದ್ರೆಯೇ ದಿಗಂಬರತ್ವ. ಈಗಲೂ ಕಾಣುವ ಈ ದಿಗಂಬರ ಯತಿಗಳಿಂದ ಜೈನಧರ್ಮದ ಪ್ರಾಚೀನತೆ, ತ್ಯಾಗ, ಸಂಯಮಗಳ ಪರಿಚಯವಾಗುತ್ತದೆ. ಈ ಮುದ್ರೆಯು ಮುಖ್ಯವಾಗಿ ಮಮಕಾರದ ತ್ಯಾಗ, ಅಂತರಂಗ ಬಹಿರಂಗ ಪರಿಗ್ರಹಗಳ ತ್ಯಾಗ ಮಾಡಿರುವುದರ ಸಂಕೇತವಾಗಿದೆ. ದೇವರಿದ್ದಂತೆ ಗುರು. ಗೃಹಸ್ಥನು ಶ್ರಾವಕ ಧರ್ಮಪಾಲನೆ ಮಾಡಿ ಕ್ರಮ ಕ್ರಮವಾಗಿ ನೆಲೆಗಳನ್ನು ಏರುತ್ತಾ ವೈರಾಗ್ಯ ಹೊಂದಿ ಜ್ಞಾನ ಧ್ಯಾನ ಆತ್ಮಾರಾಧನೆ ಹೆಚ್ಚಿದಂತೆ ಬ್ರಹ್ಮಚಾರಿಗಳು, ಕ್ಷುಲ್ಲಕರು ಐಲಕರು ಮುಂತಾಗಿ ದರ್ಜೆಗಳೇರಿ ನಿರ್ಮಮಕಾರಿಗಳಾಗಿ ದಿಗಂಬರತ್ವ ಪದವಿಯನ್ನು ಹೊಂದ ಬೇಕಾಗುತ್ತದೆ. ಇವರು ಮಹಾ ವ್ರತಿಗಳು. ಇವರು ದಿನದಲ್ಲಿ ಬಹಳ ಕಾಲ ಆತ್ಮಧ್ಯಾನದಲ್ಲಿ ನಿರತರಾಗಿರುತ್ತಾರೆ. ಇವರೇ ನಿಜವಾದ ಗುರುಗಳು. ಇವರು ಜಿನರಿಂದ ನಿರೂಪಿತವಾದ ಶಾಸ್ತ್ರವನ್ನು ಅಭ್ಯಾಸಿಸಿ ಆತ್ಮನು ಪರಮಾತ್ಮನಾಗುವ ಆದರ್ಶವನ್ನು ಕೈಗೊಂಡು ಶುದ್ಧವಾದ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರದಿಂದ ಆತ್ಮಬಲವನ್ನು ಪಡೆಯುತ್ತಾರೆ. ಜೈನಧರ್ಮದಲ್ಲಿ ತ್ಯಾಗಕ್ಕೆ ಹೆಚ್ಚಿನ ಮಹತ್ವವಿದೆ. ಕ್ಷಣಿಕ ಸುಖದ ಭೋಗ ವಿಲಾಸವನ್ನು ತ್ಯಜಿಸಿ ಆಧ್ಯಾತ್ಮಿಕ ಸಾಧನೆಯಲ್ಲಿ ನಿರತರಾಗಿ ಅನಂತ ಸುಖದ ಸಾನಿಧ್ಯವನ್ನು ಪಡೆಯುವುದೇ ತ್ಯಾಗದಗುರಿ. ಈ ಗುರಿಯ ಸಾಧನೆಗಾಗಿ ಜೈನ ಸಾಧುಗಳು ಕಠೋರ ತಪಸ್ಸನ್ನು ಮಾಡುತ್ತಾ ಪರಿಷಹಗಳನ್ನು ಸಹಿಸುತ್ತಾರೆ. ತಾವು ಶುದ್ಧರಾಗುವುದರ ಜೊತೆಗೆ ಅನೇಕ ಗೃಹಸ್ಥರನ್ನೂ ಭಗವದಾರಾಧನೆ ಮತ್ತು ತ್ಯಾಗದಕಡೆ ತಿರುಗಿಸುತ್ತಾ ವಿಹರಿಸುತ್ತಾರೆ. ಅನೇಕ ತ್ಯಾಗಿಗಳು ಅನುಪಮ ಧರ್ಮ ಗ್ರಂಥಗಳನ್ನು ರಚಿಸಿದ್ದಾರೆ. ಈ ದಿಗಂಬರ ಮುದ್ರೆಯಿಂದಲೇ ಮುಕ್ತಿ ಹೊಂದಲು ಸಾಧ್ಯ. ಆದುದರಿಂದ ಇದೇ ಮುದ್ರೆಯಲ್ಲೇ ಜಿನಬಿಂಬವೂ ಇದೆ. ಇದೂ ವಿಶೇಷ.

ಜಗತ್ತಿನಷ್ಟೇ ವಿಶಾಲವಾದ, ಮೋಕ್ಷದಷ್ಟೇ ಶ್ರೇಷ್ಠವಾದ ಜೈನಧರ್ಮದ ಪಾವಿತ್ರತೆಯನ್ನು ಈ ಒಂದು ಸಣ್ಣ ಲೇಖನದಲ್ಲಿ ತಿಳಿಸಲು ಸಾಧ್ಯವಿಲ್ಲ. ಈ ಧರ್ಮದಲ್ಲಿ ಅಡಕವಾಗಿರುವ ಪ್ರತಿಯೊಂದು ನಡೆ ನುಡಿ ನೀತಿ ನಿಯಮಗಳೆಲ್ಲಾ ವಿಶೇಷತೆಯಿಂದಲೇ ಕೂಡಿ ಸಕಲ ಧರ್ಮಗಳ ಮೂಲವಾಗಿದೆ. ಇದರಷ್ಟು ಪ್ರಾಚೀನ ಧರ್ಮದ ಪೀಳಿಗೆ ಮತ್ತಾವುದೂ ಇಲ್ಲ. ಮೂರ್ತಿಪೂಜೆ, ರಾತ್ರಿ ಭೋಜನ ತ್ಯಾಗ,

ಜಲವನ್ನು ಶೋಧಿಸಿ ಉಪಯೋಗಿಸುವುದು, ತತ್ವ ನಿರೂಪಣೆ, ಜಾತ್ರೆ ಉತ್ಸವಾದಿಗಳಲ್ಲಿ ಪಂಚಕಲ್ಯಾಣದ ಅನುಷ್ಠಾನ, ಣಮೋಕಾರದ ಮಹತ್ವ, ಜೀವದ ಉತ್ಥಾನ-ಪತನ-ವ್ಯವಹಾರ-ನಿಶ್ಚಯಮಾರ್ಗದ ಪ್ರತಿಪಾದನೆ, ಗುಣಸ್ಥಾನದಿಂದ ಆತ್ಮನ ವಿಕಾಸದ ಮಾರ್ಗ ಮುಂತಾದವುಗಳಿಂದ ಜೈನಧರ್ಮವು ಇಡೀ ಜಗತ್ತಿನಲ್ಲೇ ವಿಶೇಷತೆಯನ್ನು ಹೊಂದಿದೆ.

ಈ ಧರ್ಮ ಮಾರ್ಗದಲ್ಲಿ ನಡೆದರೆ ವಿಶ್ವದಲ್ಲಿಯೇ ಶಾಂತಿ ಸಾಮ್ರಾಜ್ಯ ಸ್ಥಾಪನೆಯಾಗುವುದು. ಜೀವಕೋಟಿಯ ಆತ್ಮಕಲ್ಯಾಣವಾಗುವುದು. ವಿಶ್ವಕ್ಕೇ ಹಿತವನ್ನುಂಟುಮಾಡಿ ವಿಶ್ವೇಶ ಪದವಿಯನ್ನು ಪಡೆಯುವುದಕ್ಕೆ ಬೇಕಾದ ವ್ಯವಹಾರ ನಿಶ್ಚಯ ಗರ್ಭಿತವಾದ ವೀತರಾಗ ವಿಜ್ಞಾನದ ಸಕಲ ಸಾಮಗ್ರಿಯವೂ ಈ ಜೈನ ಧರ್ಮದಲ್ಲಿ ಅಡಗಿವೆ.

★ ★ ★

ಸತ್ವೇಷು ಮೈತ್ರೀಂ ಗುಣಿಷು ಪ್ರಮೋದಂ ।
ಕ್ಲಿಷ್ಟೇಷು ಜೀವೇಷು ಕೃಪಾಪರತ್ವಮ್ ।
ಮಾಧ್ಯಸ್ಥಭಾವಂ ವಿಪರೀತವೃತ್ತೌ ।
ಸದಾ ಮಮಾತ್ಮಾ ವಿದಧಾತು ದೇವ ॥

ಸ್ವಾಮಿಯೇ! ನನ್ನ ಆತ್ಮನು ಯಾವಾಗಲೂ ಎಲ್ಲಾ ಪ್ರಾಣಿಗಳಲ್ಲಿ ಮಿತ್ರ ಭಾವವನ್ನೂ, ಗುಣವಂತರಲ್ಲಿ ಪ್ರೀತಿಯನ್ನೂ, ದುಃಖಪಡುವ ಜೀವಗಳಲ್ಲಿ ದಯಾಭಾವವನ್ನೂ, ವಿಪರೀತವ್ಯಾಪಾರವುಳ್ಳವ (ದುಷ್ಟ)ರಲ್ಲಿ ಮಾಧ್ಯಸ್ಥ ಭಾವವನ್ನೂ ಮಾಡಲಿ.

# 7. ಜೈನಧರ್ಮದ ಆದರ್ಶ ಮತ್ತು ಪ್ರಾಚೀನತೆ

ವಿಶ್ವದಲ್ಲಿಯೇ ಅತ್ಯಂತ ಮಾನವೀಯವಾದ ಧರ್ಮವೆಂದರೆ ಜಿನ ಧರ್ಮ. ಅಹಿಂಸಾಪರಮೋಧರ್ಮ: ಅರ್ಥಾತ್ ಅಹಿಂಸೆಯೇ ಶ್ರೇಷ್ಠವಾದ ಧರ್ಮವೆಂಬ ಜಿನಧರ್ಮಕ್ಕೆ ಮಿಗಿಲಾದ ಧರ್ಮವಿಲ್ಲ. ಜೀವದಯಾಪರತೆಯ ಈ ಧರ್ಮದ ಜೀವಪ್ರೇಮ, ಭಾವಶುದ್ಧಿಗಳು ಲೋಕವಿಖ್ಯಾತ.



'ಆತ್ಮವತ್ ಸರ್ವಭೂತಾನಿ' ಅಂದರೆ ತನ್ನಂತೆ ಪರರ ತಿಳಿವ ಜೀವ ಗುಣವನ್ನು ನಿಜವಾಗಿ ಹೇಳುವುದು ಜಿನಧರ್ಮ. 'ಉದ್ಧರೇತ್ ಆತ್ಮನಾತ್ಮಾನಾಂ' ಎಂಬುದಕ್ಕೆ ಜಿನಧರ್ಮವೇ ಸಾಕ್ಷಿ. ಆತ್ಮನನ್ನು ಉದ್ಧರಿಸುವ ಈ ಧರ್ಮದಲ್ಲಿ ಯಾರೂ ಇತರರ ಆತ್ಮೋದ್ಧಾರದ ಜವಾಬ್ದಾರಿ ಮಾತ್ರ ಹೊತ್ತಿಲ್ಲ.

ವೈದಿಕ ಹಿಂದೂ ಧರ್ಮಕ್ಕಿಂತಲೂ ಪ್ರಾಚೀನವಾದ ಜಿನಧರ್ಮ. ವಿಶ್ವದಲ್ಲೇ ಅತ್ಯಂತ ಪ್ರಾಚೀನ ಧರ್ಮ, ವಿಶ್ವದ ಧರ್ಮಗಳಲ್ಲಿ ಜೈನ ಧರ್ಮವೇ ಅತ್ಯಂತ ವೈಜ್ಞಾನಿಕವಾದುದೆಂದೂ ಪಶ್ಚಿಮದ ಪ್ರಾಚೀನ ವೈಚಾರಿಕರೂ, ವಿಜ್ಞಾನಿಗಳೂ, ದಾರ್ಶನಿಕರೂ ಮುಕ್ತಕಂಠದಿಂದ ಹೊಗಳಿದ್ದಾರೆ.

**ಇಲ್ಲಿ ಕೆಲವರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ :–**

ಮದ್ರಾಸಿನ ಹೈಕೋರ್ಟಿನ ಚೀಫ್ ಜಸ್ಟೀಸರಾಗಿದ್ದ ದಿವಂಗತ **ಶ್ರೀ ಕುಮಾರಸ್ವಾಮಿ ಶಾಸ್ತ್ರಿ**ಗಳವರ ಅಭಿಮತವು:

"ಜೈನಧರ್ಮದ ಪ್ರಾರಂಭವು ಮತ್ತು ಇದರ ಇತಿಹಾಸಗಳು, ಸ್ಮೃತಿ ಶಾಸ್ತ್ರಗಳಿಂದಲೂ, ಮತ್ತು ಅವುಗಳ ವ್ಯಾಖ್ಯಾನಗಳಿಂದಲೂ ಬಹಳ ಪ್ರಾಚೀನವಾಗಿರುತ್ತವೆ. ಜೈನಧರ್ಮವು ಸಂಪೂರ್ಣವಾಗಿ ಹಿಂದೂ ಧರ್ಮದಿಂದ ಭಿನ್ನವಾದ ಧರ್ಮವಾಗಿರುತ್ತದೆ. ಮತ್ತು ಇದೊಂದು ಸ್ವತಂತ್ರವಾದ ಪರಿಪೂರ್ಣ ಧರ್ಮವಾಗಿರುತ್ತದೆ."

ಇಂಗ್ಲೆಂಡಿನ ಪ್ರಸಿದ್ಧ ಮಹಾವ್ಯಕ್ತಿ ಮತ್ತು ಮಹಾಕವಿಯಾದ **ಜಾರ್ಜ್ ಬರ್ನಾರ್ಡ್ ಷಾ** ಈ ಪ್ರಕಾರವಾಗಿ ತಮ್ಮ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ :

ಜಾರ್ಜ್ ಬರ್ನಾರ್ಡ್ ಷಾ ತಮ್ಮ ಆಂತರಿಕ ಅಭಿಪ್ರಾಯವನ್ನು ಶ್ರೀಯುತ ದೇವದಾಸ ಗಾಂಧಿಯವರೊಡನೆ ವ್ಯಕ್ತಮಾಡಿದ್ದೇನೆಂದರೆ- "ನನಗೆ ಜೈನಧರ್ಮದ ಉಪದೇಶಗಳು ಬಹಳ ಹಿಡಿಯುತ್ತವೆ. ಆದ್ದರಿಂದ ನಾನು ಇಚ್ಛೆಸುವುದೇನೆಂದರೆ ನಾನು ಸತ್ತನಂತರ ಜೈನಧರ್ಮದಲ್ಲಿಯೇ ಹುಟ್ಟಬೇಕು. ಈ ಜೈನಧರ್ಮದ ಪ್ರಭಾವದಿಂದ ನಾನು ಮದ್ಯಮಾಂಸವನ್ನು ಬಿಟ್ಟು ಪವಿತ್ರವಾದ ಭೋಜನವನ್ನು ಸ್ವೀಕರಿಸುತ್ತಿದ್ದೇನೆ.'

ಭಾರತರತ್ನ ಮತ್ತು ಭಾರತದ ಮಹಾಪ್ರಧಾನಿ ದಿವಂಗತ **ಜವಹರಲಾಲ್ ನೆಹರು**ರವರು ಹೀಗೆ ಹೇಳಿದ್ದಾರೆ :

"ವಾಸ್ತವಿಕವಾಗಿ ಜೈನಧರ್ಮವು ಹಿಂದೂಧರ್ಮವೂ ಅಲ್ಲ, ವೈದಿಕ ಧರ್ಮವೂ ಅಲ್ಲ. ಇದು ಭಾರತೀಯ ಸಂಸ್ಕೃತಿಯ ಮತ್ತು ಭಾರತೀಯ ತತ್ತ್ವಜ್ಞಾನದ ಔನ್ನತ್ಯಕ್ಕೆ ಮತ್ತು ಪ್ರಗತಿಗೆ ಮಹತ್ತರವಾದ ದಾನವನ್ನು ಮಾಡಿರುತ್ತದೆ.

ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರಾದ ಭಾರತರತ್ನ ಡಾಕ್ಟರ್ **ರಾಜೇಂದ್ರ ಪ್ರಸಾದರು** ಈ ಜೈನಧರ್ಮವನ್ನು ಅಧ್ಯಯನಮಾಡಿ ಹೀಗೆ ತಮ್ಮ ಘನ ಸಮ್ಮತಿಯನ್ನು ಕೊಟ್ಟಿರುತ್ತಾರೆ :

"ಜೈನಧರ್ಮವು ಜಗತ್ತಿಗೆ ಸರ್ವ ಶ್ರೇಷ್ಠವಾದ ಅಹಿಂಸಾ ಸಿದ್ಧಾಂತವನ್ನು ಬೋಧಿಸಿರುತ್ತದೆ. ಬೇರೆ ಯಾವ ಧರ್ಮವೂ ಕೂಡ ಈ ಅಹಿಂಸಾ ತತ್ತ್ವಕ್ಕೆ ಜೈನಧರ್ಮದಷ್ಟು ಮಹತ್ವದ ಸ್ಥಾನವನ್ನು ಕೊಟ್ಟಿಲ್ಲ. ಮತ್ತು ಇದರ ಆಚರಣೆಯನ್ನು ಕೂಡ ಇಷ್ಟು ಪರಿಪೂರ್ಣವಾಗಿ ಮಾಡಿಲ್ಲ. ಜೈನಧರ್ಮವು ಈ ಅಹಿಂಸಾಸಿದ್ಧಾಂತದ ಮಹತ್ವದಿಂದ ವಿಶ್ವಧರ್ಮವಾಗಲು ಅರ್ಹವಾಗಿದೆ."

**ಮೇಜರ್ ಜನರಲ್ ಫರ್ಲಾಂಗ್** ರವರು ಹೀಗೆ ಹೇಳಿರುತ್ತಾರೆ :-

"ಜೈನಧರ್ಮದಲ್ಲಿ ಅತ್ಯುನ್ನತವಾದ ವಿಚಾರಗಳು ಮತ್ತು ಉಚ್ಚತಮವಾದ ಮುನಿಗಳ ತಪಶ್ಚರಣೆಗಳು ಕಂಡುಬರುತ್ತವೆ. ಜೈನಧರ್ಮದ ಪ್ರಾರಂಭವು ಎಂದಾಯಿತು ಎಂದು ಕಂಡುಹಿಡಿಯುವುದು ಅಸಂಭವವು."

**ಪ್ರೊಫೆಸರ್ ವಿರೂಪಾಕ್ಷ ವೇದತೀರ್ಥ, ಎಂ.ಎ.** ಮಹೋದಯರು ಜೈನಧರ್ಮದ ವಿಷಯದಲ್ಲಿ ವೇದಗಳನ್ನು ಅಭ್ಯಾಸಮಾಡಿ ಈ ಪ್ರಕಾರವಾಗಿ ತಮ್ಮ ಸಮ್ಮತಿಯನ್ನು ಕೊಟ್ಟಿರುತ್ತಾರೆ :-

"ಋಗ್ವೇದ ಮಂಡಲ 101, ಅಧ್ಯಾಯ 21, ವರ್ಗ 126-ಶ್ರೀ ಭಗವಾನ್ ವೃಷಭತೀರ್ಥಂಕರರನ್ನು ಮಂತ್ರಗಳಿಂದ ಆಹ್ವಾನಮಾಡಿರುತ್ತದೆ.

'ವೃಷಭಂ ಮಾ ಸಮಾನಾನಾಂ ಸಪತ್ನಾನಾಂ ವಿಷಾಸಹಿಂ ಹಾಹಂ ಶತ್ರೂಣಾಂ ದಧಿ ವಿರಾಜಂ ಗೋಪತಿಂ ಗವಾಂ.'

ಜೈನಧರ್ಮವು ಬಹು ಪ್ರಾಚೀನಕಾಲದಿಂದ ಅಸ್ತಿತ್ವದಲ್ಲಿದೆ. ಇದರ ಬಹುಪ್ರಾಚೀನತೆಯ ವೈದಿಕ ಕಥನಗಳಿಂದ-ಹೇಗೆಂದರೆ 'ಅರ್ಹಂ ಇದಂ ದಯಸೇ ವಿಶ್ವಮಯಂ' ಎಂದು ಸಿದ್ಧವಾಗುತ್ತದೆ.'



**ಶ್ರೀಮಾನ್ ಲೋಕಮಾನ್ಯ ಬಾಲಗಂಗಾಧರ ತಿಲಕ್**ರವರ ಅಭಿಮತ :-

"ಜೈನಧರ್ಮವು ಅನಾದಿಕಾಲದಿಂದಿದೆಯೆಂದು ಈಗಿರುವ ಶಾಸ್ತ್ರಗಳಿಂದಲೂ, ವ್ಯಾಖ್ಯಾನಗ್ರಂಥಗಳಿಂದಲೂ ನಮಗೆ ತಿಳಿದುಬರುತ್ತದೆ. ಈ ಮಾತು ನಿರ್ವಿವಾದವಾಗಿಯೂ, ಏಕಾಭಿಪ್ರಾಯವಾಗಿಯೂ ಆಗಿರುತ್ತದೆ. ಈ ವಿಷಯದಲ್ಲಿ ಅನೇಕ ಐತಿಹಾಸಿಕ ಆಧಾರಗಳೂ ಇವೆ.'

**ಸ್ವಾಮಿ ರಾಮಮಿಶ್ರಜಿ ಶಾಸ್ತ್ರಿ ಪ್ರೊಫೆಸರ್, ಬನಾರಸ್ ಸಂಸ್ಕೃತ ಕಾಲೇಜ್** ಅವರ ಆದರ್ಶ ಅಭಿಮತ :-

"ನಮಗೆ ಜೈನಧರ್ಮದ ಪ್ರಾಚೀನತನವು ಮೊಹೆಂಜೋದಾರೋವಿನ ಸಂಶೋಧನೆಯಿಂದಲೂ, ಪ್ರಾಚೀನ ಶಿಲಾಲೇಖನಗಳಿಂದಲೂ, ಗುಹೆಗಳಿಂದಲೂ ಮತ್ತು ಅನೇಕ ಪ್ರಾಚೀನ ಭಗ್ನಾವಶೇಷಗಳಿಂದಲೂ ತಿಳಿದು ಬರುತ್ತದೆ. ಜೈನಧರ್ಮವು ಯಾವಾಗ ಪ್ರಾರಂಭವಾಯಿತೆಂದರೆ ಯಾವಾಗ ಜಗತ್ತು ಪ್ರಾರಂಭವಾಯಿತೋ ಅಲ್ಲಿಂದಲೇ. ನನ್ನ ಅಭಿಪ್ರಾಯದಲ್ಲಿ ಜೈನ ಧರ್ಮವು ವೈದಿಕ ಧರ್ಮಕ್ಕಿಂತ ಬಹು ಪ್ರಾಚೀನವಾಗಿದೆ."

**ಮಹಾತ್ಮ ಗಾಂಧಿಯವರ ಅಭಿಪ್ರಾಯ** :– "ನಾನು ದೃಢ ವಿಶ್ವಾಸದೊಡನೆ ಹೇಳುತ್ತೇನೆ-ಯಾವ ಸಿದ್ಧಾಂತಕ್ಕೋಸ್ಕರ ಅಥವಾ ಯಾವ ತತ್ತ್ವಕ್ಕೋಸ್ಕರ ಭಗವಾನ್ ಶ್ರೀ ಮಹಾವೀರಸ್ವಾಮಿಯವರ ವಿಖ್ಯಾತಿಯು ಶೋಭಿಸುತ್ತದೆಯೋ ಅದು ಅಹಿಂಸಾತತ್ತ್ವವಾಗಿರುತ್ತದೆ. ಈ ಜಗತ್ತಿನಲ್ಲಿ ಯಾರಾದರೂ ಪರಿಪೂರ್ಣವಾಗಿ ಈ ಅಹಿಂಸಾತತ್ತ್ವವನ್ನು ಆಚರಣೆ ಮಾಡಿದ್ದೇ ಆದರೆ ಮತ್ತು ಪ್ರಚಾರಮಾಡಿದ್ದೇ ಆದರೆ ಅದು ಭಗವಾನ್ ವೃಷಭಾದಿ ಮಹಾವೀರಸ್ವಾಮಿ ತೀರ್ಥಂಕರರು"

ಕವಿಸಾಮ್ರಾಟ್ **ಡಾ|| ರವೀಂದ್ರನಾಥ ಠಾಗೂರ್**ರವರು :-

"ಭಗವಾನ್ ಮಹಾವೀರ ತೀರ್ಥಂಕರರ ಧರ್ಮವು ಭಾರತವರ್ಷದಲ್ಲಿ ಒಂದು ವಾಸ್ತವಿಕವಾದ ತತ್ತ್ವವು. ಇದೊಂದು ಕೇವಲ ಸಾಮಾಜಿಕ ಸಂಘವಲ್ಲ. ಇದು ನಿಜವಾಗಿಯೂ ಸತ್ಯವಾದ ಮಾತು. ಮೋಕ್ಷವು ಕೇವಲ ಹೊರಗಿನ ಉತ್ಸವಗಳನ್ನು ಆಚರಿಸುವುದರಿಂದ ಪ್ರಾಪ್ತವಾಗದು. ಧರ್ಮವು ಮಾನವರಲ್ಲಿ ಭೇದ ಮಾಡಲಾರದು."

**ಡಾ॥ ಹೆರ್‌ಮ್ಯಾನ್ ಜಾಕೋಬಿರವರ ಅಭಿಪ್ರಾಯ :-**

"ಜೈನಧರ್ಮವು ಒಂದು ಮೂಲ ಮತವಾಗಿರುತ್ತದೆ. ಇದು ಬೇರೆ ಎಲ್ಲಾ ಧರ್ಮಗಳಿಂದ ಸಂಪೂರ್ಣವಾಗಿ ಸ್ವತಂತ್ರವಾದ ಧರ್ಮವಾಗಿರುತ್ತದೆ. ಇದು ದಾರ್ಶನಿಕ ವಿಚಾರದ ಮತ್ತು ಧಾರ್ಮಿಕ ಜೀವನದ ಸ್ವರೂಪವನ್ನು ಅಧ್ಯಯನಮಾಡಲು ಮಹತ್ತ್ವ ಪೂರ್ಣವಾದ ಮತವಾಗಿರುತ್ತದೆ. ಇದರ ಅಧ್ಯಯನದಿಂದ ಭಾರತವರ್ಷದಲ್ಲಿ ಪ್ರಾಚೀನ ಕಾಲದಲ್ಲಿನ ವಿಚಾರವು ತಿಳಿಯಲ್ಪಡುತ್ತದೆ."

ಇಟಲಿಯ **ಎಲ್.ಪಿ. ಟೆಸ್ಸಿಟೋರಿಯವರ** ಅಭಿಪ್ರಾಯವು -

"ಜೈನಧರ್ಮವು ಅತ್ಯಂತ ಉಚ್ಛತಮ ಶ್ರೇಣಿಯ ಧರ್ಮವಾಗಿರುತ್ತದೆ ಇದರ ಮಹತ್ತ್ವ ಪೂರ್ಣವಾದ ಉಪದೇಶಗಳು ವಿಜ್ಞಾನ ಶಾಸ್ತ್ರದ ಮೇಲೆ ಪ್ರತಿಷ್ಠಿತವಾಗಿದೆ. ವೈಜ್ಞಾನಿಕ ವಿದ್ಯೆಯು ವೃದ್ಧಿಯಾಗುತ್ತಾ ಹೋದ ಹಾಗೆಲ್ಲಾ ಹೆಚ್ಚು ಅಧಿಕವಾಗಿ ಜೈನತತ್ತ್ವಗಳು ಸಿದ್ಧವಾಗುವುವು."

ಜೈನಧರ್ಮದ ಪ್ರಾಚೀನತೆಯ ವಿಷಯದಲ್ಲಿ ದಿವಂಗತ ಭಾರತಕೇಸರಿ ಲೋಕಮಾನ್ಯ ಬಾಲಗಂಗಾಧರ ತಿಲಕರು 1904ರಲ್ಲಿ ಬಡೋದೆಯಲ್ಲಿ ಜೈನಧರ್ಮದ ವಿಷಯದಲ್ಲಿ ಅನುಭವಪೂರ್ಣವಾದ ಮತ್ತು ಐತಿಹಾಸಿಕವಾದ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಅದರ ಕೆಲವು ಅಂಶಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವು -

"ಪ್ರಾಚೀನತೆಯಲ್ಲಿ ಜೈನಧರ್ಮಕ್ಕೆ ಮೊದಲ ಸ್ಥಾನ ಸಿಗುವುದು. ಧರ್ಮಗಳಲ್ಲಿರುವ ಪ್ರಾಚೀನವಾದ ಧರ್ಮಗಳೆಲ್ಲೆಲ್ಲಾ ಜೈನಧರ್ಮವು ಅತಿ ಪ್ರಾಚೀನವಾದುದು. ಜೈನಧರ್ಮದ ಪ್ರಭಾವನೆಯು ಮಹಾವೀರ ಸ್ವಾಮಿಯ ಕಾಲದಲ್ಲಿ ಬೆಳಗಿತು.'

**ಪ್ರೊಫೆಸರ್ ದ॥ ರಾ॥ ಬೇಂದ್ರೆಯವರ** ಅಭಿಪ್ರಾಯವಿದು :-

"ಜೈನದರ್ಶನಕ್ಕೆ ಮೂಲರಾದ ಆದಿತೀರ್ಥಂಕರರು, ಋಷಭದೇವರು ವೈಷ್ಣವ ಆಗಮಗಳಿಗೂ ನಿತಾಂತವಂದ್ಯರಾಗಿರುವರೆಂಬುದು ನಮಗೆ ಕಂಡುಬರುವುದು. ಇಷ್ಟೇ ಅಲ್ಲ. ನಾಭಿ-ವೃಷಭ-ಭರತ, ಈ ತ್ರಿಕೂಟವು, ವೈಷ್ಣವ ಶಿರೋಮಣಿಯಾದ ಧ್ರುವನ ತಂದೆ ಉತ್ತಾನಪಾದರಾಯನ ಭ್ರಾತೃವಂಶದಲ್ಲಿ ಮೆರೆಯುವುದು... ವೈಷ್ಣವ ಪುರಾಣದೃಷ್ಟಿಯಲ್ಲಿಯೂ ಸದ್ಯದ ವೈದಿಕಕಾಲವು ವೈವಸ್ವತಮನ್ವಂತರಾಂತರ್ಗತವು; ಋಷಭದೇವನ ಕಾಲವು ತತ್ಪೂರ್ವದ್ದು"



**ಕೂರ್ಮಪುರಾಣದ ಮಾತಿದು :-**

'ಹಿಮಾಹ್ವಯಂತು ಯದ್ವರ್ಷಂ ನಾಭೇ ರಾಸೀನ್ಮಹಾತ್ಮನಃ ।

ತಸ್ಯರ್ಷಭೋ ಭವತ್ಪುತ್ರೋ ಮರುದೇವ್ಯಾಂ ಮಹಾದ್ಯುತಿಃ ॥

ಋಷಭಾತ್ ಭರತೋ ಜಜ್ಞೇವೀರಃ ಪುತ್ರ ಶತಾಗ್ರಜಃ ।

ಹಿಮ ವರ್ಷದಲ್ಲಿ ಮಹಾತ್ಮಾನಾಭಿ ಹಾಗೂ ಮರುದೇವಿಯ ಹೊಟ್ಟೆಯಿಂದ ಮಹಾತೇಜಸ್ವಿಯಾದ ಋಷಭನೆಂಬ ಮಗನು ಹುಟ್ಟಿದನು. ಋಷಭನಿಗೆ ಭರತನು ಜನಿಸಿದನು. ಅವನು ನೂರು ಪುತ್ರರಲ್ಲಿ ಶ್ರೇಷ್ಠನೂ ವೀರನೂ ಇದ್ದನು.

**ಮಾರ್ಕಂಡೇಯ ಪುರಾಣದ ಕಥೆ ಹೀಗಿದೆ :-**

"..........................

ಹಿಮಾಹ್ವಯಂ ದಕ್ಷಿಣಂ ವರ್ಷ ಭರತಾಯ ಪಿತಾದದೌ ।

ತಸ್ಮಾತ್ತು ಭಾರತಂ ವರ್ಷಂ ತಸ್ಯನಾಮ್ನಾ ಮಹಾತ್ಮನಃ ॥

ತಂದೆಯಾದ ಋಷಭನು ಹಿಮವತ್ಪರ್ವತದ ದಕ್ಷಿಣ ಭಾಗವನ್ನು ಭರತನಿಗೆ ಕೊಟ್ಟನು. ಅದರಿಂದ ಈ ಭಾಗಕ್ಕೆ ಭರತಖಂಡವೆಂದು ಹೆಸರಾಯಿತು.'

**ಪ್ರೊಫೆಸರ್ ವಿರೂಪಾಕ್ಷ, ಎಂ.ಎ. ವೇದತೀರ್ಥ, ಅವರು :-** ಋಗ್ವೇದದಲ್ಲಿ ಭಗವಾನ್ ಋಷಭದೇವರ ವಿಷಯ ಹೇಳಿದೆ ಎಂದು ಸೂಚಿಸುತ್ತಾ ಕೆಲವು ಋಕ್ಕುಗಳನ್ನು ಎತ್ತಿ ತೋರಿಸಿದವರು. ಅದರಲ್ಲಿ ಇದು ಒಂದಾಗಿದೆ.

ಋಷಭಂ ಮಾಸಮಾನಾನಂ ಸಪತ್ನಾನಾಂ ವಿಷಾಸಹಿ ।
ಹಂತಾರಂ ಶತ್ರೂಣಾಂ ಕೃಧಿವಿರಾಜಂ ಗೋಪಿತಂ ಗವಾಮ್॥

"ಹೇ! ರುದ್ರ ತುಲ್ಯದೇವ! ನೀನು ನಮ್ಮ ಉಚ್ಚಕುಲದಲ್ಲಿ ಋಷಭ ದೇವನಿಗೆ ಸಮಾನರಾದ ಶ್ರೇಷ್ಠ ಆತ್ಮರು ಜನ್ಮವೆತ್ತುವಂತೆ ಮಾಡಲಾರೆಯಾ? ಆತನ ಅರ್ಹತ್ ಉಪಾಧಿಯು ಧರ್ಮಸ್ಥಾಪನೆಯ ದ್ಯೋತಕವಾಗಿದೆ."

**ಮೇಜರ್ ಜನರಲ್ ಫರ್ಲ್ಲಾಂಗ್‌ರವರ ಅಭಿಪ್ರಾಯ :-**

'ಮಧ್ಯಭಾರತದ ಪಶ್ಚಿಮ ಉತ್ತರ ಮಧ್ಯ ಭಾಗಗಳಲ್ಲಿ ಕ್ರಿ.ಪೂ. 1500 ರಿಂದ 800ರ ವರೆಗೆ ಅಷ್ಟೇಕೆ, ಇತಿಹಾಸಕ್ಕೆ ನಿಲುಕದ ಅತ್ಯಂತ ಪ್ರಾಚೀನ ಕಾಲದಿಂದಲೂ ತುರೇನಿಯನ್ ಪಂಗಡದವರು ಪ್ರಭುತ್ವಮಾಡುತ್ತಿದ್ದರು. ಅವರನ್ನೇ ಸೌಲಭ್ಯ

ದೃಷ್ಟಿಯಿಂದ ದ್ರಾವಿಡರೆಂದು ಕರೆಯುವುದು. ಈ ದ್ರಾವಿಡರಲ್ಲಿ ಸರ್ಪ, ವೃಕ್ಷ, ಲಿಂಗಪೂಜೆಯು ಪ್ರಚಾರದಲ್ಲಿತ್ತು- ಇದೇ ಸಮಯದಲ್ಲಿ ಉತ್ತರ ಹಿಂದೂಸ್ಥಾನದಲ್ಲಿ ಅತ್ಯಂತ ಸುಸಂಘಟಿತವಾದಂಥ ಪ್ರಾಚೀನ ಧರ್ಮವೊಂದು ಅಸ್ತಿತ್ವದಲ್ಲಿತ್ತು. ಅದು ಜೈನಧರ್ಮವಾಗಿತ್ತು. ಅದರ ದರ್ಶನ, ಆಚಾರ ತಪಶ್ಚರ್ಯಗಳು ಉಚ್ಚ ತರಗತಿಯವಾಗಿದ್ದುವು. ಅದರಿಂದಲೇ ಬ್ರಾಹ್ಮಣ-ಬೌದ್ಧ ಧರ್ಮಗಳ ಆರಂಭದ ತಪಶ್ಚರ್ಯಗಳು ರೂಪುಗೊಂಡವು ಆರ್ಯರು ಗಂಗಾ ಸಿಂಧೂ ಸರಸ್ವತೀ ನದಿಗಳ ವರೆಗೆ ವ್ಯಾಪಿಸುವುದಕ್ಕೆ ಮುಂಚೆಯೇ ಅರ್ಥಾತ್ ಕ್ರಿ.ಪೂ. 800, 900 ವರ್ಷಗಳ ಹಿಂದೆ ಆಗಿಹೋದ 23ನೆಯ ತೀರ್ಥಂಕರನಾದ ಪಾರ್ಶ್ವನಾಥರಿಗಿಂತ ಮೊದಲೇ ಜೈನರ ಇಪ್ಪತ್ತೆರಡು ಮಂದಿ ತೀರ್ಥಂಕರರು ಪಾರ್ಶ್ವನಾಥರಿಗಿಂತ ಮೊದಲೇ ಜೈನರ ಇಪ್ಪತ್ತೆರಡು ಮಂದಿ ತೀರ್ಥಂಕರರು ಉಪದೇಶವಿತ್ತಿದ್ದರು.

ಬೌದ್ಧವಿದ್ವಾಂಸರಲ್ಲಿ ಪ್ರಸಿದ್ಧನಾದ ಧರ್ಮಕೀರ್ತಿಯು ತನ್ನ "ನ್ಯಾಯ ಬಿಂದು" ಗ್ರಂಥದಲ್ಲಿ ಹೀಗೆ ಹೇಳುತ್ತಾನೆ :-

"ಯಃ ಸರ್ವಜ್ಞ ಆಪ್ತೋ ವಾಸಜ್ಯೋತಿಜ್ಞಾನಾದಿಕಮುಪ

ದಿಷ್ಟವಾನ್, ಯದ್ಯಥಾ ಋಷಭ ವರ್ಧಮಾನಾದಿತಿ"

ಇದರಿಂದ ಬೌದ್ಧರಲ್ಲಿಯೂ ಋಷಭದೇವನು ಜೈನಧರ್ಮದ ಪ್ರಥಮ ತೀರ್ಥಂಕರನೆಂದು ಪ್ರಚಾರವಿತ್ತೆಂದು ಕಂಡುಬರುತ್ತದೆ.

ಲೋಕಮಾನ್ಯ **ಬಾಲಗಂಗಾಧರ ತಿಲಕ್**ರವರು (1914ನೆಯ ಇಸವಿ ಡಿಸೆಂಬರ್ 13ನೆಯ 'ಕೇಸರಿ' ಪತ್ರಿಕೆಯಲ್ಲಿ) :- "ಗ್ರಂಥಗಳಿಂದಲೂ ಸಾಮಾಜಿಕ ವ್ಯಾಖ್ಯನಗಳಿಂದಲೂ ಜೈನಧರ್ಮವು ಅನಾದಿಯೆಂದು ತಿಳಿದುಬರುತ್ತದೆ. ಈ ವಿಷಯುವು ನಿರ್ವಿವಾದವೂ ಮತಭೇದ ರಹಿತವೂ ಆಗಿದೆ. ಈ ವಿಷಯದಲ್ಲಿ ಇತಿಹಾಸದಲ್ಲಿ ದೃಢವಾದ ದಾಖಿಲೆಯಿದೆ: ಮತ್ತು ಸುಮಾರು ಕ್ರಿ. ಪೂ. 526 ನೆಯ ಇಸವಿಯ ಮೊದಲಂತೂ ಜೈನಧರ್ಮವು ಸಿದ್ಧವಾಗಿಯೇ ಇದ್ದಿತು. ಮಹಾವೀರಸ್ವಾಮಿಯು ಜೈನಧರ್ಮವನ್ನು ಪುನಃ ಪ್ರಕಾಶಕ್ಕೆ ತಂದು ಈಗ 2400 ವರ್ಷಗಳು ಕಳೆದು ಹೋದವು. ಬೌದ್ಧ ಧರ್ಮದ ಸ್ಥಾಪನೆಗಿಂತಲೂ ಮೊದಲು ಜೈನಧರ್ಮದ ಪ್ರಕಾಶವು ಪ್ರಕಟವಾಗಿದ್ದಿತು. ಈ ಮಾತು ನಂಬುವುದಕ್ಕೆ ಯೋಗ್ಯವಾಗಿದೆ. ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ ಮಹಾವೀರಸ್ವಾಮಿಗಳು ಕೊನೆಯ ತೀರ್ಥಂಕರರಾಗಿದ್ದರು. ಇದರಿಂದಲೂ ಜೈನಧರ್ಮದ ಪ್ರಾಚೀನತೆಯು ಗೊತ್ತಾಗುತ್ತದೆ. ಬೌದ್ಧಧರ್ಮವು ಅನಂತರ ಉಂಟಾಯಿತೆಂಬ ಮಾತು



ನಿಶ್ಚಯವಾಗಿದೆ."

ಈ ಮೇಲಿನ ಆಧಾರಗಳಿಂದ ಜೈನಧರ್ಮದ ಪ್ರಾಚೀನತೆಯು ದೃಢಪಡುತ್ತದೆ. ಈ ವಿಷಯ ಸಮರ್ಥನೆಗೆ ಅನೇಕ ಆಧಾರಗಳಿವೆ. ಜೈನ ಮತ್ತು ಜೈನೇತರ ಗ್ರಂಥಗಳು, ಶಿಲಾಲೇಖನಗಳು, ಪ್ರಾಚ್ಯವಸ್ತುಗಳು, ಸ್ಮಾರಕಗಳು, ಮೊಹೆಂಜೋದಾರೋ-ಹರಪ್ಪ ಈ ಪ್ರಾಚೀನ ನಗರಗಳ ಪೀಠದಲ್ಲಿ ಕೆತ್ತಿರುವ ಶಾಸನಗಳು ಇವೆಲ್ಲವೂ ಜೈನಧರ್ಮದ ಪ್ರಾಚೀನತೆಯನ್ನು ಸ್ಪಷ್ಟವಾಗಿ ತಿಳಿಸುವುವು.

ಅಣುತತ್ವದ ಸಿದ್ಧಾಂತದಿಂದ ಹಿಡಿದು ಇನ್ನು ಅನೇಕ ವೈಜ್ಞಾನಿಕ ಸಿದ್ಧಾಂತಗಳವರೆಗೆ ಆಧುನಿಕ ಆವಿಷ್ಕಾರಗಳಬಗ್ಗೆ ಸ್ಪಷ್ಟ ಕಲ್ಪನೆ-ವಿವರಣೆಗಳು ಜೈನಧರ್ಮದ ಮೂಲದಲ್ಲಿಯೇ ಸಿಗುತ್ತದೆ ಎಂದಾಗ ಅತ್ಯಂತ ಉನ್ನತ ಸಂಸ್ಕೃತಿ ನಾಗರಿಕತೆಗಳಿಗೆ ಸಂಬಂಧಿಸಿದ ಧರ್ಮವೆಂಬುದು ನಿರ್ವಿವಾದ.

ಜೈನಧರ್ಮದಲ್ಲಿ ಆತ್ಮ, ಜನ್ಮಾಂತರ, ಕರ್ಮಾದಿಗಳಿದ್ದರೂ ಅವರ ದೇವ ದೇವತೆಗಳು ಸೃಷ್ಟಿಕರ್ತರಲ್ಲ. ಇಂದಿನ ವಿಜ್ಞಾನ ಹೇಳುವಂತೆ ಜಿನ ಧರ್ಮವೂ ವಿಶ್ವದ ಅನಾದ್ಯನಂತತೆಯನ್ನು ನಿತ್ಯ ಸತ್ಯತೆ ವಿಸ್ಪತೆಗಳನ್ನು ಹೇಳುತ್ತ ಸೃಷ್ಟಿ ಸ್ಥಿತಿ ಲಯಗಳ ಸ್ವಭಾವ ತಿಳಿಸುತ್ತಿದೆ.

ಪುಣ್ಯವಿಶೇಷದಿಂದ ಮನುಷ್ಯನು ದೇವನಾಗಬಹುದು, ಪಾಪವಿಶೇಷದಿಂದ ನರಕವಾಸಿಯಾಗಬಹುದು. ಆದರೆ ಮೋಕ್ಷ ಅಥವಾ ಕೇವಲ ಜ್ಞಾನದಿಂದ ಸಿದ್ಧ ಶಿಲೆಯ ಆನಂದಸ್ಥಿತಿಗೇರಬೇಕಾದರೆ ದೇವನಾಗಲೀ ನರಕವಾಸಿಯಾಗಲೀ ಮನುಷ್ಯನಾಗಿಯೇ ಹುಟ್ಟಬೇಕು. ಹೀಗೆ ಮನುಷ್ಯನಿಗೆ ಸರ್ವಾಧಿಕಾರ ಕೊಟ್ಟಿರುವ ಧರ್ಮ ಜಿನಧರ್ಮವೊಂದೇ.

ಮನುಷ್ಯ ಮನುಷ್ಯರಲ್ಲಿ ಜಿನಧರ್ಮವು ಯಾವ ಭೇದವನ್ನೂ ಮಾಡುವುದಿಲ್ಲ. ಜೀವಿ ಜೀವಿಗಳಲ್ಲಿಯೇ ಅದು ಭೇದ ಮಾಡುವುದಿಲ್ಲ. ಸಕಲ ಜೀವಿಗಳಲ್ಲೂ ದಯಾ ಪರವಾಗಿ ಅನುಕಂಪದಿಂದ ನಡೆದುಕೊಳ್ಳಬೇಕು. ಎಂಬ ಮಾನವ ಧರ್ಮವೇ ಜಿನಧರ್ಮ.

ಜಿನಧರ್ಮದಲ್ಲಿ ಶ್ವೇತಾಂಬರ ದಿಗಂಬರವೆಂಬೆರಡು ಆಂತರಿಕ ವಿಭೇದದ ಪಂಥಗಳು ಮಾತ್ರ ಜಿನಧರ್ಮದಲ್ಲಿವೆ. ಆದರೆ ಅವುಗಳ ನಡುವೆ ವಿಚ್ಛಿನ್ನಕಾರಕ ವಿವಾದಗಳಲ್ಲ.

ಯಾವುದೇ ಅಧಿಕಾರವನ್ನಾಗಲೀ, ಅಧಿಕಾರಶಾಹಿಯನ್ನಾಗಲೀ ಜಿನ ಧರ್ಮವು

ಮನುಷ್ಯನ, ತಿರ್ಯಂಚ ಆದಿ ಪ್ರಾಣಿಗಳು ಯಥಾಶಕ್ತಿ ಧರ್ಮವನ್ನು ಪಾಲಿಸಿ, ತಮ್ಮ ಉನ್ನತಿಯನ್ನು ಮಾಡಿಕೊಳ್ಳಲು ಸಾಧ್ಯವಿದೆ ಎಂದು ತಿಳಿಸುತ್ತದೆ.

ವೇದಗಳಲ್ಲಿಯೇ ಋಷಭದೇವಾದಿ ಜಿನ ತೀರ್ಥಂಕರರ ಹೆಸರುಗಳು ಬರುವುದರಿಂದ ವೈದಿಕಕ್ಕಿಂತ ಮುಂಚಿನದೆಂದು ಜಿನಧರ್ಮವು ಸಿದ್ಧವಾಗಿದೆ. ಆದಿನಾಥನು ಮೊದಲನೆಯ ತೀರ್ಥಂಕರರಾದರೆ, ಮಹಾವೀರರು ಕೊನೆಯ ತೀರ್ಥಂಕರರು. ಇವರೆಲ್ಲರೂ ಜೀವಿಗಳಿಗೆ ಮೋಕ್ಷದ ಮಾರ್ಗದರ್ಶಿಗಳು.

ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್ ಚಾರಿತ್ರಗಳೇ ಜಿನಧರ್ಮದ ರತ್ನತ್ರಯಗಳು ಕೂಡಿಮೋಕ್ಷ ಮಾರ್ಗವಾಗಿದೆ. ಅಂದರೆ ಇವು ಮೂರರಿಂದಲೇ ನಿರ್ವಾಣಪ್ರಾಪ್ತಿಯಾಗುವುದೆಂದು ಜಿನಧರ್ಮದ ನಂಬಿಕೆ. ಮಾನವ ಸಮಾನತೆ, ಜೀವದಯೆ ಮತ್ತು ವೈಜ್ಞಾನಿಕ ದೃಷ್ಟಿಗಳು ವಿಶ್ವಕ್ಕೆ ಜಿನಧರ್ಮದ ಅನೇಕ ಕೊಡುಗೆಗಳಲ್ಲಿ ಕೆಲವು.

ಋಷಭನಾಥ, ಅಜಿತನಾಥ, ಸಂಭವನಾಥ, ಅಭಿನಂದನ, ಸುಮತಿನಾಥ, ಪದ್ಮಪ್ರಭ, ಸುಪಾರ್ಶ್ವ, ಚಂದ್ರಪ್ರಭ, ಪುಷ್ಪದಂತ, ಶೀತಲನಾಥ, ಶ್ರೇಯಾಂಸನಾಥ, ವಾಸುಪೂಜ್ಯ, ವಿಮಲನಾಥ, ಅನಂತನಾಥ, ಧರ್ಮನಾಥ, ಶಾಂತಿನಾಥ, ಕುಂಥುನಾಥ, ಅರನಾಥ, ಮಲ್ಲಿನಾಥ, ಮುನಿಸುವ್ರತ, ನಮಿನಾಥ, ನೇಮಿನಾಥ, ಪಾರ್ಶ್ವನಾಥ ಮತ್ತು ಮಹಾವೀರ ಇವರೇ ಇಪ್ಪತ್ನಾಲ್ಕು ಜಿನ ತೀರ್ಥಂಕರರು. ಇವರೆಲ್ಲರೂ ಧರ್ಮಪ್ರವರ್ತಕರು. ಪ್ರಚಾರಕರು.

## 8. ಮುಕ್ತಿಮಂದಿರದ ಮೊದಲ ಮೆಟ್ಟಲು

ವಿಶ್ವದಲ್ಲಿನ ಜೀವಕೋಟಿಗೆ ಸುಖ-ಶಾಂತಿಯ ಅಪೇಕ್ಷೆ ಇದೆ. ಅದರಲ್ಲೂ ಮಾನವಕೋಟಿಗೆ ಈ ಅಪೇಕ್ಷೆ ಹೆಚ್ಚಾಗಿರುತ್ತದೆ. ಸುಖವೆಂದರೆ ಚಿಂತೆ ಮತ್ತು ವ್ಯಾಕುಲತೆಗಳಿಲ್ಲದುದು. ಶಾಂತಿ ಎಂದರೆ ರಾಗದ್ವೇಷಾದಿ ಮನೋ ವಿಕಾರಗಳಿಲ್ಲದುದು. ಆದರೆ ಮಾನವನು ಈ ಜಗತ್ತಿನಲ್ಲಿ ರಾಗ, ದ್ವೇಷ, ಚಿಂತೆ, ವ್ಯಾಕುಲ ವಿಕಾರಾದಿ ಜಂಜಟಗಳಿಗೆ ಸಂಬಂಧಿಸಿದ ಕಾರ್ಯದಲ್ಲಿ ತೊಡಗಿದ್ದು



ಸುಖಶಾಂತಿಯನ್ನು ಅಪೇಕ್ಷಿಸುತ್ತಾನೆ. ಅಂದರೆ ಬೆಂಕಿಯಲ್ಲಿ ಶೀತವನ್ನು ಬಯಸಿದಂತೆಯೇ ಸರಿ ಈತನ ಅಪೇಕ್ಷೆ. ಅಲ್ಪ ಸುಖದ ಬಯಕೆಗಾಗಿ ಸರ್ವನಾಶದ ಪ್ರಯೋಗ ನಡೆಯುತ್ತಿದೆ. ತನ್ನುಳಿವಿಗೆ ಪರರ ಅಳಿವಾಗುತ್ತಿದೆ. ಇದರಿಂದ ಮಾನವನಿಗೆ ನಿಜವಾದ ಸುಖ ಶಾಂತಿ ದೊರೆಯದೆ ಆಶಾ ಸಾಗರದ ಅಲೆಯೊಡೆತಕ್ಕೆ ಸಿಕ್ಕಿ ಪಾರುಗಾಣದವನಾಗಿದ್ದಾನೆ. ಇದಕ್ಕೆ ಕಾರಣ ಮಾನವನಲ್ಲಿ ತುಂಬಿರುವ ಅವಿಶ್ವಾಸ, ಅಜ್ಞಾನ ಮತ್ತು ಅನಾಚಾರಗಳೇ ಆಗಿವೆ. ಜೀವಕೋಟಿಗಳೆಲ್ಲಲ್ಲ ಮಾನವ ಜನ್ಮವು ಪವಿತ್ರವಾದುದಾದರೂ ಕರ್ತವ್ಯ ಪಾಲನೆಯಲ್ಲಿ ಲೋಪವಾಗಿ ಮಾನವತ್ವದ ದುರುಪಯೋಗದ ದುಷ್ಪರಿಣಾಮದಿಂದ ರಾಗ, ದ್ವೇಷ, ಚಿಂತೆಗೊಳಗಾಗಿರುವುದರಿಂದ ತಾನು ಅಪೇಕ್ಷಿಸುವ ಸುಖಶಾಂತಿ ದೊರೆಯದಾಗಿದೆ. ಇದರಿಂದಾಗಿ ಮಾನವನ ಜೀವನವು ಅಸ್ತವ್ಯಸ್ತವಾಗಿ ಗೊಂದಲಕ್ಕೀಡಾಗಿದೆ. ಅನಾದಿಯಿಂದಲೂ ಅನೇಕ ಪವಿತ್ರಾತ್ಮರು ಸುಖಶಾಂತಿಯ ಮಾರ್ಗವನ್ನು ಈ ಗೊಂದಲಕ್ಕೀಡಾದ ಜಗತ್ತಿಗೆ ತೋರಿಸಿದ್ದಾರೆ. ಅದರಲ್ಲಿಯೂ ಈ ಅರಿವಿನ ಬೋಧೆಯು ಪ್ರಾಚೀನವೂ ಪಾವನವೂ ಆದ ಜೈನಧರ್ಮದಿಂದಲೂ ಅದರ ಪ್ರವರ್ತಕರಾದ ತೀರ್ಥಂಕರರಿಂದಲೂ ಆಗಿದೆ. ಅವರು ತಾವುಕಂಡ ನಿಜವಾದ ಸುಖಶಾಂತಿಯ ನಿಜ ಪಥವನ್ನು ಜಗಜ್ಜೀವೋದ್ಧಾರಕ್ಕಾಗಿ ಸಾರಿ ತೋರಿ ಸಾಗಿದ್ದಾರೆ ಮುಕ್ತಿಮಂದಿರಕ್ಕೆ. ಅನಾದಿ ಕಾಲದಿಂದಲೂ ನಿಜವಾದ ಸುಖಶಾಂತಿಯನ್ನು ಅಪೇಕ್ಷಿಸುವವರು ಧರ್ಮದ ಆಶ್ರಯವನ್ನು ಪಡೆದೇ ಇದ್ದಾರೆ. ಈಗಲೂ ಆ ಪವಿತ್ರ ಧರ್ಮವಿದ್ದೇ ಇದೆ. ಆದರೂ ಅನೇಕರು ಆ ಧರ್ಮದ ಕಡೆಗೆ ಹೊರಳಿ ನೋಡಿಲ್ಲ, ಕೇಳಿಲ್ಲ, ತಿಳಿದಿಲ್ಲ. ಇದಕ್ಕೆ ಕಾರಣ ಅಜ್ಞಾನದ ಆವರಣ. ಜೀವನು ಆ ಆವರಣಗಳನ್ನು ಸ್ಮರಿಸಿ ಇಣಿಕಿಯಾದರೂ ನೋಡಲು ಪ್ರಯತ್ನಿಸಿದ್ದರೆ ಧರ್ಮಜ್ಯೋತಿಯ ಸ್ವಯಂಪ್ರಕಾಶಕ ಪಾವನ ಪ್ರಭೆ ಕಾಣುತ್ತಿತ್ತು. ಕ್ರಮವಾಗಿ ಅತ್ತ ಸಾಗಿದ್ದರೆ ಧರ್ಮದ ನೆರವು ದೊರೆಯುತ್ತಿತ್ತು. ಆಗ ನಿಜವಾದ ಸುಖ-ಶಾಂತಿಯ ಹಾದಿ ಕಾಣುತ್ತಿತ್ತು. ಈಗಲಾದರೂ ನಿಜವಾದ ಸುಖ, ಶಾಶ್ವತವಾದ ಶಾಂತಿಯ ಅಪೇಕ್ಷಿಗಳು ಧರ್ಮದ ಶರಣು ಹೋಗುವುದು ಅಗತ್ಯ. ಧರ್ಮವೆಂಬ ಜ್ಯೋತಿಯ ಪ್ರಭೆಯಲ್ಲಿ ತನ್ನ ನಿಜಾತ್ಮನನ್ನು ಕಾಣಬಹುದು, ಆತ್ಮದ ಅರಿವೇ ಸಹಜಾನಂದ. ಆ ಆತ್ಮಾನಂದ ಯಾರಿಗೆ ಬೇಕಿಲ್ಲ? ಎಲ್ಲರಿಗೂ ಬೇಕು. ಆದರೆ ಆ ಪದವಿಗೆ ತಲುಪಲು ಒಂದು ಮಾರ್ಗವನ್ನು ತೀರ್ಥೇಶರು ಸಾರಿ ತೋರಿದ್ದಾರೆ. ಅದೇ ರತ್ನತ್ರಯ ಮಾರ್ಗ. ಇದೇ ಮುಕ್ತಿ ಮಾರ್ಗ. ಮುಕ್ತಿಮಂದಿರವನ್ನು ತಲುಪಲು ಈ ಧರ್ಮಮಾರ್ಗದಲ್ಲಿ ಸಾಗಬೇಕು. ಆ ಮುಕ್ತಿಮಂದಿರಕ್ಕೆ ಮೂರು ಮೆಟ್ಟಿಲನ್ನು

ಹತ್ತಿ ಸಾಗಬೇಕು. ಅವು ಮೂರು ಸ್ವಯಂಪ್ರಕಾಶಕ ರತ್ನದೋಪಾದಿಯಲ್ಲಿ ಸಾಧಕನಿಗೆ ಮಾರ್ಗದರ್ಶನ ಮಾಡುತ್ತವೆ. ಅವುಗಳನ್ನು ಸಾಧಿಸಿ ಸಾಗಿದರೆ ನಿತ್ಯ ಸುಖ ಶಾಂತಿ ಪೂರ್ಣವಾದ ಮುಕ್ತಿಮಂದಿರವನ್ನು ತಲುಪಿ ಅಲ್ಲಿನ ಸಹಜಾನಂದ ಚಿತ್ತಾಕಾಶದಲ್ಲಿ ಲೀನವಾಗಬಹುದು.

ಈ ರೀತಿ ಸುಖದ ಅಭಿಲಾಶೆಯು ಆತ್ಮನ ನಿಜವಾದ ಒಂದು ಗುಣ. ಆದರೆ ಈ ಗುಣವು ಕರ್ಮಮಲದಿಂದ, ಅಜ್ಞಾನದ ಆವರಣದಿಂದ ಗೌಣವಾಗಿದೆ. ಇವುಗಳಿಂದ ಬಿಡುಗಡೆ ಹೊಂದಲು ನಿಜವಾದ ದೇವ, ಗುರು, ಧರ್ಮಗಳ ಶ್ರದ್ಧೆ, ಜ್ಞಾನ ಮತ್ತು ಆಚರಣೆ ಬೇಕೇಬೇಕು. ಇದರ ಸಮೀಚೀನ ಸಮನ್ವಯದಿಂದಲೇ ಸಂಸಾರಿ ಜೀವಿಯು ಭವಭ್ರಮಣೆಯಿಂದ ಬಿಡುಗಡೆ ಹೊಂದಲು ಸಾಧ್ಯ. ಭವಭ್ರಮಣೆಯೇ ನಿಜವಾದ ದುಃಖ. ಇದರ ಬಿಡುಗಡೆಯೇ ನಿಜವಾದ ಸುಖ. ಯಾವುದು ಭವಭ್ರಮಣೆಯಿಂದ ಬಿಡುಗಡೆಯ ಕಡೆ ಜೀವಿಗಳನ್ನು ಸಾಗಿಸುತ್ತದೆಯೋ ಅದೇ ಧರ್ಮ. ಇದು ಕೊಂಡುಕೊಳ್ಳಲು ದೊರೆಯುವುದಿಲ್ಲ. ಆದರೂ ದೇವ, ಗುರು, ಶಾಸ್ತ್ರದಲ್ಲಿ ಭಕ್ತಿ, ಜ್ಞಾನ, ವೈರಾಗ್ಯದಿಂದ ತಾನಾಗಿಯೇ ದೊರೆಯುತ್ತದೆ. ಆ ಧರ್ಮವೇ ರತ್ನತ್ರಯ ಧರ್ಮ. ಇದನ್ನೇ ಆಚಾರ್ಯರು "ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಾಣಿ ಮೋಕ್ಷ ಮಾರ್ಗಃ" ಎಂದಿದ್ದಾರೆ. ಹಾಗೂ ಸದ್ದೃಷ್ಟಿ-ಜ್ಞಾನ ವೃತ್ತಾನಿ ಧರ್ಮಂ ಧರ್ಮೇಶ್ವರಾ ವಿದುಃ" ಎಂದರೆ ನಿಜವಾದ ನಂಬಿಕೆ, ಜ್ಞಾನ ಆಚರಣೆಯೇ ಧರ್ಮವೆಂದು ಧರ್ಮೇಶ್ವರರಾದ ಅರಹಂತ ಭಗವಾನರು ನಿರೂಪಿಸಿದ್ದಾರೆ. ಈ ಮೂರು ಮೆಟ್ಟಲುಗಳಲ್ಲಿ ಮೊದಲನೇಯದು ಸಮ್ಯಗ್ದರ್ಶನ. ಅಂದರೆ ದೃಢವಾದ ಶ್ರದ್ಧೆ ಅಥವಾ ನಿಜವಾದ ನಂಬಿಕೆಯೇ ಆಗಿದೆ.

"ತತ್ವಾರ್ಥಶ್ರದ್ಧಾನಂ ಸಮ್ಯಗ್ದರ್ಶನಂ" "ತತ್ವ ಪ್ರೀತಿ ಮನಕ್ಕೆ ಪುಟ್ಟಲದು ಸಮ್ಯಗ್ದರ್ಶನಂ" ಎಂಬ ಸೂತ್ರಗಳಂತೆ ತತ್ವಗಳ ಯಥಾರ್ಥ ಶ್ರದ್ಧಾ-ನಂಬಿಕೆಯೇ ಸಮ್ಯಗ್ದರ್ಶನವೆಂಬ ಮೊದಲ ಮೆಟ್ಟಲು. ಯಥಾರ್ಥ ಉಪದೇಶವು ನಿರ್ದೋಷ ಭಗವಂತನಿಂದ ಸಾರಲ್ಪಟ್ಟಿದೆ. ಆ ದಿವ್ಯ ವಚನಕ್ಕೆ ತತ್ವ ಅಥವಾ ಶಾಸ್ತ್ರವೆಂದು ಹೆಸರು. ಅದರಲ್ಲಿ ಅಡಕವಾಗಿರುವ ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ, ಮೋಕ್ಷ ಎಂಬಿವೇ ಏಳು ತತ್ವಗಳು.

ಸುಖ-ದುಃಖಾನುಭವ, ಜ್ಞಾನ ಚೇತನ ಮತ್ತು ಶಕ್ತಿ ಗುಣವುಳ್ಳ ದ್ರವ್ಯವೇ ಜೀವ. ಚೇತನಾದಿ ಗುಣವಿಲ್ಲದ ಜಡಪದಾರ್ಥವೇ ಅಜೀವ. ಮನ ವಚನ ಕಾಯಗಳ ಕ್ರಿಯೆಯಿಂದ ಆತ್ಮನು ಕರ್ಮಗಳನ್ನು ಪಡೆದು ಕೊಳ್ಳುವದ್ವಾರವೇ ಆಸ್ರವ. ಕ್ರೋಧ,



ಮಾನ, ಮಾಯಾ, ಲೋಭಗಳಿಂದ ಕಾರ್ಮಣ ಪುದ್ಗಲಗಳು ಆತ್ಮಪ್ರದೇಶಕ್ಕೆ ಬಂದು ಅಂಟುವುದೇ ಬಂಧ. ಕರ್ಮಗಳ ಬರುವಿಕೆಯನ್ನು ಮನ ವಚನ ಕಾಯಗಳ ಸಂಯಮದಿಂದ ತಡೆಯುವುದೇ ಸಂವರ. ಆತ್ಮನಿಗೆ ಬಂಧವಾಗಿದ್ದ ಕರ್ಮವನ್ನು ನಾಶ ಮಾಡುವುದೇ ನಿರ್ಜರೆಯು. ಸಕಲ ಕರ್ಮಬಂಧನದಿಂದ ಪರಿಪೂರ್ಣ ಬಿಡುಗಡೆಯಾಗಿ ಆತ್ಮನು ಸಹಜಾನಂದ ಸುಖ ಶಾಂತಿಯನ್ನು ಪಡೆಯುವುದೇ ಮೋಕ್ಷ. ಈ ತತ್ವಗಳ ದೃಢವಾದ ಶ್ರದ್ಧಾ ಜ್ಞಾನವಿಲ್ಲದೆ ಆತ್ಮಕಲ್ಯಾಣವಾಗಲಾರದು. ತಾತ್ವಿಕದೃಷ್ಟಿಯಿಂದ ಆತ್ಮಶ್ರದ್ಧೆಯು ಹೀಗಿರಬೇಕು. "ನನ್ನ ಆತ್ಮನು, ಶರೀರ, ಮನೆ, ಪುತ್ರ, ಮಿತ್ರ, ಕಳತ್ರಾದಿ ಪರಪದಾರ್ಥಗಳಿಂದ ಸರ್ವಥಾ ಭಿನ್ನವೂ ಪ್ರತ್ಯೇಕವೂ ಆಗಿದೆ. ನನ್ನ ಆತ್ಮನು ಜ್ಞಾನಿಯೂ, ಆನಂದ ಚೈತನ್ಯ ತೇಜಃಪುಂಜನೂ ಆಗಿದ್ದು ಏಕೆ ಈ ಜಂಜಟಕ್ಕೆ ಸಿಕ್ಕಿದ್ದಾನೆ? ಇದಕ್ಕೆ ಕಾರಣವೇನು? ಇದರಿಂದ ಬಿಡುಗಡೆ ಹೇಗೆ? ಕರ್ಮಗಳು ಹೇಗೆ ಬಂದವು? ಅವುಗಳ ಬಿಡುಗಡೆ ಹೇಗೆ ಮಾಡಬೇಕು?" ಎಂಬ ಆತ್ಮ ಶ್ರದ್ಧೆಯೇ ಸಮ್ಯಗ್ದರ್ಶನ. ಆತ್ಮಶ್ರದ್ಧೆಯು ಯಥಾರ್ಥ ದೇವರು, ಗುರು, ಶಾಸ್ತ್ರಗಳ ಮೂಲಕ ಉಂಟಾಗುತ್ತದೆ. ಆದುದರಿಂದ ಇವುಗಳ ಲಕ್ಷಣಗಳು ಪರಿಚಯವಾಗಿಬೇಕಾಗಿದೆ.

**ದೇವರು :–** ನಿರ್ದೋಷಿಯೂ, ಸರ್ವಜ್ಞನನೂ, ಹಿತೋಪದೇಶಿಯೂ ವೀತರಾಗನೂ, ಜೀವನ್ಮುಕ್ತನೂ ಆದ ಪರಮಾತ್ಮನೇ ನಿಜವಾದ ದೇವರು ಈ ಜಗಜ್ಜಂಜಟದಿಂದ ಬಿಡುಗಡೆ ಹೊಂದಿ ಕರ್ಮಶತ್ರುಗಳನ್ನು ಗೆದ್ದು ಭವ ಸಾಗರವನ್ನು ದಾಟಿ ಅನಂತ ಜ್ಞಾನ, ದರ್ಶನ, ವೀರ್ಯಾದಿ ಅವಿನಾಶೀ ಆತ್ಮೀಕ ಗುಣಗಳನ್ನು ಹೊಂದಿ ಸುಖ ಮಂದಿರ ನಿವಾಸಿಯಾದ ಪವಿತ್ರಾತ್ಮನೇ ದೇವರು, ಈ ದೇವರನ್ನು ನಂಬಿ ಭಕ್ತಿಯಿಂದ ಸ್ತುತಿಸಿ, ವಂದಿಸಿ, ಪೂಜಿಸಿದರೆ ಅದೇ ಪದವಿಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಜಿನರೂ, ಸಿದ್ಧಾತ್ಮರೂ ದೇವರು.

**ಗುರು :–** ಅಂತರಂಗ ಮತ್ತು ಬಹಿರಂಗ ಪರಿಗ್ರಹಗಳಿಂದ ದೂರವಿದ್ದು ಮೇಲ್ಕಂಡ ದೇವನಿಂದ ನಿರೂಪಿತ ಶಾಸ್ತ್ರದ ಪ್ರಕಾರ ಮಹಾವ್ರತ ಪಾಲಕರಾಗಿ ಆತ್ಮಧ್ಯಾನ, ಸ್ವಾಧ್ಯಾಯಗಳಲ್ಲಿ ಮಗ್ನರಾಗಿ ಸುಖ-ದುಃಖಾದಿಗಳಲ್ಲಿ ಸೌಮ್ಯರಾಗಿ, ಉಪಸರ್ಗ ಪರೀಷಹಗಳನ್ನು ಸಹನೆಯಿಂದ ಸಹಿಸುವವರಾಗಿ ಶಿಷ್ಯರಿಗೆ ಕಲ್ಯಾಣ ಮಾರ್ಗವನ್ನು ಬೋಧಿಸುತ್ತ ಇರುವ ಮುನಿಗಳೂ ತಪಸ್ವಿಗಳೂ ಆದ ಶಾಂತಮೂರ್ತಿಗಳೇ ನಿಜವಾದ ಗುರುಗಳು ಇಂಥವರ ಭಕ್ತಿ, ಸೇವೆ, ಪೂಜೆ ಯೋಗ್ಯವಾದುದು. ನಿಗ್ರಂಥರು, ಶ್ರಮಣ ಜಿನಮುನಿಗಳೇ ಗುರುಗಳು.

ಶಾಸ್ತ್ರ :– ಸರ್ವಜ್ಞ ವೀತರಾಗ ಜಿನ ದೇವನಿಂದ ಉಪದೇಶಿಸಲ್ಪಟ್ಟ ಪೂರ್ವಪರ ವಿರುದ್ಧವಿಲ್ಲದ ಆತ್ಮಕಲ್ಯಾಣದ ಉಪಾಯವನ್ನು ತಿಳಿಸುವಂತಹ ವಸ್ತುಗಳ ಅನೇಕಾಂತ ಸ್ವರೂಪವನ್ನು ನಿರ್ಣಯಿಸುವಂತಹ ಮಹಾಮಹಿಮರ ಚರಿತ್ರ ರೂಪವಾದ, ಮೂರು ಲೋಕದ ವಿವರವನ್ನು ತಿಳಿಸುವಂತಹ ಪರಮಾಗಮವೇ ಶಾಸ್ತ್ರ. ಇದು ಹನ್ನೊಂದು ಅಂಗಗಳಿಂದಲೂ, ಹದಿನಾಲ್ಕು ಪೂರ್ವಗಳಿಂದಲೂ, ನಾಲ್ಕು ಅನುಯೋಗಗಳಿಂದಲೂ ಕೂಡಿದೆ. ಇಂಥ ಶಾಸ್ತ್ರವು ಕೇಳುವುದಕ್ಕೂ ಸ್ವಾಧ್ಯಾಯ ಮಾಡುವುದಕ್ಕೂ ನಮಸ್ಕಾರಕ್ಕೂ ಯೋಗ್ಯವಾದುದು.

ಹೀಗೆ ಮೇಲ್ಕಂಡ ನಿಜವಾದ ದೇವ, ಗುರು, ಶಾಸ್ತ್ರಗಳಲ್ಲಿ ದೃಢವಾದ ನಂಬಿಕೆ ಇಟ್ಟಿರುವುದೇ ಸಮ್ಯಕ್ತ್ವ, ಅಥವಾ ಸಮಗ್ದರ್ಶನ. ಇದು ಎಂಟು ಅಂಗಗಳಿಂದ ಕೂಡಿಯೂ, ಮೂರು ಮೂಢಗಳಿಂದ ರಹಿತವಾಗಿಯೂ, ಎಂಟು ಮದಗಳಿಲ್ಲದುದೂ ಮತ್ತು ಆರು ಅನಾಯತನಗಳಿಲ್ಲದುದೂ ಆಗಿದೆ.

ಅಷ್ಟಾಂಗ :– 1) ನಿಃಶಂಕಾ 2) ನಿಃಕಾಂಕ್ಷಾ 3) ನಿರ್ವಿಚಿಕಿತ್ಸಾ 4) ಅಮೂಢ ದೃಷ್ಟಿ 5) ಉಪಗೂಹನ 6) ಸ್ಥಿತೀಕರಣ 7) ವಾತ್ಸಲ್ಯ 8) ಪ್ರಭಾವನ. ಸಮ್ಯಗ್ ದೃಷ್ಟಿಯು ಇವುಗಳನ್ನು ಹೊಂದಿರಬೇಕು.

**1. ನಿಃಶಂಕಾ** :– ಯಥಾರ್ಥ ದೇವ, ಗುರು, ಶಾಸ್ತ್ರಗಳನ್ನೂ ವಸ್ತುವಿನ ಯಥಾಸ್ಥಿತಿಯನ್ನೂ ಸಂದೇಹವಿಲ್ಲದೆ ನಂಬುವುದು ನಿಃಶಂಕಿತಾಂಗವೆಂದು ಹೆಸರು. ಈ ನಂಬಿಕೆಯುಳ್ಳ ಸಮ್ಯಗ್‌ದೃಷ್ಟಿಯು ವೀರ ಯೋಧನಂತೆ ನಿರ್ಭೀತನಾಗಿ ಸಂಸಾರ ಸುಖ ದುಃಖಗಳ ಪರಂಪರೆಗಳನ್ನು ಕಿತ್ತೊಗೆದು ಆತ್ಮೋನ್ನತಿಯ ಮಾರ್ಗದಲ್ಲಿ ಮುನ್ನುಗ್ಗುತ್ತಾ ಇರುತ್ತಾನೆ.

**2. ನಿಃಕಾಂಕ್ಷಾ** :– ಇಂದ್ರಿಯಜನಿತವಾದ ಸಾಂಸಾರಿಕ ಸುಖ ದುಃಖಗಳು ಪುಣ್ಯಪಾಪಗಳಿಗೆ ಅಧೀನವಾಗಿವೆ. ಈ ಸುಖವು ಕ್ಷಣ ಭಂಗುರವಾದುದು. ಸಂಸಾರದಲ್ಲಿ ಸುಖಕ್ಕಿಂತ ದುಃಖದ ಅನುಭವವೇ ಹೆಚ್ಚು ಎಂದು ತಿಳಿದು ಸಂಸಾರ, ಶರೀರ ಭೋಗಗಳಲ್ಲಿ ಉದಾಸೀನ ಭಾವನೆಯಿಂದ ಇದ್ದು, ಮಾನವೋಚಿತ ಕಾರ್ಯನಿರತರಾಗಿ ಕ್ರೋಧ, ಮಾನ, ಮಾಯೆ, ಲೋಭಗಳಿಗೆ ಸಿಲುಕದೆ ಪ್ರತಿಫಲಾಪೇಕ್ಷೆಯಿಲ್ಲದೆ ಧರ್ಮಕಾರ್ಯಗಳನ್ನು ಮಾಡುತ್ತಿರುವುದೇ ನಿಃಕಾಂಕ್ಷೆ. ಈ ನಂಬಿಕೆಯುಳ್ಳ ಸಮ್ಯಕ್ ದೃಷ್ಟಿಯು ಅನೇಕ ಧರ್ಮ ಕಾರ್ಯಗಳನ್ನು ಆತ್ಮಕಲ್ಯಾಣ ಮತ್ತು ಪರಕಲ್ಯಾಣವನ್ನು ಮಾಡುತ್ತಾನೆಯೇ ಹೊರತು ಇದರಿಂದ ತನಗೆ ಯಶಸ್ಸು, ಐಶ್ವರ್ಯ ಅಥವಾ ಸಾಂಸಾರಿಕ ಸುಖಭೋಗಗಳುಂಟಾಗಲಿ ಎಂದಲ್ಲ.



**3. ನಿರ್ವಿಚಿಕಿತ್ಸಾ** :– ಶರೀರವು ಸ್ವಭಾವದಿಂದಲೇ ಅಪವಿತ್ರವಾದುದು. ಸಪ್ತಧಾತುಗಳಿಂದ ಕೂಡಿದುದು. ನವದ್ವಾರ ಉಳ್ಳದ್ದೂ ರೋಗ ಪೀಡಿತವೂ ಆಗಿರುತ್ತದೆ. ಹೀಗಿದ್ದೂ ತನ್ನ ಮತ್ತು ಪರರ ಶರೀರವನ್ನು ಕಂಡು ಅಸಹ್ಯ ಪಟ್ಟುಕೊಳ್ಳದೆ ಇದು ರತ್ನತ್ರಯದಿಂದ ಶುದ್ಧಿ ಹೊಂದಬಲ್ಲದೆಂದು ತಿಳಿಯುವುದೇ ನಿರ್ವಿಚಿಕಿತ್ಸಾ. ಇದರ ನಂಬಿಕೆಯುಳ್ಳವನು ತನ್ನ ಅಶುಭೋದಯ ಕರ್ಮದಿಂದ ಇಷ್ಟವಿಯೋಗ ಮತ್ತು ಅನಿಷ್ಟಸಂಯೋಗವಾದರೂ ಸಮಾಧಾನಿಯಾಗಿರುತ್ತಾನೆ. ರೋಗಿ, ದರಿದ್ರ, ಹೀನ, ನೀಚ, ಮಲಿನರನ್ನು ನೋಡಿ ಜುಗುಪ್ಸೆ ಪಟ್ಟುಕೊಳ್ಳುವುದಿಲ್ಲ. ಇವೆಲ್ಲ ಅವರವರ ಕರ್ಮಫಲಗಳೆಂದು ಭಾವಿಸುತ್ತಾನೆ. ಈ ಜಗತ್ತು ಪರಿವರ್ತನಶೀಲವಾದುದು. ಇಂದು ಶ್ರೀಮಂತ, ನಾಳೆ ಬಡವ, ಇಂದು ನಿರೋಗಿ ನಾಳೆ ರೋಗಿ, ಇಂದು ಸುಖಿ ನಾಳೆ ದುಃಖಿ ಮುಂತಾದವು ಈ ಜಗತ್ತಿನಲ್ಲಿ ನಡೆಯುತ್ತಲೇ ಇರುತ್ತವೆ. ಇದರಿಂದ ಜೀವಿಗೆ ಹರ್ಷ ವಿಷಾದಗಳು ತಾನಾಗಿಯೇ ಉಂಟಾಗುತ್ತವೆಂದು ತಮ್ಮ ಮತ್ತು ಪರರ ಸ್ಥಿತಿಯನ್ನು ಕಂಡು ಕ್ಲೇಶಪಡುವುದಿಲ್ಲ. ತನು-ಮನ-ಧನದಿಂದ ಯಥಾಶಕ್ತಿ ದುಃಖಿತರ ಉದ್ಧಾರಕ್ಕೆ ಸಮ್ಯಗ್‌ದೃಷ್ಟಿಯು ಪ್ರಯತ್ನಿಸುತ್ತಿರುತ್ತಾನೆ.

**4. ಅಮೂಢದೃಷ್ಟಿ** :– ಸತ್ಯಕ್ಕೆ ವಿರುದ್ಧವಾದ ವಿಷಯದಲ್ಲಿ ಮನ ವಚನ ಕಾಯಗಳಿಂದಾಗಲೀ, ಕೃತಕಾರಿತ ಅನುಮೋದನಾದಿಗಳಿಂದಾಗಲೀ ದೂರವಿರುವುದೇ ಅಮೂಢದೃಷ್ಟಿತ್ವ. ಇದರ ಪಾಲಕನಾದ ಸಮ್ಯಕ್ ದೃಷ್ಟಿಯು ಸದಾ ವಿವೇಕಶೀಲನಾಗಿರುತ್ತಾನೆ. ತನ್ನ ಪ್ರತಿಯೊಂದು ಕಾರ್ಯವನ್ನೂ ವಿಚಾರಪೂರ್ವಕ ಮಾಡುತ್ತಾನೆ. ಅವನು ಕಂಡೂ ಕಂಡೂ ಅಧರ್ಮ ಕಾರ್ಯದಲ್ಲಿ ಕೈಹಾಕುವುದಿಲ್ಲ. ಮಿಥ್ಯಾ ದೇವರು, ಗುರು, ಶಾಸ್ತ್ರಗಳಿಗೆ ಮಿಥ್ಯಾ, ಮಣಿ, ಮಂತ್ರ, ಔಷಧಾದಿ ಚಮತ್ಕಾರಗಳಿಗೆ ಮರುಳಾಗುವುದಿಲ್ಲ. ಲೋಭ, ಭಯ, ಆಶೆಗಳಿಂದ ಯಾವ ಕುಮಾರ್ಗದಲ್ಲಿಯೂ ನಡೆಯುವುದಿಲ್ಲ. ಎಲ್ಲ ವಿಧವಾದ ಮೂಢ ನಂಬಿಕೆಗಳನ್ನು ಬಿಟ್ಟಿರುತ್ತಾನೆ.

**5. ಉಪಗೂಹನ** :– ಸ್ವಯಂ ಪರಿಶುದ್ಧವಾದುದೂ ಪೂರ್ವಾಪರ ವಿರುದ್ಧವಿಲ್ಲದುದೂ ಜಿನಧರ್ಮ. ಇದಕ್ಕೆ ಅಜ್ಞಾನಿಗಳಿಂದ ಆಗುವ ಅಪಚಾರ ನಿಂದನೆಯನ್ನು ಹೋಗಲಾಡಿಸಿ ಅವರಿಗೆ ಧರ್ಮದ ಮಹಿಮೆಯನ್ನು ಉಪದೇಶಿಸಿ, ಬುದ್ಧಿವಾದವನ್ನು ಹೇಳುವುದಕ್ಕೆ ಉಪಗೂಹನವೆಂದು ಹೆಸರು. ಇದರ ಪಾಲಕನಾದ ಸಮ್ಯಕ್ ದೃಷ್ಟಿಯು ಪರರ ದೋಷವನ್ನು ಎತ್ತಿ ಆಡುವುದಿಲ್ಲ. ತನ್ನ ಗುಣವನ್ನೂ ಪ್ರಕಟಿಸಿಕೊಳ್ಳುವುದಿಲ್ಲ. ಜೀವಿಗಳ ಅಜ್ಞಾನ ಮತ್ತು ಸ್ವಭಾವವನ್ನು ಮರೆತು

ಅಸತ್ಯವನ್ನಾಡುವ, ಪರಧನವನ್ನಪಹರಿಸುವ ಶೀಲಭ್ರಷ್ಟನಾಗುವ, ಧರ್ಮವನ್ನು ದೂಷಿಸುವ ಕಾರ್ಯದಲ್ಲಿ ತೊಡಗಿರುವವರನ್ನು ಕಂಡು ಸಮ್ಯಕ್ ದೃಷ್ಟಿಯು ಅಂಥವರಿಗೆ ಬುದ್ಧಿ ಹೇಳಿ, ಅವುಗಳಿಂದಾಗುವ ಅನ್ಯಾಯ ಅನಾಹುತಗಳನ್ನು ತಿಳಿಸಿ ಧರ್ಮಮಾರ್ಗದಲ್ಲಿ ನಡೆಸುತ್ತಾನೆ.

**6. ಸ್ಥಿತೀಕರಣ** :– ಬಡತನದಿಂದ, ರೋಗದಿಂದ ಕೆಟ್ಟ ಸಹವಾಸದಿಂದ ಧರ್ಮದಿಂದ ಚಂಚಲರಾದವರನ್ನು ನೋಡಿ ಮತ್ತೆ ಅವರಿಗೆ ತಿಳುವಳಿಕೆ ಹೇಳಿ ಕೈಲಾದ ಸಹಾಯ ಮಾಡಿ ಮತ್ತೆ ಧರ್ಮದಲ್ಲಿ ಶ್ರದ್ಧೆಯಿಂದ ನಡೆಯುವಂತೆ ಮಾಡುವುದಕ್ಕೆ ಸ್ಥಿತೀಕರಣವೆಂದು ಹೆಸರು. ಈ ನಂಬಿಕೆಯುಳ್ಳ ಸಮ್ಯಗ್‌ದೃಷ್ಟಿಯು ಸದಾ ಸೇವಾ ಮನೋಭಾವವುಳ್ಳವನಾಗಿರುತ್ತಾನೆ. ಧಾರ್ಮಿಕನು ಧರ್ಮಚ್ಯುತನಾಗದಂತೆ ಆತನಿಗೆ ಕೈಲಾದ ನೆರವು ನೀಡಿ ಧರ್ಮದಲ್ಲಿ ಸ್ಥಿರೀಕರಿಸುತ್ತಾನೆ.

**7. ವಾತ್ಸಲ್ಯ** :– ನಿಜವಾದ ದೇವರು, ಗುರು, ಶಾಸ್ತ್ರ ಮತ್ತು ಧಾರ್ಮಿಕರಲ್ಲಿ, ವಿದ್ವಾಂಸರಲ್ಲಿ ಭಕ್ತಿ, ಪ್ರೀತಿ, ವಿನಯ, ವಿಶ್ವಾಸವನ್ನಿಟ್ಟಿರುವುದೇ ವಾತ್ಸಲ್ಯ. ಈ ಗುಣವುಳ್ಳ ಸಮ್ಯಗ್‌ದೃಷ್ಟಿಯು ಧರ್ಮ ಮತ್ತು ಧಾರ್ಮಿಕರ ಸೇವಾಸತ್ಕಾರ ಮಾಡುವುದೇ ಒಳ್ಳೆಯದೆಂದು ನಂಬಿರುತ್ತಾನೆ. ಈತನು ಪರರನ್ನೂ ಪರಧರ್ಮವನ್ನೂ ಅವಹೇಳನ ಮಾಡುವುದಿಲ್ಲ. ಸಕಲ ಜೀವಿಗಳಲ್ಲಿಯೂ ದಯಾಭಾವನೆ ಹೊಂದಿರುತ್ತಾನೆ. ಸಮ್ಯಗ್ ದೃಷ್ಟಿಯಾದ ಗುರುಗಳನ್ನೂ ಪೂಜ್ಯಭಾವನೆಯಿಂದ ಸೇವೆಮಾಡುತ್ತಾನೆ. ಅವರ ಆಜ್ಞೆಯನ್ನು ಪಾಲಿಸುತ್ತಾನೆ. ಸಾತ್ವಿಕರಾದ ಸರಿಸಮಾನರಲ್ಲಿ ಸ್ನೇಹಗಳಿಸುತ್ತಾನೆ. ನೀಚರಲ್ಲಿ ಸ್ನೇಹವನ್ನಾಗಲೀ ವೈರವನ್ನಾಗಲೀ ಮಾಡುವುದಿಲ್ಲ. ದೀನ ದುಃಖಿಗಳಲ್ಲಿ ಸದಾ ಕರುಣೆಯಿಂದ ಯಥಾಶಕ್ತಿ ಸಹಾಯಮಾಡುತ್ತಾನೆ. ಇದೇ ಧಾರ್ಮಿಕನ ಧರ್ಮವಾತ್ಸಲ್ಯ.

**8. ಪ್ರಭಾವನ** :– ತಾನು ನಂಬಿ ನುಡಿದು ನಡೆಯುವ ಪವಿತ್ರ ಪಾವನವಾದ ಜಿನಧರ್ಮದ ಮಹಿಮೆಯನ್ನು ಪ್ರಚಾರ ಮಾಡುತ್ತ ಪ್ರವರ್ತಿಸುವುದಕ್ಕೆ ಪ್ರಭಾವನೆಯೆಂದು ಹೆಸರು. ಈ ಗುಣವುಳ್ಳ ಸಮ್ಯಗ್ದೃಷ್ಟಿಯು ಧರ್ಮಪ್ರಚಾರಕನಾಗಿ ಜನತೆಯಲ್ಲಿ ಹಬ್ಬಿರುವ ಅಜ್ಞಾನರೂಪಿ ಅಂಧಕಾರವನ್ನು ದೂರಮಾಡಿ ಅಹಿಂಸಾಮಯ ಪರಮ ಪರಂಜ್ಯೋತಿಯ ಧರ್ಮ ಪ್ರಭಾವನೆಯನ್ನು ಸರ್ವದಾ ಪ್ರಸಾರಮಾಡುತ್ತಾ ಇರುತ್ತಾನೆ. ಈತನು ಧರ್ಮೋನ್ನತಿಯಲ್ಲಿ ಸದಾ ಪ್ರಯತ್ನಶೀಲನಾಗಿರುತ್ತಾನೆ. ಸಮ್ಯಗ್‌ದೃಷ್ಟಿಯು ಸ್ವಯಂ ಸದಾಚಾರಿಯು,



ಶ್ರದ್ಧಾವಂತನೂ, ಭಕ್ತಿವಂತನೂ, ನಿರ್ಲೋಭಿಯೂ, ನಿಷ್ಕಪಟಿಯೂ, ಸಹನಶೀಲನೂ, ಕರುಣಾಮಯನೂ, ಪರೋಪಕಾರಿಯೂ, ನ್ಯಾಯ ವ್ಯವಹಾರಿಯೂ ಆಗಿರುತ್ತಾನೆ. ಇಂತಹ ಗುಣಿಯನ್ನು ಕಂಡ ಬೇರೆಯವರೂ ಅವನ ಆದರ್ಶವನ್ನು ಅನುಕರಿಸುವುದರಲ್ಲಿ ಸಂದೇಹವಿಲ್ಲ. ಸಮ್ಯಗ್‌ದೃಷ್ಟಿ ಇದ್ದ ಕಡೆ ಧರ್ಮ ಪ್ರಭಾವನೆಯು ತಾನಾಗಿಯೇ ಆಗುತ್ತದೆ.

ಹೀಗೆ ಸಮ್ಯಗ್ದರ್ಶನವುಳ್ಳವನಿಗೆ ಮೇಲ್ಕಂಡ ಅಷ್ಟಾಂಗಗಳು ಪರಿಪೂರ್ಣ ವಾಗಿರಬೇಕು.

ಸಮ್ಯಗ್‌ದೃಷ್ಟಿಯು ಅಂಧಶ್ರದ್ಧೆಯಿಂದ ದೂರನಿರಬೇಕು ಈ ಅಂಧಶ್ರದ್ಧೆಗೆ ಮೂಢತ್ವವೆಂದು ಹೆಸರು.

ಅದು ಮುಖ್ಯವಾಗಿ ಮೂರು ವಿಧ :- 1) ದೇವಮೂಢತೆ, 2) ಗುರುಮೂಢತೆ, 3) ಲೋಕಮೂಢತೆ.

**1. ದೇವಮೂಢತೆ** :– ರಾಗ ದ್ವೇಷಯುಕ್ತರಾದ ಸಂಸಾರ ಬಂಧನಕ್ಕೆ ಸಿಕ್ಕಿರುವಂತಹ ಮಿಥ್ಯಾ ದೇವ ದೇವಿಯರನ್ನು ಪೂಜಿಸುವುದು ದೇವ ಮೂಢತ್ವವೆಂದು ಹೆಸರು. ರಾಜ್ಯ, ಸಂಪತ್ತು, ಐಶ್ವರ್ಯ, ಪುತ್ರ, ಧನ, ಧಾನ್ಯ, ವಾಹನಾದಿಗಳ ಪ್ರಾಪ್ತಿಗಾಗಿ ಮಿಥ್ಯಾದೃಷ್ಟಿ ಭವನವಾಸಿ, ವ್ಯಂತರ, ಜೋತಿಷ್ಕ, ದೇವತೆಗಳನ್ನು ಪೂಜಿಸುವುದೂ ದೇವಮೂಢತ್ವವೇ. ಲೋಭಕ್ಕೆ ಒಳಗಾಗಿ ಜಿನಶಾಸನ ದೇವತೆಗಳನ್ನು ಪೂಜಿಸುವುದೂ. ದೇವಮೂಢತ್ವವೇ ಆಗುತ್ತದೆ. ಮರ, ಕಲ್ಲು, ಗುಂಡು, ನೀರು, ಮಾರಿ, ಚಂಡಿ ಮುಂತಾದುವುಗಳು ದೇವಸ್ವರೂಪಗಳಲ್ಲದುವು ಗಳನ್ನು ಪೂಜಿಸುವುದರಿಂದ ತನಗೇ ಅನೇಕ ಕಾರ್ಯಗಳು ಸಿದ್ಧಿಸುತ್ತವೆಂದು ನಂಬುವುದು ದೇವಮೂಢತೆ. ಸಮ್ಯಗ್‌ದೃಷ್ಟಿಯು ಇದನ್ನು ನಂಬದೆ ಸರ್ವಜ್ಞ ವೀತರಾಗ ಜಿನರೊಬ್ಬರೇ ದೇವರೆಂದು ಶ್ರದ್ಧೆಯಿಂದ ಪೂಜಿಸುತ್ತಾನೆ. ಜಿನಶಾಸನ ದೇವತೆಗಳನ್ನು ಜಿನಧರ್ಮರಕ್ಷಕರು, ಧರ್ಮ ಸೇವಕರು, ಧರ್ಮಾತ್ಮರೆಂದು ನಂಬಿ ಸತ್ಕರಿಸುತ್ತಾನೆ.

**2. ಗುರುಮೂಢತೆ** :– ಅಭಾವ ವೈರಾಗ್ಯದಿಂದ ಉದರಪೋಷಣೆಯ ನಿಮಿತ್ತ ಕಪಟವೇಷ ಧಾರಿಗಳಾದ ಆತ್ಮಜ್ಞಾನವಿಲ್ಲದ ವಂಚಕರನ್ನು ಗುರುಗಳೆಂದು ನಂಬಿ ಸೇವೆ ಮಾಡುವುದೇ ಗುರುಮೂಢತೆ ಅಥವಾ ಪಾಷಂಡಿ ಮೂಢತ್ವವೆಂದು ಹೆಸರು. ಇಂಥ ಗುರು ವೇಷಧಾರಿಗಳು ಬಹಿರಾಡಂಬರದಿಂದ ತುಂಬಿ ಶೀಘ್ರಕೋಪಿಗಳಾಗಿ ಜನರಿಂದ ಆದ ಸತ್ಕಾರಗಳನ್ನು ಬಯಸುತ್ತಾರೆ. ಯಂತ್ರ, ಮಂತ್ರ, ಮಾಯ,

ಮೋಡಿಗಳನ್ನು ಮಾಡಿ ಜನರನ್ನು ಮರುಳುಮಾಡುವುದೂ ಉಂಟು. ಇದಕ್ಕೆ ಮರುಳಾದವನಿಗೆ ಅಧೋಗತಿಯೇ ವಿನಃ ಬೇರೆಯಿಲ್ಲ. ಸಮ್ಯಗ್‌ದೃಷ್ಟಿಯು ಮಹಾವ್ರತಧಾರಿಗಳಾದ ಆತ್ಮಜ್ಞಾನ ಬೋಧಕರಾದ ಆಚಾರ್ಯ, ಉಪಾಧ್ಯಾಯ, ಸಾಧುಗಳನ್ನೇ ಗುರುಗಳೆಂದು ನಂಬಿ ಸೇವೆ ಮಾಡುತ್ತಾನೆ.

**3. ಲೋಕಮೂಢತೆ :–** ನದಿಗಳಲ್ಲಿ ಮುಳುಗುವುದು, ಬಲಿಯನ್ನು ಅರ್ಪಿಸುವುದು, ಮರವನ್ನು ಸುತ್ತುವುದು, ಹರಕೆಯನ್ನು ಹೊರುವುದು, ಭಗವಂತನಿಂದ ಸೃಷ್ಟಿ ಸ್ಥಿತಿ ಲಯಗಳಾಗುತ್ತವೆಂದು ನಂಬುವುದು, ಇಂದ್ರಜಾಲ, ಮಹೇಂದ್ರಜಾಲ, ಮಾಟಶೂನ್ಯ, ಪೀಡೆ, ಪಿಶಾಚ ಮುಂತಾದುವುಗಳನ್ನು ನಂಬುವುದು ಅಥವಾ ವಶವಾಗುವುದು ಲೋಕಮೂಢತ್ವವೆಂದು ಹೆಸರು. ಆದರೆ ಸಮ್ಯಗ್‌ದೃಷ್ಟಿಯು ಈ ಮೂಢತ್ವಕ್ಕೆ, ಜನ ಜಂಗುಳಿಯ ಜಾಲಕ್ಕೆ, ಅಂಧಶ್ರದ್ಧೆಗೆ ಬಲಿಯಾಗದೆ ಸತ್ಯ ಅಸತ್ಯ, ಹಿತ ಅಹಿತ, ಪೂಜ್ಯ ಅಪೂಜ್ಯ ಮುಂತಾದುವುಗಳನ್ನು ವಿಮರ್ಶಿಸಿ ನಂಬಿ ನಡೆದು ನುಡಿಯುತ್ತಾನೆ.

ಸಂಸಾರಿ ಜೀವವು ಯಾವುದೋ ಜನ್ಮದ ಪುಣ್ಯದ ಉದಯದಿಂದ ಉಂಟಾಗುವ ಜಾತಿ, ಕುಲ, ವಿದ್ಯಾ, ಬಲ, ಐಶ್ವರ್ಯ, ರೂಪ, ತಪ, ಮತ್ತು ಪೂಜಾ ಎಂಬ ಎಂಬುವ ವಿಷಯದಲ್ಲಿ ಮಾನ ಕಷಾಯದ ಉದಯದಿಂದಾದ ಅಜ್ಞಾನದಿಂದ ಗರ್ವಪಡುವುದು ಇವುಗಳೇ ಎಂಟು ಮದಗಳು. ಇವುಗಳ ದುರುಪಯೋಗವಾದರೆ ಅಮಲೇರಿದ ಕುಡುಕನಂತಾಗಿ ಅಥವಾ ಮದಿಸಿದ ಆನೆಯಂತಾಗಿ ಅನಾಹುತವನ್ನು ಮಾಡುತ್ತ ಅಧೋಗತಿಯನ್ನು ಹೊಂದುತ್ತಾನೆ. ಆದರೆ ಸಮ್ಯಗ್‌ದೃಷ್ಟಿಯು ಇವುಗಳ ವಿಷಯದಲ್ಲಿ ಗರ್ವ ಪಡುವುದಿಲ್ಲ. ಇವು ನನ್ನ ಸ್ವಸ್ವರೂಪದಿಂದ ಬೇರೆಯಾದವುಗಳು ಮತ್ತೆ ಇದೇ ಜನ್ಮದಲ್ಲಿ ನಾಶ ಹೊಂದತಕ್ಕವುಗಳು. ಇವುಗಳ ಅಮಲಿನಲ್ಲಿ ಸಿಲುಕಬಾರದು ಎಂದು ತಿಳಿದು ಕುಲ, ಜಾತಿ, ವಿದ್ಯಾ, ಬಲ, ಐಶ್ವರ್ಯಾದಿಗಳನ್ನು ಸದುಪಯೋಗಮಾಡಿ ಸದ್ಗತಿಗೆ ಹಾದಿ ಮಾಡಿಕೊಳ್ಳುತ್ತಾನೆ. ಗರ್ವವು ಸಂಸಾರ ಪರಿಭ್ರಮಣಕ್ಕೆ ಕಾರಣವಾಗುವುದೆಂದು ತಾನೂ ಗರ್ವಪಡುವುದಿಲ್ಲ. ಇತರರನ್ನೂ ಅವಮಾನಿಸಿ ಹಿಯಾಳಿಸುವುದಿಲ್ಲ. ಹೀಗೆ ಸಮ್ಯಗ್‌ದೃಷ್ಟಿಯು ಅಷ್ಟಮದರಹಿತನಾಗಿರುತ್ತಾನೆ.

ಧರ್ಮವನ್ನು ಕಾಪಾಡಿಕೊಂಡು ಬಂದವರಿಗೆ ಆ ಧರ್ಮವು ಅವರನ್ನು ಕಾಪಾಡುತ್ತದೆ. ಧರ್ಮವು ದೀಪವಿದ್ದಂತೆ. ಅದಕ್ಕೆ ಎಣ್ಣೆ ಬತ್ತಿಗಳನ್ನು ಹಾಕಿಕೊಂಡು ಕಾಪಾಡಿಕೊಂಡು ಬಂದರೆ ಅದು ಬೆಳಕನ್ನು ಕೊಡುತ್ತದೆ. ಹಾಗೆ ಧರ್ಮಕ್ಕೆ



ಆಶ್ರಯವಿತ್ತು ಅಥವಾ ಆಶ್ರಯವನ್ನು ಹೊಂದುವುದೇ ಆಯತನ ಎನ್ನುತ್ತಾರೆ. ಇದಕ್ಕೆ ವಿರುದ್ಧವಾದ ಅಧರ್ಮಾವಲಂಬನೆಯೇ ಅನಾಯತನವು. ಅನಾಯತನವು ಆರು ಪ್ರಕಾರವಾಗಿದೆ :- 1) ಕುದೇವ, 2) ಕುಗುರು, 3) ಕುಶಾಸ್ತ್ರ, 4) ಕುದೇವೋಪಾಸಕ, 5) ಕುಗುರು ಭಕ್ತ, 6) ಕುಶಾಸ್ತ್ರಾವಲಂಬಿ ಎಂಬೀ ಆರು ಅನಾಯತನ ಸೇವನದಿಂದ ಮೋಕ್ಷಮಾರ್ಗಕ್ಕೆ ವಿರುದ್ಧವಾದ ಮಿಥ್ಯಾತ್ವವು ಪ್ರಾಪ್ತವಾಗಿ ದುಃಖವನ್ನು ಅನುಭವಿಸಬೇಕಾಗುತ್ತದೆ. ಆದುದರಿಂದ ಸಮ್ಯಗ್‌ದೃಷ್ಟಿಯು ಇವುಗಳ ತ್ಯಾಗ ಮಾಡಿರುತ್ತಾನೆ.

ಹೀಗೆ ಶಂಕಾದಿ ಎಂಟು ದೋಷಗಳಿಂದ ದೂರನಾಗಿ ಎಂಟು ಮದಗಳನ್ನು ಬಿಟ್ಟು ಮೂರು ಮೂಢಗಳನ್ನು ತೊರೆದು ಆರು ಅನಾಯತಗಳನ್ನು ತ್ಯಾಗ ಮಾಡಿ ನಿಃಶಂಕಾದಿ ಎಂಟು ಅಂಗಗಳಿಂದ ಸುಶೋಭಿತನಾದವನೇ ಸಮ್ಯಗ್‌ದೃಷ್ಟಿಯು. ಈತನಿಗೆ ವ್ಯವಹಾರ ಸಮ್ಯಗ್‌ದೃಷ್ಟಿ ಎಂದೂ ಹೆಸರು. ಇವನೇ ಮುಂದುವರಿದು ತನ್ನ ಶುದ್ಧ ಸಚ್ಚಿದಾನಂದ ನಿಶ್ಚಯಾತ್ಮನಲ್ಲಿ ಶ್ರದ್ಧೆಯಿಟ್ಟು 'ತನುವೇ ಜಿನದೇವಾಲಯವೆಂದೂ ಮನವೇ ಸಿಂಹ ಪೀಠವೆಂದೂ ಅನುಪಮಾತ್ಮನೇ ಜಿನನೆಂದೂ' ನಂಬಿ ಬಾಹ್ಯದ ಜಂಜಟವನ್ನು ಮರೆತು ಅಂತರಂಗದಲ್ಲಿ ಲೀನವಾದರೆ ಆತನಿಗೆ ತನ್ನ ನಿಜರೂಪ ಕಾಣುತ್ತದೆ. ಆಗ ಆಗುವ ಆನಂದವೇ ಆತ್ಮಾನಂದ. ಇಂತಹ ಸಾಧಕನಿಗೆ ನಿಶ್ಚಯ ಸಮ್ಯಗ್‌ದೃಷ್ಟಿ ಎಂದು ಹೆಸರು. ಒಟ್ಟಿನಲ್ಲಿ ಸಮ್ಯಗ್ ದೃಷ್ಟಿಯು ವ್ಯವಹಾರ ನಿಶ್ಚಯವನ್ನು ತಿಳಿದು ತನ್ನಾತ್ಮತತ್ತ್ವವನ್ನು ನಂಬಿ ನಿಜವನ್ನು ಸಾಧಿಸುತ್ತಾನೆ.

ಈ ಸಮ್ಯಗ್‌ದೃಷ್ಟಿಯು ಯತಾರ್ಥವಾದ ಧರ್ಮಕಾರ್ಯದಲ್ಲಿ ಶ್ರದ್ಧೆಯುಳ್ಳವನಾಗಿ ಕ್ರಮೇಣ ಶರೀರಾದಿ ಬಾಹ್ಯ ಭೋಗಗಳಿಂದ ವಿರಕ್ತನಾಗಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅಂತರಂಗ ಶತ್ರುಗಳನ್ನು ಜಯಿಸುತ್ತಾನೆ. ಆಗ ಇವನು ಚಿದಾನಂದೈಕ ಸುಖಸಾಮ್ರಾಜ್ಯವೆಂಬ ಮುಕ್ತಿಮಂದಿರವನ್ನು ತಲುಪಲು ಅರ್ಹನಾಗುತ್ತಾನೆ. ಆ ಮುಕ್ತಿಮಂದಿರಕ್ಕೆ ಸಮ್ಯಗ್ದರ್ಶನವೇ ಮೊದಲ ಮೆಟ್ಟಿಲು (ಪಾವಟಿಗೆ) ಎರಡನೆಯದು ಸಮ್ಯಕ್‌ಜ್ಞಾನ. ಮೂರನೆಯದು ಸಮ್ಯಕ್ ಚಾರಿತ್ರ. ಈ ಮೂರೇ ಮೆಟ್ಟಿಲು ಮುಕ್ತಿಮಂದಿರಕ್ಕೆ. ಇವೇ ರತ್ನತ್ರಯಗಳು.

ಆದರಲ್ಲೂ ಸಮ್ಯಗ್ದರ್ಶನದ ಮಹಿಮೆಯು ಅಪೂರ್ವವಾದುದು. ಸಮ್ಯಗ್‌ದೃಷ್ಟಿಯು ಮರಣಾನಂತರ ಸ್ವರ್ಗಾದಿ ಉನ್ನತ ಪದವಿಯನ್ನು

ಹೊಂದುವನು. ಅದರಲ್ಲೂ ನೀಚ ದೇವಗತಿ, ಸ್ತ್ರೀ ಪರ್ಯಾಯ, ಸ್ಥಾವರಾದಿವಿಕಲತ್ರಯ ಮತ್ತು ನಾರಕ ಪರ್ಯಾಯಗಳನ್ನು ಹೊಂದುವುದೇ ಇಲ್ಲ. ಚಾಂಡಾಲನಾಗಿದ್ದವನೂ ಸಮ್ಯಗ್ದರ್ಶನದ ಪ್ರಾಪ್ತಿಯಿಂದ ಪೂಜ್ಯನಾಗುತ್ತಾನೆ. ಸಮ್ಯಗ್ದರ್ಶನಲಬ್ಧಿಯು ಆಧ್ಯಾತ್ಮ ಜೀವನದ ಅಮೃತಪಾನವಿದ್ದಂತೆ. ಅತೀಂದ್ರಿಯ ಸುಖದ ಸಂಪದ ದೊರೆತಂತೆ. ಮೋಕ್ಷವೃಕ್ಷದ ಬೀಜದಂತೆ. ಸಂಸಾರಸಾಗರದಿಂದ ಪಾರುಮಾಡುವ ಹಡಗಿದ್ದಂತೆ. ಯಾವ ಜೀವಕ್ಕೆ ಈ ಸಮ್ಯಗ್ದರ್ಶನದ ಪರಿಚಯ ಉಂಟಾಗಿ ಅದು ಪ್ರಾಪ್ತವಾಗುವ ಶಕ್ತಿ ಉಂಟಾಗುತ್ತದೋ ಅದೇ ಭವ್ಯ ಜೀವಿ. ಆದುದರಿಂದ ಸಮ್ಯಗ್ದರ್ಶನವು ಮುಕ್ತಿಮಂದಿರದ ಮೊದಲ ಮೆಟ್ಟಲು.

ದುಃಖೇ ಸುಖೇ ವೈರಿಣಿ ಬಂಧುವರ್ಗೇ ।
ಯೋಗೇ ವಿಯೋಗೇ ಭವನೇ ವನೇ ವಾ ।
ನಿರಾಕೃತಾಶೇಷ ಮಮತ್ವ ಬುದ್ಧೇಃ ।
ಸಮಂ ಮನೋಮೇಸ್ತು ಸದಾಪಿನಾಥ ॥

ಪರಮಾತ್ಮನೆ! ಎಲ್ಲಾ ರಾಗಗಳನ್ನೂ ಮಮತ್ವವನ್ನೂ ನಾಶಮಾಡಲು ನನ್ನ ಚಿತ್ತವು ಸದಾ ಸಮತ್ವದಿಂದ ಕೂಡಿರಲಿ. (ನನ್ನ ಹೃದಯದಿಂದ ಮಮಕಾರವು ಸಂಪೂರ್ಣವಾಗಿ ದೂರ ಸರಿದು ಹೋಗಲಿ) ಸುಖ ದುಃಖಗಳಲ್ಲಿ, ಶತ್ರುಮಿತ್ರರಲ್ಲಿ, ಲಾಭನಷ್ಟಗಳಲ್ಲಿ, ಭವನ ವನಗಳಲ್ಲಿ ನನ್ನ ಚಿತ್ತವು ಸದಾ ಸಮತ್ವದಿಂದ ಕೂಡಿರಲಿ. ನನಗೆ ರತ್ನತ್ರಯ ಪ್ರಾಪ್ತವಾಗಲೀ:

## 9. ದೇವದರ್ಶನ

ಆತ್ಮಧ್ಯಾನ, ಶಾಸ್ತ್ರಸ್ವಾಧ್ಯಾಯ, ಧರ್ಮೋಪದೇಶಗಳನ್ನು ಕೇಳುವುದು, ತತ್ವ ಚಿಂತನೆ ಮಾಡುವುದು, ದ್ವಾದಶಾನುಪ್ರೇಕ್ಷೆ ಮತ್ತು ದಶಧರ್ಮಪಾಲನೆ ಮುಂತಾದುವೆಲ್ಲಾ ಆತ್ಮದರ್ಶನ ಮತ್ತು ಆತ್ಮೋದ್ಧಾರಕ್ಕೆ ಇರುವ ಮಾರ್ಗಗಳು. ಇವುಗಳೆಲ್ಲಕ್ಕಿಂತ ಪ್ರಪ್ರಥಮವಾಗಿ ದೇವದರ್ಶನವು ಪರಿಣಾಮಕಾರಿಯಾದ ಮಾರ್ಗ. ಇದು ಸ್ವಾತ್ಮದರ್ಶನದ ಪ್ರಥಮ ಸೋಪಾನ. ಆತ್ಮನು ಜ್ಞಾನಮಯ,



ಆನಂದಮಯ, ಶುದ್ಧಚಿನ್ಮಯ ಮತ್ತು ಅವಿನಾಶಿ. ಇಂತಹ ಆತ್ಮನು ಸರ್ವರಲ್ಲೂ ಇದ್ದರೂ ಅದರ ಅರಿವಿಲ್ಲದೆ ಇರುವುದರಿಂದ ಭವ ಪರಂಪರೆಯಲ್ಲಿ ಪರದಾಡಬೇಕಾಗಿದೆ. ಅದರ ಅರಿವಾಗಬೇಕಾದರೆ ಭಗವಂತನ ಸಾನಿಧ್ಯ ಬೇಕು. ಅಂದರೆ ಭಗವಂತನ ದರ್ಶನದ ಮೂಲಕ ಆತ್ಮದರ್ಶನವನ್ನು ಮಾಡಿಕೊಳ್ಳಬಹುದು.

ನಾವು ನೋಡುವ ಪದಾರ್ಥಗಳು ಜಡವಾಗಲೀ, ಚೇತನವಾಗಲೀ, ಅದರ ಪ್ರತಿರೂಪವು ನಮ್ಮ ಹೃದಯದಲ್ಲಿ ಪ್ರತಿಬಿಂಬಿತವಾಗುವುದು ಸಹಜ. ಅದಕ್ಕೆ ತಕ್ಕಂತೆ ಪರಿಣಾಮವಾಗುತ್ತದೆ. ಪರಿಣಾಮಕ್ಕೆ ತಕ್ಕಂತೆ ಫಲಾ ಫಲಗಳು ದೊರೆಯುತ್ತವೆ. ಹಾಗೆಯೇ ನಮ್ಮ ಗುರಿಯು ಸ್ವಾತ್ಮೋಪಲಬ್ಧಿ, ಅದರಿಂದ ಸ್ಥಿರಸೌಖ್ಯಸಿದ್ಧಿಯನ್ನು ಪಡೆಯುವುದೇ ಆಗಿದೆ. ಆದುದರಿಂದ ಅಂತಹ ಲಬ್ಧಿ, ಸಿದ್ಧಿಗಳನ್ನು ಪಡೆದಂಥವರ ಮಾರ್ಗದರ್ಶನ ನಮಗೆ ಬೇಕು. ಆ ಮಾರ್ಗವನ್ನು ತೋರಿಸಿದವರು ಅರಹಂತ ಪರಮೇಷ್ಠಿಗಳು. ಅನಾದಿ ಕಾಲದಿಂದ ಆತ್ಮನಿಗೆ ಮುತ್ತಿದ್ದ ಕರ್ಮಬಂಧನದಿಂದ ಬಿಡುಗಡೆ ಹೊಂದಿ, ತನ್ನ ನೈಜ ಸ್ವರೂಪವನ್ನು ಪ್ರಕಟ ಮಾಡಿಕೊಂಡು ದೋಷರಹಿತರೂ, ಸರ್ವಜ್ಞರೂ, ಹಿತೋಪದೇಶಿಗಳೂ ಆದ, ಸಹಜಾನಂದ ಶುದ್ಧರಾದ ಆತ್ಮರೇ ಪರಮಾತ್ಮರು. ಇವರ ಪ್ರತಿರೂಪ (ಬಿಂಬ) ವನ್ನು ಭಕ್ತಿಪೂರ್ವಕವಾಗಿ ದರ್ಶನಮಾಡಿದರೆ ಅದೇ ವೀತರಾಗ ಶಾಂತಭಾವದ ಕರುಣಾಮುದ್ರೆಯ ಪ್ರತಿಬಿಂಬವು ಹೃದಯದಲ್ಲಿ ಅಚ್ಚೊತ್ತಿದಂತಾಗಿ ಪರಿಣಾಮ ಶುದ್ಧವಾಗುತ್ತದೆ. ತತ್ಫಲವಾಗಿ ಅಮಿತಾನಂದದ ಅನುಭವವಾಗುತ್ತದೆ. ಈ ದೇವದರ್ಶನವು ಆತ್ಮೋತ್ಥಾನದ ಸಹಜ ಮತ್ತು ಸರಳವಾದ ಸಾಧನ. ಜಿನಧರ್ಮಾವಲಂಬಿಯಾಗಲು ಹೊರಟ ಭವ್ಯರಿಗೆ ಗುರುಗಳಿಂದ ದೊರೆಯುವ ಮೊದಲ ಉಪದೇಶವೆಂದರೆ 'ನಿತ್ಯವೂ ನೀನು ಜಿನಮಂದಿರಕ್ಕೆ ಹೋಗಿ ದೇವರ ದರ್ಶನಮಾಡು. ಹೀಗೆ ಮಾಡುತ್ತಾ ಸ್ತುತಿ ಪೂಜಾದಿಗಳ ಆಚರಣೆಯ ತಾನಾಗಿಯೇ ಬರುತ್ತದೆ. ಆಧ್ಯಾತ್ಮಜೀವನ ನಿನ್ನಲ್ಲಿ ಅಂಕುರಿಸುತ್ತದೆ.' ದರ್ಶನದಿಂದ ಸಮ್ಯಕ್ತ್ವ ಪ್ರಾಪ್ತವಾಗುತ್ತದೆ.

ಇದಲ್ಲದೆ ಬೊಗಸೆಯಲ್ಲಿದ್ದ ನೀರು ಬೆರಳ ಸಂಧಿಯಲ್ಲಿ ಸೋರಿ ಹೋಗುವಂತೆ ಜಿನೇಶ್ವರನ ದರ್ಶನದಿಂದ ಕರ್ಮಗಳು ಸೋರಿ ಹೋಗುತ್ತವೆ. ಇದುವೇ ಪರಿಪಾಟಿಯಿಂದ, ಕ್ರಮದಿಂದ ಸ್ವರ್ಗಾದಿ ಮೋಕ್ಷಕ್ಕೆ ಸೋಪಾನವಾಗುತ್ತದೆ. ಹೇಗೆಂದರೆ ಸಾಧಕನು ಮೊದಲು ಭಗವಂತನ ಪಾದಸೇವೆಯನ್ನು 'ದಾಸೋಹಂ' ಭಾವನೆಯಿಂದ ಮಾಡಬೇಕು. ಅಂದರೆ 'ಸ್ವಾಮಿ! ನಾನು ನಿನ್ನದಾಸ, ನೀನು ಹೋದ

ಮಾರ್ಗ, ನೀನು ಹೇಳಿದಮಾತು ನನಗೆ ಹಿಡಿಸಿವೆ. ಆ ಮಾರ್ಗದಲ್ಲಿ ನಾನು ಬರುತ್ತಿದ್ದೇನೆ. ಇದೇ ಭಾವನೆಯಿಂದ ನಿನ್ನ ಉಪದೇಶಸಾರವಾದ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರರೂಪವಾದ ಮುಕ್ತಿ ಮಾರ್ಗದಲ್ಲಿ ಅಡಿ ಇಟ್ಟಿದ್ದೇನೆ' ಎಂಬ ಭಾವನೆಯಿಂದ ಭಗವದ್ಭಕ್ತನಾಗಬೇಕು. ಅದೇ ಭಕ್ತನು ಮುಂದುವರಿದು ಭಗವಂತನ ರೂಪಗುಣಗಳ ಪರಿಚಯ ಮಾಡಿಕೊಂಡು 'ಸೋಹಂ' ಭಾವನೆ ಮಾಡಬೇಕು. ಅಂದರೆ ಸ್ವಾಮಿ! ನಿನ್ನ ದರ್ಶನದ ಬಲದಿಂದ ನನಗೆ 'ನೀನೇ ನಾನು' ಅಥವಾ ನಿನ್ನಂತೆ ನಾನು ಆಗಬಲ್ಲೆ, ಆ ರೀತಿ ಆಗಲು ಇರುವ ಮಾರ್ಗದ ಪೂರ್ಣ ಪರಿಚಯವಾಗಿದೆ. ಎಂಬ ಪರಿಣಾಮವನ್ನುಂಟು ಮಾಡಿಕೊಳ್ಳಬೇಕು. ಭಗವಂತನ ದರ್ಶನಮಾಡುತ್ತಾ ಮಾಡುತ್ತಾ ಮನೋಮಂದಿರದಲ್ಲಿ ತದಾಕಾರವನ್ನು ಕಾಣಲು ಮಾಡುವ ಜಪಧ್ಯಾನಾದಿಗಳಿಂದ 'ನೀನೇ ನಾನು' ಎಂಬ ಭಾವನೆ ಮೂಡುತ್ತದೆ. ಅನಂತರ ಹಾಗೇ ಮುಂದುವರಿದ ಭಕ್ತನಿಗೆ 'ಅಹಂ' ಭಾವನೆಯುಂಟಾಗುತ್ತದೆ. ಅಂದರೆ 'ನಾನೇ ನಾನು' ಎಂಬ ಆತ್ಮಸಾಕ್ಷಾತ್ಕಾರ ಉಂಟಾಗುತ್ತದೆ. ಇದೇ ದೇವದರ್ಶನದಿಂದ ಒದಗುವ ಫಲ. ಅಹಾ! ಭಗವಂತನ ಬಿಂಬದರ್ಶನದಿಂದ ಇದಕ್ಕಿಂತಲೂ ಮಿಗಿಲಾದದ್ದು ಇನ್ನೇನು ಬೇಕು ?

ತನ್ನ ಮುಖವನ್ನು ನೋಡಿಕೊಳ್ಳಲು ಕನ್ನಡಿ ಬೇಕು. ಆದರಿಂದ ಮುಖದಲ್ಲಿರುವ ಹುಳುಕು-ಥಳುಕು, ಸೌಂದರ್ಯ ಮತ್ತು ಕುರೂಪ ಗೋಚರ ವಾಗುತ್ತದೆ. ಅಂತೆಯೇ ಆತ್ಮಸ್ವರೂಪವನ್ನು ನೋಡಿಕೊಳ್ಳಲು ಒಂದು ಕನ್ನಡಿ ಬೇಕು. ಅದೇ ಅರಹಂತ ಪರಮಾತ್ಮನ ಶುದ್ಧ, ಶಾಂತ, ನಿರ್ವಿಕಾರ, ನಿರುಪಮ, ನಿರ್ಮಲ, ನಿರಂಜನ, ನಿರಾಮಯ, ನಿಜಗುಣ ಜಿನಬಿಂಬ. ಈ ದರ್ಪಣದಿಂದ ಆತ್ಮನಿಗೆ ಮುತ್ತಿರುವ ಕ್ರೋಧಾದಿ ದೋಷಗಳನ್ನು ಅಳಿಸಿಕೊಳ್ಳಲು, ಸಹಜ ಸೌಂದರ್ಯದ ತನ್ನಾತ್ಮ ಚೈತನ್ಯವನ್ನು ಅರಿಯಲು ಸಾಧ್ಯವಾಗುವುದು. ಏಕೆಂದರೆ ಆ ಭಗವಂತ ನಿರ್ದೋಷಿ, ಸರ್ವಜ್ಞ, ವೀತರಾಗ ವಿಜ್ಞಾನಿ. ಅವರು ಸಹಜಾನಂದದಲ್ಲಿ ಲೀನರಾದವರು. ಅವರ ಪ್ರತಿರೂಪದ ದರ್ಶನದಿಂದ ಅಂತಹ ಗುಣಗಳೇ ಪ್ರಕಟವಾಗುವುದರಲ್ಲಿ ಸಂದೇಹವಿಲ್ಲ. ಕನ್ನಡಿಯು ದೋಷಯುಕ್ತವಾಗಿದ್ದಲ್ಲಿ ನೋಡಿಕೊಳ್ಳುವವನೂ ವಿಕಾರಿಯಾಗಿಯೇ ಕಾಣುತ್ತಾನೆ. ಹಾಗೆಯೇ ನೋಡುವ ವಸ್ತು ದೋಷಯುಕ್ತವಾಗಿದ್ದರೆ ಅದನ್ನು ನೋಡುವವನ ಭಾವವು ವಿಕಾರವಾಗುತ್ತದೆ. ಭಾವಕ್ಕೆ ತಕ್ಕಂತೆ ಕರ್ಮಬಂಧವಾಗುತ್ತದೆ. ಅದನ್ನು ಅನುಸರಿಸಿ ಸುಖ-ದುಃಖ ಉಂಟಾಗುತ್ತದೆ. 'ಯದ್ಭಾವಂ ತದ್ಭವತಿ' ಎಂಬಂತೆ.

ಮಹಾಮುನಿಗಳೂ, ಆಧ್ಯಾತ್ಮ ಸಾಧಕರೂ, ತಪಸ್ವಿಗಳೂ ಇದೇ



ಜಿನಬಿಂಬವನ್ನು ತಮ್ಮ ಹೃದಯ ಕಮಲದಲ್ಲಿ ರೂಪಿಸಿಕೊಂಡು ಆ ರೂಪದ ಮಂತ್ರವನ್ನೇ ಜಪಿಸಿ, ಕೊನೆಗೊಮ್ಮೆ ತದ್ರೂಪರೇ ತಾವಾಗುತ್ತಾರೆ. ಇದನ್ನೇ ಭಗವತ್ಸಾಕ್ಷಾತ್ಕಾರವೆನ್ನುತ್ತಾರೆ. ಭಗವಂತನಿಗೆ ಪೂಜೆ, ವಂದನೆ ಮಾಡುವುದು, ನಿರಂತರವೂ ಭವಭವದಲ್ಲೂ ಬರೀ ವಂದನೆ-ಪೂಜೆ ಮಾಡುವುದಕ್ಕಾಗಿಯೇ ಅಲ್ಲ. ಆ ಪದವಿಯನ್ನು, ಆ ಪೂಜ್ಯತೆಯನ್ನು ಒಂದಲ್ಲ ಒಂದು ಭವದಲ್ಲಿ ಪಡೆಯುವುದಕ್ಕೆ. ಅರಹಂತ, ಅರಹಂತ, ಅರಹಂತ ಎನ್ನುವುದು, ಕೊನೆಗೊಮ್ಮೆ ತಾನೇ ಅರಹಂತನಾಗುವುದಕ್ಕೆ ಸಾಧನೆಯಾಗುತ್ತದೆ. ದೋಷರಹಿತ ಪರಮಾತ್ಮನ ದರ್ಶನದಿಂದ ತಾವೂ ದೋಷರಹಿತರಾಗಿ, ಅನಂತಶಕ್ತಿ ಚೈತನ್ಯ ಜ್ಞಾನಾದಿಗಳಿಂದ ಅತಿಶಯವನ್ನು ಪಡೆಯುತ್ತಾರೆ.

ಆತ್ಮನು ಪರಮಾತ್ಮನಾದಾಗ ದೇವೇಂದ್ರಾದಿಗಳು ಒಂದು ಸಮವಸರಣವೆಂಬ ಅಂಬರ ಮಂದಿರವನ್ನು ನಿರ್ಮಾಣ ಮಾಡುತ್ತಾರೆ. ಅದರ ಮಧ್ಯದ ಉನ್ನತ ವೇದಿಕೆಯಮೇಲೆ ಪರಮಾತ್ಮರಾದ ಅರಹಂತರು ವಿರಾಜಮಾನರಾಗಿ ಜಗತ್ತಿಗೆ ದಿವ್ಯೋಪದೇಶವನ್ನು ಸಾರುತ್ತಾ ಸಂಚರಿಸುತ್ತಾರೆ. ಅಂತಹ ದಿವ್ಯ ಚೇತನ ಮೂರ್ತಿಯ ಸಾಕ್ಷಾತ್ ದರ್ಶನಮಾಡಿ ಉಪದೇಶವನ್ನು ಕೇಳುವುದರಿಂದ ಜೀವಿಗಳಿಗೆ ಅಪಾರ ಲಾಭವಾಗುವುದು. ಆದರೆ ಆ ಸೌಭಾಗ್ಯದ ಲಬ್ಧಿಯು ಕಳೆದ ಚತುರ್ಥ ಕಾಲದಲ್ಲಿ ಅಂದರೆ ಸುಮಾರು 2550 ವರ್ಷಗಳ ಹಿಂದೆ ದೊರೆಯುತ್ತಿತ್ತು. ಈಗ ಪಂಚಮ ಕಾಲದ ಸ್ಥಿತಿ. ಸಾಕ್ಷಾತ್ ಅರಹಂತರ ದರ್ಶನವು ಈ ಭರತಕ್ಷೇತ್ರದಲ್ಲಿ ದೊರೆಯಲಾರದು. ಆಗಿನ ಎಲ್ಲಾ ಅರಹಂತರೂ ಈಗ ಸಿದ್ಧಾಲಯದಲ್ಲಿ ಲೋಕದ ತುತ್ತ ತುದಿಯಲ್ಲಿ (ತಾವು ಮುಕ್ತಿ ಹೊಂದಿದ ಸ್ಥಳದಿಂದ ನೇರವಾಗಿ ಮೇಲೆ) ಸಹಜಾನಂದ ಜ್ಞಾನಚೇತನ ರೂಪಿಗಳಾಗಿದ್ದಾರೆ. ಆ ಸಿದ್ಧಪರಮೇಷ್ಠಿಗಳ ದರ್ಶನವು ಸಂಸಾರಿ ಜೀವಿಗಳಿಗೆ ಅಲಭ್ಯ, ಅಗೋಚರ.

ಹಾಗಾದರೆ ನಾವು ಆ ದರ್ಶನಾಭಿಲಾಷೆಯನ್ನು ಹೇಗೆ ಪೂರೈಸಿಕೊಳ್ಳಬೇಕು? ಎಂದರೆ ಸಮಾಧಾನ ಇಷ್ಟೆ. ವಾಸ್ತವಿಕ ಅಂಶವೆಂದರೆ ಪ್ರತ್ಯಕ್ಷ ಪದಾರ್ಥದ ಅಭಾವವಿದ್ದಲ್ಲಿ ಅದರ ಪ್ರತಿಕೃತಿಯಿಂದಲೂ ಉಪಯೋಗವನ್ನು ಪಡೆದುಕೊಳ್ಳಬಹುದು. ಅಂದರೆ ನಿಜವಸ್ತು ಇರುವುದರಿಂದಲೇ ಅದರ ಪ್ರತಿಬಿಂಬವಾಗುವುದು. ಹಾಗೆಯೇ ನಕ್ಷೆ, ಚಿತ್ರ, ಫೋಟೋ ಕೂಡ ಉಂಟಾಗುವುದು. ಹಿಂದೆ ಇದ್ದ ಅರಹಂತರ ರೂಪ, ಲಕ್ಷಣವನ್ನು ಆಗಮದಮೂಲಕ ಗಣಧರರೂ, ಗುರುಗಳೂ, ಶ್ರುತಕೇವಲಿಗಳೂ, ಕವಿಗಳೂ, ಕಲಾವಿದರೂ, ಆಚಾರ್ಯರೂ ವರ್ಣಿಸಿಕೊಂಡು, ಉಳಿಸಿಕೊಂಡು ಬಂದಿದ್ದಾರೆ. ಪರಂಪರಾನುಗತವಾಗಿ ಅದೇ ಪ್ರಕಾರ

ಮೂರ್ತಿಗಳ ನಿರ್ಮಾಣ ಮಾಡಿಕೊಂಡು ಬಂದಿದ್ದಾರೆ. ಅವರು ಮುಕ್ತಿಗೆ ಹೋದ ಸಿದ್ಧಕ್ಷೇತ್ರಗಳೂ ವಿಹಾರ ಮಾಡಿದ ಅತಿಶಯಕ್ಷೇತ್ರಗಳೂ ಈಗಲೂ ಇವೆ. ಶಾಸ್ತ್ರೋಕ್ತವಾಗಿ ಇರಿಸಿದ ಪ್ರತಿಕೃತಿಯಿಂದ ಸಂಸ್ಕಾರ ಹೊಂದಿದ ಬಿಂಬದರ್ಶನದ ಲಾಭ ಪಡೆಯುವ ಪದ್ಧತಿಯು ಪ್ರಾಚೀನಕಾಲದಿಂದಲೂ ಪ್ರಚಲಿತವಾಯಿತು.

ಹುಲಿ, ಸಿಂಹ, ಆನೆ ಮುಂತಾದ ಪ್ರಾಣಿಗಳನ್ನು ಮಕ್ಕಳೆದುರಿಗೆ ತಂದು ನಿಲ್ಲಿಸಿ ಪಾಠ ಮಾಡಲು ಸಾಧ್ಯವಿಲ್ಲ. ಆದರೂ ಅವುಗಳ ಚಿತ್ರವನ್ನು ತೋರಿಸಿ ಆ ಪ್ರಾಣಿಗಳ ಸ್ವರೂಪದ ಮಕ್ಕಳಿಗೆ ವೇದ್ಯವಾಗುವಂತೆ ಮಾಡುವುದಿಲ್ಲವೇ? ಹಿಮಾಲಯ ಪರ್ವತ, ಗಂಗಾನದಿ, ಅಮೇರಿಕಾ ದೇಶ ಮುಂತಾದುವುಗಳ ಸ್ಥಾನ-ಮಾನಗಳನ್ನು ನಕ್ಷೆಯೊಂದಿಗೆ ವರ್ಣಿಸುವುದಿಲ್ಲವೇ? ತೀರ್ಥಕ್ಷೇತ್ರ ಸಿದ್ಧಕ್ಷೇತ್ರ, ಅತಿಶಯ ಕ್ಷೇತ್ರಗಳ ಪ್ರತಿಕೃತಿಗಳನ್ನು ಮಾಡಿ, ಅವುಗಳ ಸ್ವರೂಪವು ನೆನಪಿಗೆ ಬರುವಂತೆ ಮಾಡಿ ಅವುಗಳಂತೆಯೇ ಇವೂ ಇವೆ ಎಂಬ ಅರಿವನ್ನು ಮೂಡಿಸುವುದಿಲ್ಲವೇ? ಹಾಗೇ ಪ್ರತ್ಯಕ್ಷ ಅರಹಂತ ವೀತರಾಗರ ಅಭಾವವಿರುವುದರಿಂದ ಅವರ ಪ್ರತಿಮೆಯನ್ನು ಮಾಡಿಸಿ ಪಂಚಕಲ್ಯಾಣಾದಿಗಳ ಸಂಸ್ಕಾರವನ್ನು ಮಾಡಿ ಅದರಲ್ಲಿ ಭಾವಕಳೆಯನ್ನು ತುಂಬಿ, ಸ್ಥಾಪಿಸಿ ಅದನ್ನೇ ಭಾವಿಸಿ, ಧ್ಯಾನಿಸುವುದರ ಮೂಲಕ ದರ್ಶನಲಾಭ ಪಡೆಯಬಹುದು.

ಆಗಮಪ್ರಣೀತ, ಸುಲಕ್ಷಣ ಸರ್ವಾಂಗ ಸಂಪೂರ್ಣ, ಸುಂದರ ಜಿನಬಿಂಬದ ದರ್ಶನದಿಂದಲೇ ಪಾಪನಾಶವೂ ಸ್ವರ್ಗಾದಿ ಮೋಕ್ಷಪದವಿಯೂ ಲಭಿಸುವುದು. ಅರಹಂತ ಭಗವಂತರು ಸಮವಸರಣದಲ್ಲಿ ಕುಳಿತೋ ಅಥವಾ ನಿಂತೋ ನಾಸಿಕಾಗ್ರದಲ್ಲಿ ದೃಷ್ಟಿಯಿಟ್ಟು ಶಾಂತಭಾವ, ನಿರ್ವಿಕಾರ, ಸ್ವಸ್ವರೂಪದಲ್ಲಿ ಲೀನರಾಗಿ ಗಂಭೀರ ಪ್ರಸನ್ನ ಮುದ್ರೆಯಲ್ಲಿ ವಿರಾಜ ಮಾನರಾಗಿರುತ್ತಿದ್ದರು. ತೀರ್ಥಂಕರರಿಗೂ, ಭವ್ಯಜಿನಕೇವಲಿಗಳಿಗೂ ಆ ಪದವಿಯೊದಗುತ್ತಿತ್ತು. ಅಂತಹ ಅರಹಂತಾವಸ್ಥೆಯ ಪ್ರತಿರೂಪವಾದ ಯಾವ ಮೂರ್ತಿಯನ್ನು ಮಾಡಲಾಗುತ್ತದೋ, ಅದರಲ್ಲಿ ಯಾವ ತೀರ್ಥಂಕರರ ಲಾಂಛನವಿರುತ್ತದೋ, ಅದರ ಕ್ರಮವನ್ನರಿತು ಸಂಸ್ಕಾರ ಹೊಂದಿ ವಿಧಿ ಪೂರ್ವಕ ಪ್ರತಿಷ್ಠೆಯಾಗಿರುತ್ತದೋ ಅಂತಹ ಮೂರ್ತಿಯು ದರ್ಶನಕ್ಕೂ ಪೂಜೆಗೂ ಯೋಗ್ಯವಾಗಿರುತ್ತದೆ. ಆ ಮೂರ್ತಿಯ ದರ್ಶನದಿಂದ ಅದೇ ಮುದ್ರೆಯನ್ನು ಭಾವಿಸಿ ಆತ್ಮನು 'ಯಥಾವತ್ ರೂಪನಾಗಿದ್ದಾನೆ. ಎಂದು ತಿಳಿದು 'ದಾಸೋಹಂ' ನಿಂದ 'ಸೋಹಂ' ನಂತರ 'ಅಹಂ' ನಲ್ಲಿ ಅಂತರ್‌ಜ್ಯೋತಿಯನ್ನು ಕಂಡು ಚಿತ್ ಚೈತನ್ಯದಲ್ಲಿ ಲೀನವಾಗಿ ಅಲೌಕಿಕಾನಂದವನ್ನು ಹೊಂದುವುದೇ ಜಿನಬಿಂಬದ ದರ್ಶನದಿಂದಾಗುವ ಪ್ರಯೋಜನ. ಆಗಿನ ಸ್ಥಿತಿಯು ಭಾವಸಮಾಧಿ



ಎನಿಸಿ ಸಾರ್ಥಕವಾಗುತ್ತದೆ. ಆಗಿನ ಸಮಯದಲ್ಲಿ ಭವಪರಂಪರೆಯ ನಾಶವೂ ಪುಣ್ಯ ಬಂಧವೂ ಆಗುವುದು.

ಜಿನಬಿಂಬವಿರುವ ಜಿನಾಲಯವು ಸಮವಸರಣದ ಸಂಕೇತವಾಗಿರುತ್ತದೆ. ಮಂಗಲವಾದ ಮಂದಿರದಲ್ಲಿರುವ ಮಂಗಲಮೂರ್ತಿಯ ದರ್ಶನ ಮಾಡಿಸುತ್ತಿಸಿ, ಪೂಜಿಸಿ, ಧ್ಯಾನಿಸಿದರೆ ಮನವು ಮಂಗಲವಾಗುವುದು, ಮಾತು ಮಂಗಲವಾಗುವುದು, ಕ್ರಿಯೆಯು ಮಂಗಲವಾಗವುದು. ಆ ಸ್ಥಿತಿಯಲ್ಲಿ ಬಂಧವಾದ ಪುಣ್ಯಕರ್ಮವು ಇಚ್ಛಿತ ಫಲಪ್ರಾಪ್ತಿಗೆ ಸಾಧನವಾಗುವುದು. ಅದಕ್ಕಾಗಿಯೇ.

ಅನ್ಯಸ್ಥಾನೇ ಕೃತಂಪಾಪಂ ದೇವಸ್ಥಾನೇ ವಿನಶ್ಯತಿ ।
ದೇವಸ್ಥಾನೇಕೃತಂ ಪಾಪಂ ವಜ್ರಲೇಪೋಭವಿಷ್ಯತಿ ॥ ಎಂದಿದ್ದಾರೆ.

ದರ್ಶನಸ್ತುತಿಯಲ್ಲಿ ಹೇಳಿರುವಂತೆ ಜಿನೇಶನ ದರ್ಶನದಿಂದ ವಿಘ್ನಗಳ ಸಮೂಹ ನಾಶವಾಗುತ್ತದೆ. ಶಾಕೀನಿ, ಭೂತ, ಸರ್ಪಬಾಧೆ ದೂರವಾಗುತ್ತದೆ. ವಿಷ ನಿರ್ವಿಷವಾಗುತ್ತದೆ. ಜನ್ಮ-ಜನ್ಮಗಳಲ್ಲಿ ಸಂಪಾದಿಸಿದ ತಾಪತ್ರಯವು ನಾಶವಾಗಿ ಮುಕ್ತಿಯವರೆಗೂ ಬಿಡದೆ ಎಳೆದುಕೊಂಡು ಹೋಗುವ ಸಮ್ಯಕ್ತ್ವ ದೊರಕುತ್ತದೆ. ಇದಕ್ಕಿಂತ ಉತ್ತಮ ಲಾಭ ಮತ್ತೇನಿದೆ? ಜಿನೇಶನ ದರ್ಶನಲಾಭವಾಗುವುದು ಸಾಮಾನ್ಯವಲ್ಲ ಅದಕ್ಕೂ ಲಬ್ಧಿ ಬೇಕು. ಅಂತಹ ಸುಸಂದರ್ಭವನ್ನು ಹಾಳುಮಾಡಿಕೊಳ್ಳದೆ ಹೊತ್ತು ತಂದ ಸಜ್ಜಾತಿ, ಸದ್ಗೃಹಸ್ಥತ್ವವನ್ನೂ ಲಬ್ಧಿಯಿಂದ ಒದಗಿದ ಅವಕಾಶವನ್ನೂ ಸದುಪಯೋಗ ಪಡಿಸಿಕೊಳ್ಳದಿದ್ದರೆ ಕೈಯಲ್ಲಿರುವ ಚಿಂತಾಮಣಿರತ್ನವನ್ನು ಸಮುದ್ರಕ್ಕೆಸೆವ ಮೂರ್ಖನಂತಾದೀತು. ಕೇವಲ ಒಮ್ಮೆ ಜಿನೇಶನ ದರ್ಶನದಿಂದ ಒದಗುವ ಪುಣ್ಯಕ್ಕೆ ಎಣೆಯಿಲ್ಲವೆನ್ನುವಾಗ ಆ ಭಗವಂತನಿಗೆ ಅಭಿಷೇಕ, ಅರ್ಚನೆ, ಸ್ತುತಿ ವಂದನಾದಿಗಳನ್ನು ಮಾಡಿದರೆ ಆಗುವ ಪುಣ್ಯಲಾಭವನ್ನು ಬರೆದು ವರ್ಣಿಸಲು ಸಾಧ್ಯವಿಲ್ಲ. ಶ್ರೀಮಂತರಾದ ಪುಣ್ಯಾತ್ಮರು ಶಿಥಿಲವಾಗಿರುವ ಮಂದಿರಗಳ ಜೀರ್ಣೋದ್ಧಾರ, ನೂತನ ಮಂದಿರಗಳ ನಿರ್ಮಾಣ, ಪ್ರತಿಷ್ಠಾಪನಾದಿ ಪುಣ್ಯಕಾರ್ಯಗಳನ್ನು ಮಾಡಿ 'ಪುಣ್ಯಂ ಪುಣ್ಯಾನುಬಂಧಿ' ಯನ್ನಾಗಿ ಮಾಡಿಕೊಳ್ಳುವವರು ಅಜರಾಮರ ಕೀರ್ತಿಯನ್ನು ಪಡೆದು ಆತ್ಮೋದ್ಧಾರಕ ರಾಗುವರು. ಅವರು ಎರಡುಭವದಲ್ಲೇ ವಿದೇಹಕ್ಷೇತ್ರದಲ್ಲಿ ಜನಿಸಿ ಸಾಕ್ಷಾತ್ ಸೀಮಂದರಸ್ವಾಮಿಯ ಸಮವಸರಣದಲ್ಲಿ ಭಗವಂತನ ದರ್ಶನ ಪಡೆದು ಮುಕ್ತಿಮಂದಿರವನ್ನೇ ತಲುಪಲು ದಾರಿ ಮಾಡಿಕೊಳ್ಳಬಹುದು. ಅಂತಹ ಭವ್ಯಾತ್ಮರು ಈಗಲೂ ಇದ್ದಾರೆ.

ದರ್ಶನಂ ದೇವದೇವಸ್ಯ । ದರ್ಶನಂ ಪಾಪನಾಶನಂ ।
ದರ್ಶನಂ ಸ್ವರ್ಗಸೋಪಾನಂ । ದರ್ಶನಂ ಮೋಕ್ಷಸಾಧನಂ ॥

## 10. ಜಿನೇಂದ್ರ ಭಕ್ತಿ

ಸುಖವೂ, ದುಃಖವೂ ಆತ್ಮನೆಂಬ ಕರ್ತೃವಿನ ಕರ್ಮದ ಫಲರೂಪವಾಗಿ ಉಂಟಾಗುವ ಮನಸ್ಸಿನ ಪರ್ಯಾಯಗಳು ತತ್ಫಲವಾಗಿ ಸುಖ-ದುಃಖಗಳಿಗೆ ಜೀವಿಯ ಭಾವನೆಗಳೇ ಕಾರಣ. ಸದ್ಭಾವನೆಯಿಂದ ಪುಣ್ಯ ಬಂಧವೂ, ಅದರಿಂದ ಸುಖವೂ, ದುರ್ಭಾವನೆಯಿಂದ ಪಾಪಬಂಧವೂ, ಅದರಿಂದ ದುಃಖವೂ ಉಂಟಾಗುವುದು. ಹೇಗೆಂದರೆ ಮರಣಹೊಂದಿದ ಪ್ರಿಯ ಬಂಧುವಿನ ಸ್ಮರಣೆಯಿಂದ ಕಣ್ಣೀರು ಬರುವುದು. ರುಚಿಯಾದ ಭಕ್ಷ್ಯಗಳ ಅಥವಾ ಉಪ್ಪಿನಕಾಯಿಯ ಸ್ಮರಣೆಯಿಂದ ಬಾಯಲ್ಲಿ ನೀರೂರುವುದು. ಹಾಗೆಯೇ ವೀತರಾಗೀ ಜಿನಭಗವಂತನ ಸ್ಮರಣೆಯಿಂದ ವೀತರಾಗತೆ ಉಂಟಾಗುತ್ತದೆ. ವೀತರಾಗತೆಯಲ್ಲಿ ಶಾಂತಿ ಇದೆ; ಶಾಂತಿ ಇದ್ದಲ್ಲಿ ಸುಖವಿದೆ. ಆದಕ್ಕಾಗಿ ಶಾಶ್ವತ ಶಾಂತಿ ಪಡೆದ ಆದರ್ಶ ಜಿನಭಗವಂತನ ಆಶ್ರಯದಿಂದ ತತ್ಫಲ ಪ್ರಾಪ್ತವಾಗುವುದು ಸಹಜ. ರಾಗೀ, ದ್ವೇಷೀ, ಮೋಹೀ, ಪರಿಗ್ರಹೀ ಗುಣವುಳ್ಳವರ ಆಶ್ರಯದಿಂದ ಅಂತಹ ಪರಿಣಾಮವೇ ಪ್ರಾಪ್ತವಾಗುವುದು.

ಹೀಗೆ ಸದ್ಭಾವನಾ ಪ್ರಧಾನವಾದ ಭಜನೆ ಮತ್ತು ಸೇವೆಗೇ ಭಕ್ತಿ ಎನ್ನುತ್ತಾರೆ. 'ಭಕ್ತಿ' ಶಬ್ದವು ಸಂಸ್ಕೃತದ "ಭಜ್ ಸೇವಾಯಂ" ಎಂಬ ಧಾತುವಿನಿಂದ ಆಗಿದೆ. ಭಗವಂತನ ಗುಣಗಾನ ಅಂದರೆ ಭಜನೆ ಮತ್ತು ಪೂಜಾದಿಗಳ ಸೇವೆ ಮುಂತಾದುವುಗಳಲ್ಲಿ ನಿರತನಾಗಿ ತದಾತ್ಮ್ಯ ಭಾವನೆಯಿಂದ ನಿರ್ವಿಕಲ್ಪ ಸಮಾಧಿಯಲ್ಲಿ ಮೈಮರೆಯುವುದೇ ಭಕ್ತಿ. ಭಕ್ತಿಯಿಂದ ಭಕ್ತನು ಒಂದು ರೀತಿಯ ಅಲೌಕಿಕ ಆನಂದದಲ್ಲಿ ತಲ್ಲೀನನಾಗುತ್ತಾನೆ. ಇಹದಲ್ಲೂ ಮತ್ತು ಪರದಲ್ಲೂ ಆನಂದವನ್ನು ತಂದುಕೊಡುವ ನಿಜವಾದ ಸಾಧನವೆಂದರೆ ಭಕ್ತಿ ಒಂದೇ.

ಮುಕ್ತಿಯೊಳಲ್ಲದಿಲ್ಲ ಸುಖವಂತದು ಕರ್ಮವಿನಾಶವಿಲ್ಲದೆ ।
ವ್ಯಕ್ತಿಗೆ ಬಾರದಾ ದುರಿತನಾಶಕೆ ದೀಕ್ಷೆಯೇಬೇಕು ಮೋಹದಾ ।



ಶಕ್ತಿಯೊಳಿರ್ದವಂಗೆ ರುಚಿದೋರದು ದೀಕ್ಷೆಯದರ್ಕೆ ನಿಮ್ಮಸ ।
ದ್ಭಕ್ತಿಯೇ ಬೀಜಮೊಯ್ಯನದನೀವುದು ಮುಂದಪರಾಜಿತೇಶ್ವರಾ ॥

ಆತ್ಮ ಸುಖಕ್ಕೆ ಮುಕ್ತಿಯೇ ತೌರೂರು. ಆ ಮುಕ್ತಿಯು ವ್ಯಕ್ತಿಗೆ ಕರ್ಮವಿನಾಶವಿಲ್ಲದೆ ಲಭಿಸುವಂತಿಲ್ಲ. ಆ ಕರ್ಮವು ದೀಕ್ಷಾಬದ್ಧನಾಗದ ವಿನಃ ನಾಶವಾಗುವುದಿಲ್ಲ. ಮೋಹವೆಂಬ ಹೊಂಡದಲ್ಲಿ ಮುಳುಗಿ ತೇಲುತ್ತಿರುವವನಿಗೆ ದೀಕ್ಷೆ ತೆಗೆದುಕೊಳ್ಳುವ ಮನಸ್ಸೇ ಉಂಟಾಗುವುದಿಲ್ಲ. ಆದಕ್ಕಾಗಿ ಕ್ರಮವಾಗಿ ಮುಕ್ತಿಮಂದಿರವನ್ನು ತಲುಪಿ ಸದಾ ಸುಖಿಯಾಗಲು ಭಗವದ್ ಭಕ್ತಿಯೇ ಬೀಜ ಎಂಬ ಶಾಶ್ವತ ಸುಖಶಾಂತಿಯ ಉಪಾಯವನ್ನು ರತ್ನಾಕರಕವಿ ಇಲ್ಲಿ ನಿರೂಪಿಸಿದ್ದಾನೆ.

ಇದನ್ನೇ ಪಂಪಕವಿಯು ಹೇಳಿದ್ದನು - 'ಉತ್ತಮದೀಕ್ಷಾಧಿಯಿಂ, ಸಮಾಧಿ ಮರಣಂ, ಕರ್ಮಕ್ಷಯಂ, ಬೋಧಿಲಾಭಂ; ದೊರೆಕೊಳ್ವುದಕ್ಕೆಮಗೆ ಮುಕ್ತಿ ಶ್ರೀಮನೋವಲ್ಲಭಾ"

ಜಿನಭಕ್ತಿಯು ಮುಕ್ತಿಮಾರ್ಗದ ಮೊದಲ ಹೆಜ್ಜೆ. ಆದಕ್ಕಾಗಿ "ಜಿನಭಕ್ತಿಯೊಂದೇ ಸಾಕು ಮುಕ್ತಿಗೆ" ಎಂದು ಹೇಳಬಹುದು.

ಭಕ್ತಿಯ ಬಗ್ಗೆ ಪೂಜ್ಯ ವಾದಿರಾಜ ಮಹಾಮುನಿಗಳು ತಮ್ಮ ಏಕೀ ಭಾವ ಸ್ತೋತ್ರದಲ್ಲಿ ಹೇಳಿದ್ದಾರೆ.

ಶುದ್ಧೇ ಜ್ಞಾನೇ ಶುಚನಿ ಚರಿತೇ ಸತ್ಯಪಿ ತ್ವಯ್ಯನೀಚಾ ।
ಭಕ್ತಿರ್ನೋ ಚೇದನವಧಿಸುಖಾ ವಂಚಿಕಾ ಕುಂಚಿಕೇಯಂ ॥
ಶಕ್ಯೋದ್ಘಾಟಂ ಭವತಿ ಹಿ ಕಥಂ ಮುಕ್ತಿಕಾಮಸ್ಯ ಪುಂಸೋ ।
ಮುಕ್ತಿದ್ವಾರಂ ಪರಿದೃಢಮಹಾ ಮೋಹಮುದ್ರಾಕವಾಟಂ ॥

ಅಂದರೆ ಓ ಜಿನೇಶ್ವರರೇ, ಈ ಸಾಂಸಾರಿಕ ಜಂಜಟದಿಂದ ಬಿಡುಗಡೆ ಹೊಂದಲು ಅಪೇಕ್ಷಿಸುವವನಿಗೆ ಪರಿಶುದ್ಧವಾದ ಭಕ್ತಿ ಬೇಕು. ಜ್ಞಾನ, ಚಾರಿತ್ರಗಳಿದ್ದಾಗ್ಯೂ ಅನಂತಸುಖವನ್ನು ತಪ್ಪದೇ ದೊರಕಿಸತಕ್ಕ ತಮ್ಮಲ್ಲಿ ಮೂಡುವ ದೃಢತರವಾದ ಭಕ್ತಿಯೆಂಬ ಬೀಗದ ಕೈ ಇಲ್ಲದಿದ್ದರೆ ಆತ್ಮನಿಗೆ ಮಹಾ ಮೋಹನೀಯ ಕರ್ಮವೆಂಬ ಬೀಗ ಮುದ್ರೆ ಹಾಕಿ ಬಲವಾಗಿ ಮುಚ್ಚಲ್ಪಟ್ಟಿರುವ ಮುಕ್ತಿಮಂದಿರದ ಬಾಗಿಲನ್ನು ತೆರೆಯಲು ಹೇಗೆ ಸಾಧ್ಯವಾದೀತು? ಸಾರಂಶ ಇಷ್ಟೇ :- ಮುಕ್ತಿಮಂದಿರವು ಕಾಣದಂತೆ ಮಾಡಿರುವುದು ನಮಗೆ ಆವರಿಸಿರುವ

ಮೋಹನೀಯ ಕರ್ಮವೇ ಕಾರಣ. ಈ ಮೋಹಮುದ್ರಾಕವಾಟವನ್ನು ತೆರೆಯಲು ಜಿನಭಕ್ತಿ ಎಂಬ ಬೀಗದಕೈ ಬೇಕು. ಸುಖಕ್ಕೆ ಅಡಚಣೆಯಾಗಿರುವ ಪಾಪಮಲವನ್ನು ತೊಳೆಯುವ ಪಾವನವಾದ ಗಂಗಾಜಲವೇ ಜಿನಭಕ್ತಿ ಎಂಬುದನ್ನು ಆಚಾರ್ಯರು ಸ್ವತಃ ಅನುಭವಿಸಿದ ಮಾತನ್ನು ಇಲ್ಲಿ ನಿರೂಪಿಸಿದ್ದಾರೆ.

ಆಚಾರ್ಯ ವಾದಿರಾಜರಿಗೆ ಪೂರ್ವಸಂಚಿತ ಕರ್ಮೋದಯದಿಂದ ಕುಷ್ಠರೋಗ ಉಂಟಾಯಿತು. ಅದರ ನಿವಾರಣೆಗೆಂದು ಆದಿನಾಥ ಜಿನರಲ್ಲಿ ಅವರಿಗಿದ್ದ ಭಕ್ತಿಯಿಂದ ಸ್ವಯಂ ಪ್ರೇರಿತರಾದ ಅವರು ಏಕೀಭಾವ ಸ್ತೋತ್ರವನ್ನು ರಚಿಸಿ ಹಾಡಿದುದರಿಂದ ಕುಷ್ಠರೋಗ ನಿವಾರಣೆಯಾಯಿತೆಂಬ ಪ್ರತೀತಿಯಿದೆ.

ಯಾವ ಭಕ್ತರು ಭಗವಂತನ ಪರಮ ದಿವ್ಯರೂಪಾಕೃತಿಗಳನ್ನೂ ದಿವ್ಯಗುಣಗಳನ್ನೂ ಪರಮಾನಂದ ಉಲ್ಲಾಸದಿಂದ ಧ್ಯಾನಿಸುತ್ತಾ, ಹಾಡುತ್ತ, ಪೂಜಿಸುತ್ತ, ಸೇವೆಮಾಡುತ್ತ, ಭಜಿಸುತ್ತ ತನ್ಮಯರಾಗಿ ಆನಂದಾಶ್ರುಗಳಿಂದ ಕೂಡಿ ಹರ್ಷಾತಿರೇಕದಿಂದ ಗದ್ಗದಕಂಠ ಉಳ್ಳವರಾಗಿ ತಡೆದುತಡೆದುಬರುವ ಸ್ವರದಿಂದೊಡಗೂಡಿದವರಾಗಿ ಪರಮಭಕ್ತಿಯಮೂಲಕ ಭಾವಪರವಶರಾಗುತ್ತಾರೆಯೋ ಅಂತಹವರ ಶರೀರದಲ್ಲಿ ಬಹುಕಾಲದಿಂದ ವಾಸವಾಗಿದ್ದ ನಾನಾವಿಧವಾದ ರೋಗಗಳೂ, ಕಷ್ಟಗಳೂ, ಸಂಕಟಗಳೂ ದೂರವಾಗಿ ಬಿಡುವುದು. ಅಂದರೆ ತತ್ಕಾಲದಲ್ಲಿ ಉಂಟಾಗುವ ಶುಭಯೋಗದಿಂದಲೂ ಧ್ಯಾನದ ಬಲದಿಂದಲೂ, ಸಂಯಮದ ಶಕ್ತಿಯಿಂದಲೂ ಆತ್ಮಾನಂದ ಉಂಟಾಗಿ ಸವಿಪಾಕ ಮತ್ತು ಅವಿಪಾಕವೆಂಬ ಎರಡೂ ರೀತಿಯ ನಿರ್ಜರೆಯಾಗುತ್ತದೆ.

ನಿರ್ಜರೆ ಎಂದರೆ ಕರ್ಮವನ್ನು ಕಳೆಯುವುದು. ಕೆಲವು ಕರ್ಮಗಳು ತಾವಾಗಿಯೇ ಕಾಲಾನುಸಾರಕ್ಕೆ ಪಕ್ವವಾಗಿ ಉದಯಕ್ಕೆ ಬಂದು ಸುಖ ಅಥವಾ ದುಃಖವನ್ನು ಕೊಡುತ್ತವೆ. ಅವು ಸವಿಪಾಕ ನಿರ್ಜರೆ ಎಂತಲೂ, ಅವು ಉದಯಕ್ಕೆ ಬರುವ ಮುಂಚೆಯೇ ಧ್ಯಾನಬಲದಿಂದ ಕರ್ಮಗಳು ನಶಿಸಿ ಹೋಗುವುವು. ಇದಕ್ಕೆ ಅವಿಪಾಕ ನಿರ್ಜರೆ ಎನ್ನುತ್ತಾರೆ. ಇವೆರಡೂ ಒಮ್ಮೆಲೇ ಆಗುವ ಶಕ್ತಿಯು ಭಕ್ತಿಯಲ್ಲಿದೆ.

ಇಂಥ ಫಲಗಳನ್ನು ಪಡೆದ ಮಹಾತ್ಮರ ಉದಾಹರಣೆಗಳು ಅನೇಕ ಉಂಟು. ಆಚಾರ್ಯ ಕುಂದಕುಂದರು ವಿದೇಹಕ್ಷೇತ್ರದಲ್ಲಿನ ಶ್ರೀಮಂಧರ ಸ್ವಾಮಿಯಲ್ಲಿ ಇಟ್ಟಿದ್ದ ಅಪೂರ್ವ ಭಕ್ತಿಯ ಬಲದಿಂದ ಅಲ್ಲಿಗೇ ಹೋಗಿ ಪ್ರತ್ಯಕ್ಷಸ್ವಾಮಿಯ ದರ್ಶನಲಾಭ ಪಡೆದು ಬಂದು ತಮ್ಮ ಅನುಭವದಿಂದ ಅನೇಕ ಗ್ರಂಥಗಳನ್ನು ರಚಿಸಿ ಕಲಿಕಾಲ



ಗಣಧರರೆನಿಸಿದರು.

ಸ್ವಾಮಿ ಸಮಂತಭದ್ರರು ಭಗವಂತನಲ್ಲಿ ಇಟ್ಟಿದ್ದ ದೃಢವಾದ ಭಕ್ತಿಯಿಂದ ತನ್ನ ಭಸ್ಮಕ ರೋಗ ನಿವಾರಣೆಮಾಡಿಕೊಂಡು ಚಂದ್ರನಾಥ ಸ್ವಾಮಿಯ ಬಿಂಬದರ್ಶನ ಮಾಡಿಕೊಂಡು ಭಕ್ತಿಯ ಭಾವಾನಂದದಿಂದ ಬಹು ಪುಣ್ಯಾರ್ಜನೆ ಮಾಡಿ ಭವಿಷ್ಯಕಾಲದ ತೀರ್ಥಂಕರ ಸಾಲಿನಲ್ಲಿ ಸೇರುವ ಅರ್ಹತೆ ಪಡೆದರು. ಶ್ರೀ ಮಾನತುಂಗಾಚಾರ್ಯರು ತಮ್ಮ ಕರ್ಮೋದಯದಿಂದ ರಾಜನೊಬ್ಬನ ಆಗ್ರಹಕ್ಕೆ ಪಾತ್ರರಾಗಿ ಸಂಕೋಲೆಗಳಿಂದ ಬಂಧಿತರಾದರು. ಆದರೂ ಆಚಾರ್ಯರು ಶುದ್ಧವಾದ ಅಂತಃಕರಣದಿಂದ ಭಕ್ತಿಭಾವಾವೇಶಭರಿತರಾಗಿ ಭಕ್ತಾಮರ ಸ್ತೋತ್ರವನ್ನು ರಚಿಸಿ ಹೇಳಿದುದರಿಂದ ತಮಗೊದಗಿದ ಉಪಸರ್ಗದಿಂದ ಬಿಡುಗಡೆ ಹೊಂದಿ ಪ್ರಸಿದ್ಧರಾದರು.

ಹಾಗೆಯೇ ಧನಂಜಯ ಕವಿಯು ವಿಷಾಪಹಾರ ಸ್ತೋತ್ರವನ್ನು ರಚಿಸಿ ಭಕ್ತಿಯಿಂದ ಹೇಳುತ್ತಾ ಇರುವಂತೆಯೇ ತನ್ನ ಮಗನಿಗೆ ಏರಿದ್ದ ಹಾವಿನ ವಿಷವನ್ನು ನಿವಾರಣೆ ಮಾಡಿದನು.

ಅಷ್ಟೇಕೆ ಪೂಜ್ಯ ಪಾದಾಚಾರ್ಯರಿಗೆ ಚಿಕ್ಕವಯಸ್ಸಿನಲ್ಲೇ ಕಣ್ಣು ಕಾಣದಂತಾಗಲು ಭಕ್ತಿಯಿಂದ ಶಾಂತಿನಾಥರ ಸ್ತೋತ್ರಮಾಡಿ ಜಿನಬಿಂಬದ ಪಾದಗಳಲ್ಲಿ ಅಡ್ಡಬಿದ್ದು ತಮ್ಮ ಕಣ್ಣುಗಳನ್ನು ಒತ್ತಿ ಹಿಡಿದು ನಂತರ ಕಣ್ಣು ಬಿಟ್ಟಾಗ ಮೊದಲಿನಂತೆಯೇ ಕಂಡವಂತೆ.

ಹೀಗೆ ಎಷ್ಟೋ ಉದಾಹರಣೆಗಳು ದೊರಕುತ್ತವೆ. ಮೋಹಮುದ್ರಾ ಕವಾಟವನ್ನೂ ಒಡೆದು ಮುಕ್ತಿಮಂದಿರವನ್ನು ಕಾಣಿಸುವ ಶಕ್ತಿಯು ಭಕ್ತಿಗಿದೆ ಎಂದ ಮೇಲೆ ಇಂಥ ಮಹಿಮೆಗಳುಂಟಾಗುವುದರಲ್ಲಿ ಆಶ್ಚರ್ಯವೇನು?

ಜಿನಭಕ್ತಿಯೇ ಮುಖ್ಯೋಪಾಯವೆಂಬುದನ್ನು ವಾದೀಭಸಿಂಹ ಸೂರಿಗಳು ತಮ್ಮ 'ಕ್ಷತ್ರಚೂಡಾಮಣಿ' ಎಂಬ ಗ್ರಂಥದ ಮಂಗಲ ಶ್ಲೋಕದಲ್ಲಿ 'ಯದ್ಭಕ್ತೇಃಶುಲ್ಕತಾಮೇತಿ ಮುಕ್ತಿಕನ್ಯಾಕರಾಗ್ರಹೇ'' ಅಂದರೆ ಮುಕ್ತಿಕನ್ಯೆಯ ಕರ ಹಿಡಿಯಲು ಜಿನಭಕ್ತಿ ಎಂಬ ಶುಲ್ಕವನ್ನು ತೆತ್ತರೆ ಸಾಕು ಎಂದು ಹೇಳಿದ್ದಾರೆ.

ಇಂತಹ ಭಕ್ತಿಯು ಹೇಗೆ ತನ್ನಲ್ಲಿ ಉಂಟಾಗುತ್ತದೆ - ಅದಕ್ಕೆ ಉಪಾಯವೇನೆಂಬುದನ್ನು ರತ್ನಾಕರ ಕವಿ ಹೀಗೆ ತಿಳಿಸಿದ್ದಾನೆ-

ಶಕ್ತಿಗೆತಕ್ಕದಾನ ಗುರುಪೂಜನ ಸುವ್ರತ ಪರ್ವಪಾಲನ ॥

ಭರ್ಕ್ತಿಗಳಂ ನೆಗಳ್ಚುತೆ ಜಿನಾಗಮ ಗೋಷ್ಠಿಗಳಲ್ಲಿ ಧರ್ಮಸಂ ।
ಯುಕ್ತರ ಮೇಳ ದೊಳ್ ಕಳೆಯುತುಂದಿನಮಂ ನಡೆವಂಗೆ ಮೋಹದಾ।
ಶಕ್ತಿ ಸಡಿಲ್ದು ಪೋಪುದಿದು ಭಕ್ತಿಯಲಾ ಅಪರಾಜಿತೇಶ್ವರಾ ॥

ಶಕ್ತಿಗೆ ತಕ್ಕಂತೆ ದಾನ ಧರ್ಮ ಪರೋಪಕಾರ ಮಾಡಬೇಕು, ದೇವ ಗುರು ಶಾಸ್ತ್ರಗಳ ಪೂಜಾ, ಸೇವೆಗಳನ್ನು ಮಾಡಬೇಕು, ಪರ್ವಕಾಲದಲ್ಲಿ ಉಪವಾಸ ಮಾಡಬೇಕು, ಪುರಾಣಪುಣ್ಯಕಥೆ, ಭಾಷಣ, ವ್ಯಾಖ್ಯಾನ, ಧರ್ಮ ಪ್ರಭಾವನೆ ನಡೆಯುವ ಕಡೆ ಹೋಗಬೇಕು. ಸಾಧುಸತ್ಪುರುಷರ ಸಹವಾಸದಲ್ಲಿರಬೇಕು ಹೀಗೆ ದಿನಚರಿಯನ್ನು ಮಾಡಿಕೊಂಡರೆ ಮೋಹದಶಕ್ತಿ ಕುಂದಿ ಭಕ್ತಿಯ ಬೆಳಕು ಉಂಟಾಗುವುದು.

ಎಲ್ಲಿಯವರೆಗೆ ಆತ್ಮನಿಗೆ ಆವರಿಸಿರುವ ಮಹಾ ಮೋಹರೂಪೀ ಮುದ್ರೆಯನ್ನು ಒಡೆಯಲಾಗುವುದಿಲ್ಲವೋ ಅಲ್ಲಿಯವರೆಗೆ ಮುಕ್ತಿ ಮಂದಿರವನ್ನು ಪ್ರವೇಶಿಸಲಾಗುವುದಿಲ್ಲ. ಈ ಮುದ್ರೆಯನ್ನು ಭಕ್ತಿ ಎಂಬ ಸುತ್ತಿಗೆಯಿಂದಲೇ ಒಡೆಯಬೇಕು. ಮಹಾಮೋಹವೆಂಬುದು ಎರಡು ವಿಧವಾಗಿದೆ. ದರ್ಶನ ಮೋಹವೆಂಬುದು ಒಂದು, ಚಾರಿತ್ರಮೋಹವೆಂಬುದು ಇನ್ನೊಂದು. ಇಲ್ಲಿ ಮಹಾಮೋಹಮುದ್ರೆ ಎಂದರೆ ದರ್ಶನಮೋಹವೇ. ಚಾರಿತ್ರ ಮೋಹವು ಮೋಹವೇ ಆದರೂ ಅದು ಮಹಾಮೋಹವೆನಿಸುವುದಿಲ್ಲ. ಏಕೆಂದರೆ ದರ್ಶನಮೋಹ ನಾಶವಾದ ಕೂಡಲೇ ಚಾರಿತ್ರಮೋಹನೀಯವು ತಾನಾಗಿಯೇ ಮಾಯವಾಗುತ್ತದೆ. ಚಾರಿತ್ರಮೋಹನೀಯಕ್ಕೆ ಸಂಸಾರದಲ್ಲಿ ಸುತ್ತಿಸುವ ಸಾಮರ್ಥ್ಯವಿಲ್ಲ. ಕ್ರೋಧ, ಮಾನ, ಮಾಯಾ, ಲೋಭಾದಿಗಳು ಅನಂತಾನುಬಂಧಿಯನ್ನಾಗಿ ಮಾಡುವ ಕರ್ಮವೆಂದರೆ ದರ್ಶನ ಮೋಹನೀಯವೇ ಆಗಿದೆ. ದರ್ಶನವೆಂದರೆ ಅಮಿತವಾದ ಶ್ರದ್ಧೆ. ಈ ಶ್ರದ್ಧೆಯಿಂದ ದೃಢತರವಾದ ಭಕ್ತಿ ಉಂಟಾಗುತ್ತದೆ. ಈ ಶ್ರದ್ಧೆ ಉಂಟಾಗದಂತೆ ಆವರಿಸಿರುವುದೇ ದರ್ಶನ ಮೋಹನೀಯ. ಈ ಕರ್ಮವನ್ನು ನಿವಾರಿಸಲು ಭಕ್ತಿ ಬೇಕೇ ಬೇಕು. ಭಕ್ತಿಯ ಬೆಳವಣಿಗೆಯಿಂದ ಸಮ್ಯಕ್ತ್ವ ದೃಢವಾಗುತ್ತದೆ. ಸಂಯಮ ಸಾಧನೆಯಾಗುತ್ತದೆ. ಆದುದರಿಂದ ಯತಾರ್ಥವಾದ ದೇವ, ಶಾಸ್ತ್ರ, ಗುರುಗಳಲ್ಲಿನ ಭಕ್ತಿಯು ಸಮ್ಯಕ್ತ್ವದ ಒಂದು ನೈಜವಾದ ಗುಣವಾಗಿದೆ. ಇದರಿಂದ ಜ್ಞಾನ, ಚಾರಿತ್ರಗಳು ತಾನಾಗಿಯೇ ವೃದ್ಧಿಯಾಗುತ್ತವೆ. ಭಗವಂತನ ಎದುರಿಗೆ ನಿಂತು ಅಂತಃಕರಣ ಶುದ್ಧಿಯಿಂದ ಭಜನೆ, ಸೇವೆ, ಸ್ತುತಿ, ವಂದನೆ ಮಾಡುವುದರಿಂದ ಶುಭಯೋಗವಾಗಿ ವಾಂಛಿತ ಫಲವು ತತ್ಕಾಲದಲ್ಲಿಯೇ ಪ್ರಾಪ್ತವಾಗುವುದು. ಈ ದೃಷ್ಟಿಯಿಂದ ಭಗವಂತನೇ ನಮ್ಮ ರಕ್ಷಕನೆಂಬ



ಲೋಕೋಕ್ತಿಯಾಗಿದೆ. ಹಾಗೆಯೇ ಕರ್ಮ ಕಳೆದುಕೊಂಡು ಸುಖಪ್ರಾಪ್ತಿ ಮಾಡಿಕೊಳ್ಳುವ ಉಪದೇಶವನ್ನು ನೀಡಿ ಪರಿಶುದ್ಧನಾದ ಪರಮಾತ್ಮನಾದುದರಿಂದ ಭಗವಂತ ಎಲ್ಲವನ್ನೂ ನೀಡಿದನೆಂಬಮಾತು ಇಲ್ಲಿ ಸತ್ಯ. ಭಗವಂತನ ಆಶ್ರಯದಿಂದ ಪತಿತಪಾವನನಾಗಿ ತಾನೂ ಪರಮಾತ್ಮನಾಗುವ ಶಕ್ತಿ ಭಕ್ತಿಯಲ್ಲಿ ಅಡಕವಾಗಿದೆ. ಆದುದರಿಂದಲೇ ''ಸಿದ್ಧರಸದೊಳು ಅದ್ದಿದಂತಾತ್ಮಸಿದ್ಧಿಯ ಪಡೆವೆನಿನ್ನೇನು'' ಎಂದು ರತ್ನಾಕರಕವಿ ಭಗವಂತನ ಪಾದ ಮೂಲದಲ್ಲಿ ನಿಂತು ಪಾವನನಾದೆ ಎಂದು ನಂಬಿ, ''ಶರಣಾಗು ಪ್ರಥಮ ಜಿನೇಶ'' ಎಂದು ರಕ್ಷಣೆ ಕೋರಿದ್ದಾನೆ. ಆ ರಕ್ಷಣೆ ಅಂದರೆ ನಿರಂತರ ಸುಖದ ಸನ್ನಿಧಿಗೆ ತಲುಪುವ ಹಂಬಲ. ಅದಕ್ಕಾಗಿ ಭಕ್ತಿಭಾವದಿಂದ ಪ್ರೇರಿತನಾಗಿ ತನ್ನ ಅಂತರಂಗದಲ್ಲಿ ಸದಾ ನೆಲಸೆಂದು ಭಗವಂತನನ್ನು ಪ್ರಾರ್ಥಿಸಿದ್ದಾನೆ.

ಕೇವಲ ಆಡಂಬರಕ್ಕಾಗಿ, ಹೊರಗಿನವರು ಮೆಚ್ಚಲೆಂದು, ಮೋಹ ಪರಿಗ್ರಹಗಳ ಪ್ರಾಪ್ತಿಗೆಂದು, ಮಾಡುವ ಭಕ್ತಿಗೆ ಬೆಲೆ ಇಲ್ಲ. ಅದಕ್ಕೆ ಶಕ್ತಿಯೂ ಇಲ್ಲ. ಕೆಲವರು ಮಾಡುವ ಭಕ್ತಿಯ ಸೋಗು ಅಂತಃಕರಣದಿಂದ ಹೊರ ಹೊಮ್ಮಿರುವುದಿಲ್ಲ. ನಾನು ಭಕ್ತಿ ಮಾಡದಿದ್ದರೆ, ಕೈ ಮುಗಿಯದಿದ್ದರೆ, ಪೂಜಿಸದಿದ್ದರೆ ಹೊರಗಿನವರು ಏನಂದಾರು ಅಥವಾ ದೈವ ನನ್ನ ಮೇಲೆ ಸಿಟ್ಟಾಗಬಹುದು ಎಂಬ ಹೆದರಿಕೆಯಿಂದ ಕೂಡಿರುತ್ತದೆ. ಭಕ್ತಿ ಮಾಡದಿದ್ದರೆ ಏನಾದರೂ ಕೆಡುಕಾದೀತು ಎಂಬ ಅನುಮಾನದಿಂದ ಇಲ್ಲದ ಮನಸ್ಸಿನಿಂದ ಮತ್ತೊಬ್ಬರ ನಿರ್ಬಂಧಕ್ಕಾಗಿ ಮಾಡುವ ಭಕ್ತಿ 'ಜುಲ್ಮೀಕೆ ರಾಂ ರಾಂ' ಎಂದಂತೆ ಅಪ್ರಯೋಜನಕವಾಗುತ್ತದೆ. ''ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ'' ಎಂದು ದೃಢಚಿತ್ತರಾಗಿ ದಿನ ನಿತ್ಯದ ನಿಯಮದಂತೆ ದೇವ, ಗುರು, ಶಾಸ್ತ್ರಗಳ ಭಜನೆ, ಸೇವೆ, ಪೂಜೆ, ಸ್ವಾಧ್ಯಾಯಾದಿಗಳನ್ನು ಮಾಡುತ್ತಾ ಮಾಡುತ್ತಾ ಅಂತಃಕರಣ ಶುದ್ಧವಾಗಿ, ಬಹಿರ್ಮುಖದಿಂದ ಪಾರಾಗಿ, ಅಂತರ್ಮುಖಿಯಾಗಿ ಮೋಹಮುದ್ರಾಕವಾಟವನ್ನು ಭೇದಿಸಬಹುದು. ಅದಕ್ಕೆ ರತ್ನಾಕರ ಹೇಳಿದಂತೆ-

ತನುಜಿನಗೇಹ ಮನಸಿಂಹಪೀಠವೆಂ
ದನುಪಮಾತ್ಮನೆ ಜಿನನೆಂದು ।
ನೆನಹನೆಲ್ಲವ ಬಿಟ್ಟು ಕಣ್ಮುಚ್ಚಿ ನೋಳ್ಪಾಗ ।
ಜಿನನಾಥ ತೋರುವನೊಳಗೆ ॥

ಎಂಬ ಆಧ್ಯಾತ್ಮಾನುಭವ ಬೆಳೆದು ಬರಬೇಕಾದರೆ ಎಷ್ಟು ಸೇವೆ, ಭಜನೆ, ಸ್ತುತಿ,

ವಂದನೆಗಳನ್ನು ಮಾಡಿ, ಪರಿಫಕ್ವತೆ ಹೊಂದಿರಬೇಕೆಂದು ಊಹಿಸಬಹುದು. ಭಕ್ತಿ ಭಾವಾವೇಶದಿಂದ ಹೊರಜಗತ್ತನ್ನು ಮರೆತು ಆತ್ಮಾನಂದದಲ್ಲಿ ತಲ್ಲೀನವಾಗಬಹುದು. ಭಕ್ತಿಯ ಮಹತ್ತ್ವದ ಬಗ್ಗೆ ಸ್ವಾಮಿ ಸಮಂತಭದ್ರರು ಹೇಳಿದ್ದಾರೆ.

"ಅಮರಾಪ್ಸರಸಾಂ ಪರಿಷದಿ ಚಿರಂ ರಮಂತೇ ।
ಜಿನೇಂದ್ರಭಕ್ತಾಃ ಸ್ವರ್ಗೇ"
"ಲಬ್ಧ್ವಾ ಶಿವಂ ಚ ಜಿನಭಕ್ತಿರುಪೈತಿ ಭವ್ಯಃ"

ಎಂದರೆ ಜಿನೇಂದ್ರಭಕ್ತನು ಸ್ವರ್ಗದಲ್ಲಿ ಹುಟ್ಟಿ, ಸುಖ ಪಡೆಯುತ್ತಾನೆ. ನಂತರ ಈ ಭವ್ಯನು ಮರುಭವದಲ್ಲಿ ಮುಕ್ತಿ ಹೊಂದುವನು.

ಈ ಭಕ್ತಿಯ ಪ್ರೇರಣೆಯಿಂದಲೇ ದಾನ, ಧರ್ಮ, ಪರೋಪಕಾರಬುದ್ಧಿ ಹುಟ್ಟಿ ಧರ್ಮಪ್ರಭಾವನೆಯಾಗುತ್ತದೆ.

ಮುಕ್ತಿಲೋಕವನ್ನು ಕಾಣಬಯಸುವ ಪಯಣಿಗನಿಗೆ ಮುಖ್ಯಭಕ್ತಿ ಎಂದರೆ ದೈವಭಕ್ತಿಯೆಂಬುದನ್ನು ಕವಿ ಹೀಗೆ ಹೇಳಿ ಮಾನವ ಜನ್ಮದ ಮೌಲ್ಯ ಮಾಪನವನ್ನು ಮಾಡುತ್ತಾ -

ನಿನ್ನಪದಾಬ್ಜಭಕ್ತಿ ವಿಷಯಾರ್ಥ ವಿರಕ್ತಿ ತಪೋಭರಕ್ಕೆ ಸಂ ।
ಪನ್ನತೆವೆತ್ತ ಶಕ್ತಿ ತನುವಂ ಸಲೆ ಭೇದಿಸಿ ತನ್ನ ರೂಪನ ।
ಚ್ಛಿನ್ನದೆಕಾಣ್ಬಯುಕ್ತಿ ಗುಣದಲ್ಲನುರಕ್ತಿ ಇವಾಗೆಮುಕ್ತಿ ಜೀ।
ವಂ ನರನಾಗಿವಂ ಪಡೆಯದಿರ್ದೊಡದೇಕೆ ಅಪರಾಜಿತೇಶ್ವರಾ ।

ಇವು ಮುಕ್ತಿಮಾರ್ಗದ ನಾನಾ ಹಂತಗಳು. ಭಗವಂತನಲ್ಲಿ ಭಕ್ತಿ, ಸಂಸಾರಶರೀರ ಭೋಗದಲ್ಲಿ ವಿರಕ್ತಿ, ತಪಃಶಕ್ತಿ, ಆತ್ಮಾವಲೋಕನಾಯುಕ್ತಿ, ಗುಣದಲ್ಲಿ ಅನುರಕ್ತಿ ಮುಂತಾದ ಈ ಹಂತಗಳನ್ನು ಏರುತ್ತಾ ಸಾಗಿದರೆ ದೊರೆಯುವುದು ಮುಕ್ತಿ. ಮಾನವನಾಗಿ ಹುಟ್ಟಿದ ಮೇಲೆ ಈ ಗುಣಗಳನ್ನು ಪಡೆಯದಿದ್ದರೆ ಏಕೀ ಜನ್ಮ ?

ಜಿನೇಂದ್ರಭಕ್ತಿಯ ಜೊತೆಯಲ್ಲಿಯೇ ಧರ್ಮ ಕಂಟಕಗಳು ದೂರವಾಗಲೆಂಬ ಧರ್ಮಾಭಿಮಾನದಿಂದ ಭಕ್ತನು ಜಿನಲಾಂಛನವನ್ನು ಹೊತ್ತ ಜಿನ ಶಾಸನ ದೇವತೆಗಳಲ್ಲಿ ಮಾಡುವ ಭಕ್ತಿಯೂ ಪುಣ್ಯಾರ್ಜನೆಗೆ ಕಷ್ಟನಿವಾರಣೆಗೆ



ಕಾರಣವಾಗುತ್ತದೆ.

ಗುರುಗಳಲ್ಲಿ ಶಿಷ್ಯರೂ, ಯಜಮಾನನಲ್ಲಿ ಸೇವಕನೂ ಇಡುವ ವಿಧೇಯತೆಯೂ ಒಂದು ವಿಧವಾದ ಭಕ್ತಿ ಎನಿಸುತ್ತದೆ. ಗೃಹಸ್ಥನು ವ್ಯವಹಾರ ಮತ್ತು ನಿಶ್ಚಯಗಳನ್ನು ಅರಿತು ಜೀವಿಸಬೇಕು. ವ್ಯವಹಾರ ಗೌಣವೂ, ನಿಶ್ಚಯ ಮುಖ್ಯವೂ ಆಗಿಟ್ಟುಕೊಂಡು ಭಕ್ತಿಯ ಬಲವನ್ನು ಮೈಗೂಡಿಸಿಕೊಂಡು ವರ್ತಿಸಿದಲ್ಲಿ ಒಂದಲ್ಲೊಂದು ಜನ್ಮದಲ್ಲಿ ಮುಕ್ತಿ ಮಂದಿರದ ಕವಾಟವನ್ನು ತೆರೆಯಲು ಸಾಧ್ಯವಾಗಬಲ್ಲುದು.

ಜಿನೇ ಭಕ್ತಿರ್ಜಿನೇ ಭಕ್ತಿರ್ಜಿನೇ ಭಕ್ತಿರ್ದಿನೇ ದಿನೇ!
ಸದಾ ಮೇಸ್ತು ಸದಾ ಮೇಸ್ತು ಸದಾ ಮೇಸ್ತು ಭವೇ ಭವೇ ॥

## 11. ಜಿನಪೂಜೆಯ ವಿಚಾರ

ಶ್ರಾವಕನು ಪ್ರತಿದಿನ ವೀತರಾಗಿ ಜಿನೇಂದ್ರದೇವರ ಪೂಜೆಯನ್ನೂ ಧರ್ಮಾಚಾರ್ಯಾದಿಗುರುಗಳ ಸೇವೆಯನ್ನೂ ಸತ್ಪಾತ್ರಗಳಿಗೆ ಆಹಾರಾದಿ ದಾನಗಳನ್ನೂ ಮಾಡಬೇಕು ಮತ್ತು ಲೋಕವ್ಯವಹಾರನುಸಾರವಾಗಿಯೂ ಆಗಮಾನುಸಾರವಾಗಿಯೂ ದಯಾದಾನ ಮೊದಲಾದ ಧರ್ಮಕಾರ್ಯಗಳನ್ನೂ ಕೀರ್ತಿಯನ್ನುಂಟುಮಾಡುವ ಕಾರ್ಯಗಳನ್ನೂ ಮಾಡಬೇಕು. ಜಿನಪೂಜೆಯ ಸಂಕಲ್ಪ ಮಾತ್ರದಿಂದ ಸ್ವರ್ಗಗತಿಯನ್ನೈದಿ ಅಲ್ಲಿ ದೇವತೆಗಳಿಂದ ಪೂಜಿಸಲ್ಪಟ್ಟ ಕಪ್ಪೆಯಂತೆ ಆ ಜಿನೇಂದ್ರದೇವರನ್ನು ಸಂಕಲ್ಪಮಾತ್ರದಿಂದ ಪೂಜಿಸುವವನೂ ಸ್ವರ್ಗದಲ್ಲಿ ಹುಟ್ಟಿ ಮಹರ್ದ್ಧಿಕದೇವತೆಗಳಿಂದ ಪೂಜಿಸಲ್ಪಡುತ್ತಾನೆ.

ರಾಜಗೃಹನಗರದಲ್ಲಿ ಒಂದು ಜನ್ಮದಲ್ಲಿ ಶ್ರೇಷ್ಠಿಯಾಗಿದ್ದ ಒಂದು ಕಪ್ಪೆಯು ಶ್ರೀಮಹಾವೀರಸ್ವಾಮಿಯನ್ನು ಪೂಜಿಸಬೇಕೆಂಬ ಸಂಕಲ್ಪದಿಂದ, ಒಂದು ತಾವರೆಯ ಎಸಳನ್ನು ಬಾಯಿಯಲ್ಲಿ ಕಚ್ಚಿಕೊಂಡು ಮಾರ್ಗದಲ್ಲಿ ಹೋಗುತ್ತಿರುವಾಗ, ದುರ್ದೈವದಿಂದ ಶ್ರೇಣಿಕಮಹಾರಾಜನ ಆನೆಯ ಕಾಲಡಿಗೆ ಬಿದ್ದು ಸತ್ತಿತು. ಆದರೆ ಜಿನ ಪೂಜಾಸಂಕಲ್ಪದ ಪ್ರಭಾವದಿಂದ ಅದು ಸ್ವರ್ಗದಲ್ಲಿ ಪ್ರತಿಷ್ಠಿತದೇವನಾಗಿ

ಜನಿಸಿತು. ಹೀಗೆ ಜಿನ ಪೂಜೆಯನ್ನು ಮಾಡಬೇಕೆಂಬ ಸಂಕಲ್ಪಮಾತ್ರದಿಂದ ಇಂತಹ ಫಲವು ದೊರಕಿತೆಂದ ಮೇಲೆ, ಜಲಗಂಧಾಕ್ಷತಾದಿ ಅಷ್ಟವಿಧದ್ರವ್ಯಗಳಿಂದಲೂ ನಾನಾ ಪ್ರಕಾರವಾದ ಸ್ತೋತ್ರಗಳಿಂದಲೂ ಜಿನಪೂಜೆಯನ್ನು ಮಾಡುವವರಿಗೆ ಅತಿಶಯವಾದ ಫಲವುಂಟಾಗುವುದರಲ್ಲಿ ಸಂದೇಹವಿಲ್ಲ.

**ಪೂಜೆಯ ಭೇದಗಳು :–** ಪ್ರತಿದಿವಸ ತನ್ನ ಮನೆಯಿಂದ ಗಂಧಾಕ್ಷತಾದಿದ್ರವ್ಯಗಳನ್ನು ತೆಗೆದುಕೊಂಡು ಚೈತ್ಯಾಲಯಕ್ಕೆ ಹೋಗಿ ಜಿನೇಂದ್ರರನ್ನು ಪೂಜಿಸುವುದೂ, ಚೈತ್ಯಾಲಯದಲ್ಲಿಯೂ, ಸ್ವಗೃಹದಲ್ಲಿಯೂ ತ್ರಿಸಂಧ್ಯಾಕಾಲಗಳಲ್ಲಿ ಜಿನಪೂಜಾಸೇವೆಯನ್ನು ಮಾಡುವುದೂ, ಪ್ರತಿದಿನ ಮುನಿಗಳಿಗೆ ಆಹಾರಾದಿದಾನಗಳನ್ನಿತ್ತು ಅವರನ್ನು ಪೂಜಿಸುವುದೂ ಇವೆಲ್ಲವೂ ನಿತ್ಯಮಹ ಅರ್ಥಾತ್ **ನಿತ್ಯಪೂಜೆಯೆಂದು** ಹೇಳಲ್ಪಡುತ್ತದೆ. ಆಷಾಢ ಕಾರ್ತೀಕ ಫಾಲ್ಗುಣಮಾಸಗಳ ಶುಕ್ಲಪಕ್ಷದ ಅಷ್ಟಮಿಯ ಮೊದಲ್ಗೊಂಡು ಎಂಟು ದಿನಗಳವರೆಗೆ ನಂದೀಶ್ವರ ಪರ್ವ ಅಥವಾ ಅಷ್ಟಾಹ್ನಿಕ ಪರ್ವವೆಂದೂ, ಈ ಎಂಟು ದಿನಗಳಲ್ಲಿ ಭವ್ಯರು ಮಾಡುವ ಜಿನಪೂಜೆಗೆ **ಅಷ್ಟಾಹ್ನಿಕ ಪೂಜೆಯೆಂದು** ಹೆಸರು. ಇಂದ್ರ ಪ್ರತೀಂದ್ರ ಸಾಮಾನಿಕಾದಿದೇವತೆಗಳು ಮಾಡುವ ಜಿನಪೂಜೆಗೆ **ಇಂದ್ರಧ್ವಜಪೂಜೆಯೆಂದು** ಹೆಸರು. ಮಂಡಲೇಶ್ವರರು ಭಕ್ತಿಯಿಂದ ಮಾಡುವ ಜಿನಪೂಜೆಗೆ **ಚತುರ್ಮುಖಪೂಜೆಯೆಂದು** ಹೆಸರು. ಈ ಪೂಜೆಯು ಸರ್ವಪ್ರಾಣಿಗಳಿಗೆ ಕಲ್ಯಾಣವನ್ನುಂಟುಮಾಡುವುದರಿಂದ 'ಸರ್ವತೋಭದ್ರ' ವೆಂದೂ ಚತುರ್ಮುಖಮಂಟಪದಲ್ಲಿ ಮಾಡಲ್ಪಡುವುದರಿಂದ 'ಚತುರ್ಮುಖ' ವೆಂದೂ ಅಷ್ಟಾಹ್ನಿಕಾಪೇಕ್ಷೆಯಿಂದ ದೊಡ್ಡದಾಗಿರುವುದರಿಂದ 'ಮಹಾರಾಜ' ವೆಂದೂ ಅನ್ವರ್ಥನಾಮಗಳುಳ್ಳದಾಗಿರುತ್ತದೆ. ಚಕ್ರವರ್ತಿಗಳು ಷಟ್ಖಂಡಗಳನ್ನು ಜಯಿಸಿದ ನಂತರ ಕಿಮಿಚ್ಛಕದಾನಪೂರ್ವಕವಾಗಿ ಕಲ್ಪದ್ರುಮ ಪೂಜೆಯನ್ನು ಮಾಡುವಂತೆ ಮಾಂಡಲಿಕ ರಾಜರು ತಮ್ಮ ದೇಶಾಧಿಪತ್ಯವನ್ನು ಹೊಂದಿದ ಬಳಿಕ ಸರ್ವತೋಭದ್ರಪೂಜೆಯನ್ನು ಮಾಡುತ್ತಾರೆ. ಚಕ್ರವರ್ತಿಗಳು ಷಟ್ಖಂಡವಿಜಯವನ್ನು ಪಡೆದು ಸಾಮ್ರಾಜ್ಯ ಪದಾಭಿಷಿಕ್ತರಾಗುವ ಸಮಯದಲ್ಲಿ ತಮ್ಮ ಆಶ್ರಿತರಾಜರನ್ನೂ ಪ್ರಜೆಗಳನ್ನೂ ಕುರಿತು ನೀವು ಏನೇನನ್ನು ಇಚ್ಛಿಸುತ್ತೀರೆಂದು ಕೇಳಿ, ಅವರು ಕೇಳಿದುದನ್ನಿತ್ತು ಸರ್ವಜನರ ಆಶೆಗಳನ್ನೂ ಪೂರ್ತಿಗೊಳಿಸಿ ಮಾಡುವ ಜಿನಪೂಜೆಗೆ **ಕಲ್ಪಧ್ರುಮಪೂಜೆಯೆಂದು** ಹೆಸರು. ಈ ಪೂಜೆಯಲ್ಲಿ ಕಲ್ಪವೃಕ್ಷದಂತೆ ಇಚ್ಛಿತ ವಸ್ತುಗಳು ದೊರಕುವುದರಿಂದ ಇದಕ್ಕೆ ಕಲ್ಪಧ್ರುಮವೆಂಬ ಹೆಸರು ಅನ್ವರ್ಥವಾಗಿರುತ್ತದೆ.



ಪ್ರತಿದಿನ ಮಾಡಲ್ಪಡುವ ಅಭಿಷೇಕ ಪೂಜಾದಿಗಳಿಗೆ "ನಿತ್ಯವಿಧಿ" ಯೆಂದೂ ಪರ್ವ ಮೊದಲಾದ ವಿಶೇಷಕಾಲಗಳಲ್ಲಿ ಮಾಡಲ್ಪಡುವ ವಿಧಿಗೆ "ನೈಮಿತ್ತಿಕ ವಿಧಿ" ಯೆಂದೂ ಹೆಸರು. ಹೀಗೆ ನಿತ್ಯವಾಗಿಯೂ ನೈಮಿತ್ತಿಕವಾಗಿಯೂ ಮಾಡಲ್ಪಡುವ ಅರ್ಚನಾ, ಅಭಿಷೇಕ, ನಾಟ್ಯ, (ಗೀತನೃತ್ಯ ವಾದ್ಯ) ಪ್ರತಿಷ್ಠಾ, ರಥಯಾತ್ರಾ ಇವೇ ಮೊದಲಾದ ಕಾರ್ಯಗಳು ಯಥಾಯೋಗ್ಯವಾಗಿ ಪೂರ್ವೋಕ್ತ-ನಿತ್ಯಮಹಾದಿ ಪೂಜೆಗಳಲ್ಲಿ ಸೇರುತ್ತವೆ. ಯಾವ ಪೂಜೆಯ ಸಂಬಂಧವಾಗಿ ಸಂಕಲ್ಪಗಳನ್ನು ಮಾಡಲ್ಪಡುತ್ತವೋ ಅವುಗಳ ಆ ಪೂಜೆಯಲ್ಲಿಯೇ ಗರ್ಭಿತವಾಗುತ್ತವೆ.

**ಪೂಜಾಫಲ :–** ಅರಹಂತರ ಅಷ್ಟವಿಧಾರ್ಚನೆಯನ್ನು ಮಾಡುವಾಗ ಆಹ್ವಾನ-ಸ್ಥಾಪನ-ಸನ್ನಿಧೀ ಕರಣಮಾಡಬೇಕು. 8 ವಿಧವಾದ ಉತ್ತಮ ವಸ್ತುಗಳನ್ನು ಕ್ರಮವಾಗಿ ಅಷ್ಟಕವನ್ನು ಹೇಳಿಕೊಂಡು ಅರ್ಚನೆ ಮಾಡಬೇಕು. ಜಲವನ್ನು ಅರ್ಪಿಸುವುದರಿಂದ ಜನ್ಮಜರಾಮೃತ್ಯುವಿನಾಶವೂ, ಗಂಧವನ್ನು ಅರ್ಪಿಸುವುದರಿಂದ ಭವತಾಪವಿನಾಶವೂ, ಅಕ್ಷತೆಯನ್ನು ಅರ್ಪಿಸುವುದರಿಂದ ಅಕ್ಷಯಪದಪ್ರಾಪ್ತಿಯೂ ಪುಷ್ಪವನ್ನು ಅರ್ಪಿಸುವುದರಿಂದ ಕಾಮಬಾಣವಿಧ್ವಂಸವೂ, ಚೆರುವನ್ನು ಅರ್ಪಿಸುವುದರಿಂದ ಕ್ಷುದ್ರೋಗ ವಿನಾಶವೂ, ದೀಪವನ್ನು ಬೆಳಗುವುದರಿಂದ ಅಜ್ಞಾನಾಂಧಕಾರವಿನಾಶವೂ, ಧೂಪವನ್ನರ್ಪಿಸುವುದರಿಂದ ಅಷ್ಟಕರ್ಮದಹನವೂ, ಫಲವನ್ನರ್ಪಿಸುವುದರಿಂದ ಮೋಕ್ಷಫಲಪ್ರಾಪ್ತಿಯೂ, ಅರ್ಘ್ಯವನ್ನರ್ಪಿಸುವುದರಿಂದ ಅನರ್ಘ್ಯಪದಪ್ರಾಪ್ತಿಯೂ, ಶಾಂತಿಧಾರೆಯಿಂದ ಸರ್ವಲೋಕಶಾಂತಿಯೂ, ಪುಷ್ಪಾಂಜಲಿಯನ್ನರ್ಪಿಸುವುದರಿಂದ ಅಮಿತ ಸುಖಪ್ರಾಪ್ತಿಯೂ ಪೂಜಕರಿಗೆ ಆಗುವುದು. ನಂತರ ಆರತಿ ಮಾಡಬೇಕು. ಶಾಂತಿಧಾರಾ, ವಿಸರ್ಜನೆ ಮಾಡಬೇಕು. ಪ್ರಸಾದ ಸ್ವೀಕರಿಸಬೇಕು. ಇದು ದ್ರವ್ಯಪೂಜೆ ಮತ್ತು ಅದರ ಫಲವಾಗಿದೆ.

ಜಿನಪೂಜೆಯ ಮಹಾತ್ಮ್ಯದಿಂದ ಅವಿರತಸಮ್ಯಗ್ದೃಷ್ಟಿಗೂ ಪೂಜಾರ್ಥಾಜ್ಞೈಶ್ವರ್ಯಬಲಪರಿಜನಕಾಮಭೋಗಾದಿ ಸಂಪತ್ತಿಗಳು ಪ್ರಾಪ್ತವಾಗುತ್ತವೆಂದಮೇಲೆ, ವ್ರತಿಕನಾಗಿ ಜಿನಪೂಜೆಯನ್ನು ಮಾಡುವವನಿಗೆ ಉತ್ತಮೋತ್ತಮ ಅಭ್ಯುದಯ ಸಂಪತ್ತಿಗಳುಂಟಾಗುವುದರಲ್ಲಿ ಸಂದೇಹವಿಲ್ಲ.

**ಜಿನಬಿಂಬ, ಚೈತ್ಯಾಲಯ ನಿರ್ಮಾಣ :–** ಜಿನಪೂಜೆಯಲ್ಲಿಯೂ ಇತರ ಧರ್ಮಕಾರ್ಯಗಳಲ್ಲಿಯೂ ಸಂದರ್ಭಾನುಸಾರವಾಗಿ ಅನ್ಯಧರ್ಮಾವಲಂಬಿಗಳಿಂದಲೂ ತನ್ನ ಧರ್ಮದವರಿಂದಲೂ ವಿಘ್ನಗಳುಂಟಾಗುವ ಸಂಭವವಿರುತ್ತದೆ. ಆದುದರಿಂದ ಜಿನಪೂಜಾದಿಧರ್ಮ ಕಾರ್ಯಗಳು ನಿರ್ವಿಘ್ನವಾಗಿ

ಪೂರ್ಣವಾಗಬೇಕೆಂದು ಇಚ್ಛಿಸುವ ಶ್ರಾವಕನು ಅನ್ಯಧರ್ಮಾವಲಂಬಿಗಳನ್ನು ಯಥಾಯೋಗ್ಯವಾಗಿ ದಾನಧರ್ಮಾದಿಗಳಿಂದ ಸಂತೋಷಪಡಿಸಿ, ಅವರನ್ನು ತನಗೆ ಅನುಕೂಲರನ್ನಾಗಿ ಮಾಡಿಕೊಂಡು ಮತ್ತು ಜಿನಧರ್ಮಾವಲಂಬಿಗಳನ್ನೂ ಯಥಾಯೋಗ್ಯವಾದ ಸತ್ಕಾರಗಳಿಂದ ತನ್ನ ಮಿತ್ರರನ್ನಾಗಿ ಮಾಡಿಕೊಂಡು ಜಿನಪೂಜಾದಿಧರ್ಮಕಾರ್ಯಗಳನ್ನು ಮಾಡಬೇಕು. ಹೀಗೆ ಮಾಡುವುದರಿಂದ ಪೂಜಾಕಾರ್ಯಾದಿಗಳಲ್ಲಿ ವಿಘ್ನವುಂಟಾಗುವ ಭಯವಿರುವುದಿಲ್ಲ.

ಜಿನಪ್ರತಿಮೆ ಜಿನಮಂದಿರ ಮೊದಲಾದುವುಗಳು ಧರ್ಮಸಾಧನೆಗೆ ಕಾರಣಗಳಾಗಿರುತ್ತವೆ. ಇವುಗಳ ಆಶ್ರಯದಿಂದ ಧರ್ಮದ ಪ್ರಾಪ್ತಿಯೂ ಪ್ರಾಪ್ತವಾದ ಧರ್ಮದ ಪರಿರಕ್ಷಣೆಯೂ ರಕ್ಷಿಸಲ್ಪಟ್ಟ ಧರ್ಮದ ವೃದ್ಧಿಯೂ ಉಂಟಾಗುತ್ತದೆ. ಆದಕಾರಣ ಈ ಜಿನಪ್ರತಿಮಾದಿಗಳ ನಿರ್ಮಾಣವು ಹೆಚ್ಚಾದ ಪುಣ್ಯಬಂಧಕ್ಕೆ ಕಾರಣವಾಗಿರುತ್ತದೆ. "ತತ್ಪಾಪಮಪಿನ ಪಾಪಂ ಯತ್ರ ಮಹಾನ್ ಧರ್ಮ ಸಂಬಂಧಃ" ಅರ್ಥಾತ್ "ಯಾವಕಾರ್ಯದಲ್ಲಿ ಹೆಚ್ಚಾದ ಧರ್ಮಸಂಬಂಧವಿರುವುದೋ ಅದು ಸ್ವಲ್ಪ ಪಾಪಸಂಬಂಧವುಳ್ಳದಾಗಿದ್ದರೂ ಪಾಪಕಾರ್ಯವಾಗಿರುವುದಿಲ್ಲ." ಎಂದಿರುವುದರಿಂದ, ಜಿನಮಂದಿರಾದಿಗಳ ನಿರ್ಮಾಣದಲ್ಲಿ ಆರಂಭ ಜನಿತಹಿಂಸಾದೋಷವುಂಟಾಗುವುದಾದರೂ ಅದು ಹೆಚ್ಚಾದ ಪುಣ್ಯಾನುಬಂಧಕ್ಕೆ ಕಾರಣವಾಗಿರುವುದರಿಂದ ಪಾಪ ಕಾರ್ಯವಾಗಿರುವುದಿಲ್ಲ.

ಕೃಷ್ಯಾದ್ಯಾರಂಭಗಳಲ್ಲಿ ಆಸಕ್ತರಾಗಿರುವ ಶ್ರಾವಕರ ಮನಸ್ಸಿನಲ್ಲಿ ಸಮ್ಯಗ್ದರ್ಶನ ವಿಶುದ್ಧಿಗೆ ಕಾರಣಗಳಾದ ಈ ಜಿನಪ್ರತಿಮಾದಿಧರ್ಮಾಯತನಗಳ ನಿರ್ಮಾಪಣದಿಂದ ಮತ್ತು ತೀರ್ಥಯಾತ್ರಾದಿಗಳಿಂದ "ನಮ್ಮ ಜೀವನದಲ್ಲಿ ಇಂತಹದೊಂದು ಸತ್ಕಾರ್ಯವನ್ನು ಮಾಡಿದೆವು" ಎಂಬ ಅಭಿಮಾನ ಯುಕ್ತವಾದ "ಧರ್ಮಹರ್ಷ"ವುಂಟಾಗುತ್ತದೆ ಹಾಗೂ ಈ ಪ್ರಕಾರವಾದ ಶುಭಪರಿಣಾಮದಿಂದ ಪುಣ್ಯಬಂಧವಾಗುತ್ತದೆ. ಆದುದರಿಂದ ಶ್ರಾವಕರು ತಮ್ಮ ಶಕ್ತಿಗನುಸಾರವಾಗಿ ಜಿನ ಚೈತ್ಯಚೈತ್ಯಾಲಯಾದಿ ಧರ್ಮಾಯತನಗಳನ್ನು ನಿರ್ಮಾಣಮಾಡಿಸಬೇಕು.

ಜಿನಮಂದಿಗಳಿರುವ ನಗರಾದಿಗಳಲ್ಲಿ ಆ ಜಿನಮಂದಿರಾದಿಗಳ ನಿಮಿತ್ತದಿಂದ ಧಾರ್ಮಿಕರು ಸ್ವೇಚ್ಛೆಯಾಗಿ ಪ್ರತಿಷ್ಠಾತೀರ್ಥಯಾತ್ರಾದಿ ಪುಣ್ಯಕಾರ್ಯಗಳನ್ನು ಮಾಡುತ್ತಿರುತ್ತಾರೆ. ಈ ಪ್ರಕಾರವಾದ ಧರ್ಮೋತ್ಸವಗಳಿಂದ ಧರ್ಮದ ಪ್ರಭಾವನೆಯೂ ಪ್ರಸರಣೆಯೂ ಆಗುತ್ತದೆ. ಇದರಿಂದ ಧರ್ಮದ ವಿಷಯದಲ್ಲಿ ಉತ್ಸಾಹವೂ ಸಂತೋಷವೂ ಉಂಟಾಗುತ್ತದೆ. ಈ ಶುಭಭಾವದಿಂದ ಗೃಹಸ್ಥರ



ಪಾಪವು ನಾಶವಾಗುತ್ತದೆ. ಆದುದರಿಂದ ಕಲಿಕಾಲದ ದೋಷವನ್ನು ನಾಶಮಾಡುವುದೂ ಮುನಿಗಣದ ಧರ್ಮಸಾಧನೆಗೆ ಆಶ್ರಯಭೂತವಾದುದೂ ಆದ ಜಿನಮಂದಿರವು ಅತ್ಯಂತ ಅವಶ್ಯಕವಾಗಿರುತ್ತದೆ.

**ಪಂಚಪರಮೇಷ್ಠಿಗಳ ಪೂಜೆ :–** ಜಿನೇಂದ್ರ ದೇವರು ಲೋಕದಲ್ಲಿ ಉತ್ತಮರೂ ಶರಣರೂ ಮಂಗಲ ಸ್ವರೂಪರೂ ಆಗಿರುವಂತೆ ಸಿದ್ಧಾಚಾರ್ಯೋಪಾಧ್ಯಾಯ ಸಾಧುಗಳೂ,ಕೇವಲಿಗಳಿಂದ ನಿರೂಪಿಸಲ್ಪಟ್ಟ ಧರ್ಮವೂ ದುಃಖಿಗಳನ್ನು ಪರಿಹರಿಸಿ ವಿಘ್ನಗಳಿಂದ ರಕ್ಷಿಸುವವುಗಳಾದುದರಿಂದ ಹಾಗೂ ಪಾಪವನ್ನು ನಾಶಮಾಡಿ ಪುಣ್ಯವನ್ನು ವೃದ್ಧಿಪಡಿಸುವುದರಿಂದ ಮಂಗಲ ಸ್ವರೂಪವಾದವುಗಳೂ ಆಗಿರುತ್ತವೆ. ಆದುದರಿಂದ ಜಿನೇಂದ್ರರನ್ನು ಪೂಜಿಸುವಂತೆ ಸಿದ್ಧಾಚಾರ್ಯೋಪಾಧ್ಯಾಯ ಸಾಧುಧರ್ಮಗಳನ್ನೂ ಪೂಜಿಸುವ ಶ್ರಾವಕನು ಅಂತರಂಗಬಹಿರಂಗ ಸಂಪತ್ತಿಗಳಿಂದ ವೃದ್ಧಿಯನ್ನು ಹೊಂದುತ್ತಾನೆ.

**ಶ್ರುತಪೂಜೆ :–** ಯಾರು ಪೂಜ್ಯರು ಯಾರು ಅಪೂಜ್ಯರು ಎಂಬುದರ ತಿಳುವಳಿಕೆಯು ಶ್ರುತದಿಂದುಂಟಾಗುತ್ತದೆ. ಅರ್ಹತ್ಪರಮೇಷ್ಠಿಗಳ ಮುಖಕಮಲದಿಂದ ಉದ್ಗತವಾದ ಆ ಶ್ರುತವು ಸ್ಯಾದ್ವಾದಪ್ರಯೋಗ ಉಳ್ಳದಾಗಿರುತ್ತದೆ. ಅನೇಕಾಂತಾತ್ಮಕ 'ವಾದ ವಸ್ತುಗಳ ಧರ್ಮಗಳನ್ನು ವಿವಕ್ಷಾಭೇದದಿಂದ ಹೇಳುವುದಕ್ಕೆ ಸ್ಯಾದ್ವಾದವೆಂದು ಹೆಸರು. ಈ ಕಾರಣದಿಂದ ಜೈನಸಿದ್ಧಾಂತಕ್ಕೆ 'ಸ್ಯಾದ್ವಾದ' ವೆಂದೂ 'ಅನೇಕಾಂತವಾದ' ವೆಂದೂ 'ಕಥಂಚಿದ್‌ವಾದ'ವೆಂದೂ 'ಸದ್ಯಷ್ಟಿವಾದ' ವೆಂದೂ 'ಅಪೇಕ್ಷಾವಾದ' ವೆಂದೂ ಹೇಳುತ್ತಾರೆ. ಹೀಗೆ ಸ್ಯಾದ್ವಾದಮಯವಾದ ಈ ಶ್ರುತ (ಸಿದ್ಧಾಂತ)ವು ಏಕಾಂತವಾದಿಗಳೇ ಮೊದಲಾದ ಪರವಾದಿಗಳಿಂದ ಖಂಡಿಸಲಸಾಧ್ಯವಾಗಿರುತ್ತದೆ. ಇಂತಹ ಶ್ರುತದೇವಿಯನ್ನು ಶ್ರೇಯೋಭಿಲಾಷಿಯಾದ ಶ್ರಾವಕನು ಪೂಜಿಸಬೇಕು. ಯಾಕೆಂದರೆ ಶ್ರುತ (ಜಿನವಾಣಿ-ಶಾಸ್ತ್ರ)ವನ್ನು ಭಕ್ತಿಭಾವದಿಂದ ಪೂಜಿಸುವವರು ವಸ್ತುತಃ ಜಿನರನ್ನೇ ಪೂಜಿಸುತ್ತಾರೆ. ಸರ್ವಜ್ಞದೇವರೂ ಪೂರ್ವಾಚಾರ್ಯರೂ ಶ್ರುತ ಮತ್ತು ಪರಮಾತ್ಮರಲ್ಲಿ ಸ್ವಲ್ಪವೂ ಭೇದವನ್ನು ಹೇಳುವುದಿಲ್ಲ, ಅರ್ಥಾತ್, ಶ್ರುತವೇ ಪರಮಾತ್ಮನೆಂದೂ ಪರಮಾತ್ಮನೇ ಶ್ರುತವೆಂದೂ ಹೇಳಲ್ಪಟ್ಟಿದೆ. ಅತಏವ ಶ್ರುತ ಪೂಜೆಯು ಪಾರಮಾರ್ಥದಿಂದ ಜಿನಪೂಜೆಯೇ ಆಗಿರುತ್ತದೆ. ಲೋಕ ವ್ಯವಹಾರ ದಲ್ಲಿಯೂ ಓರ್ವ ವ್ಯಕ್ತಿಯ ವಚನವನ್ನು ಮನ್ನಿಸುವುದರಿಂದ ಆ ವ್ಯಕ್ತಿಯನ್ನೇ ಮನ್ನಿಸಿದಂತಾಗುತ್ತದೆಂಬ ಅಂಶವನ್ನು ಇಲ್ಲಿ ಗಮನಿಸಬೇಕು. ನಂತರ ಗುರುಪೂಜೆ ಮಾಡಬೇಕು. ನಿಗ್ರಂಥರಾದ ಮಹಾವ್ರತ ಧಾರಿಗಳಾದ ಮುನಿಗಳಿಗೇ ಗುರುಗಳು.

**ನಿತ್ಯ ಪೂಜೆಯ ವಿಧಿ :–**

ಜಿನೇಶ್ವರನಿಗೆ ಪೂಜೆಯನ್ನು ಮಾಡುವ ಮೊದಲು ಪೂಜೆಯ ವಿಧಿಯನ್ನು ತಿಳಿದುಕೊಳ್ಳಬೇಕು. ಪೂಜೆಯಲ್ಲಿ ನಿತ್ಯಪೂಜೆಯೆಂದೂ, ನೈಮಿತ್ತಿಕ ಪೂಜೆಯೆಂದೂ ಎರಡು ವಿಧ. ಪ್ರತಿನಿತ್ಯ ಮಾಡುವ ಪೂಜೆಗೆ ನಿತ್ಯಪೂಜೆಯೆಂದೂ ಪರ್ವಗಳಲ್ಲಿ ಮಾಡುವ ಪೂಜೆಗೆ ನೈಮಿತ್ತಿಕ ಪೂಜೆಯೆಂದೂ ಹೆಸರು. ಇಲ್ಲಿ ನಿತ್ಯ ಪೂಜೆಯ ವಿಚಾರ ಕೊಡಲಾಗಿದೆ.

ಪೂಜೆ ಮಾಡುವ ಪೂಜಕನು ಶುಚಿರ್ಭೂತನಾಗಿ ಉತ್ತಮವಾದ ಪೂಜಾದ್ರವ್ಯಗಳಿಂದ ಪೂಜೆಯನ್ನು ಮಾಡಬೇಕು. ಪಲ್ಯಂಕಾಸನದಲ್ಲಿ ಕುಳಿತು ಅಥವಾ ಕಾಯೋತ್ಸರ್ಗದಿಂದ ನಿಂತು, ಪೂರ್ವ ಅಥವಾ ಉತ್ತರ ದಿಕ್ಕಿಗೆ ಮುಖಮಾಡಿ ಪೂಜೆಯನ್ನು ಮಾಡಬೇಕು. ಅಂದರೆ ಜಿನಪ್ರತಿಮೆಯ ಮುಖವು ಪೂರ್ವದಿಕ್ಕಿಗೆ ಇದ್ದರೆ ಪೂಜಕನು ಉತ್ತರದಿಕ್ಕಿಗೆ ಮುಖಮಾಡಿಯೂ ಪ್ರತಿಮೆಯ ಮುಖವು ಉತ್ತರ ದಿಕ್ಕಿಗೆ ಇದ್ದರೆ ಪೂಜಕನ ಮುಖವು ಪೂರ್ವದಿಕ್ಕಿಗೂ ಇರಬೇಕು.

ಮೊದಲು ಜಿನೇಶ್ವರನಿಗೆ ಅಭಿಷೇಕವನ್ನು ಮಾಡಿ ಮಂತ್ರವಿಧಿಯಿಂದ ಭಗವಂತನನ್ನು ಆಹ್ವಾನಿಸಬೇಕು. ಅನಂತರ ಪೀಠದಲ್ಲಿ ಭಗವಂತನ ಸ್ಥಾಪನೆಯನ್ನು ಮಾಡಬೇಕು. ಪೂಜಕನ ಅಭಿಮುಖವಾಗಿ ಭಗವಂತನು ಇರಬೇಕೆಂದು ನಿವೇದಿಸುವುದಕ್ಕೆ ಸನ್ನಿಧೀಕರಣವೆಂದು ಹೆಸರು. ಅನಂತರ ಅಷ್ಟವಿಧಾರ್ಚನೆಯಿಂದ ಪೂಜೆ ಮಾಡಿದ ಮೇಲೆ ವಿಧಿಪೂರ್ವಕ ವಿಸರ್ಜನೆ ಮಾಡಬೇಕು. ಹೀಗೆ ಆಹ್ವಾನ, ಸ್ಥಾಪನೆ, ಸನ್ನಿಧೀಕರಣ, ಪೂಜೆ ಮತ್ತು ವಿಸರ್ಜನೆ-ಇವು ಪೂಜೆಯ ಪಂಚಾಂಗಗಳು. ಇವನ್ನು ವಿವರವಾಗಿ ಕೆಳಗೆ ಕೊಡಲಾಗಿದೆ.

**ಆಹ್ವಾನ :–** "ಹೇ ಭಗವನ್। ಅತ್ರ ಅವತರ ಅವತರ ಆಹ್ವಾನಂ" ಎಂದು ಹೇಳಿ ಭಗವಂತನನ್ನು ಪೂಜಾಸ್ಥಾನಕ್ಕೆ ಆಮಂತ್ರಿಸುವ ವಿಧಿಗೆ ಆಹ್ವಾನವೆಂದು ಹೆಸರು.

**ಸ್ಥಾಪನೆ :–** "ಹೇ ಭಗವನ್। ಅತ್ರ ತಿಷ್ಠ ತಿಷ್ಠ ಠ ಠ ಸ್ಥಾಪನಂ" ಎಂದು ಹೇಳಿ ಭಗವಂತನನ್ನು ಪೂಜೆಯ ಸ್ಥಾನದಲ್ಲಿ ಸ್ಥಾಪಿಸುವುದಕ್ಕೆ ಸ್ಥಾಪನೆಯೆಂದು ಹೆಸರು.

**ಸನ್ನಿಧೀಕರಣಂ :–** "ಹೇ ಭಗವನ್। ಅತ್ರಮಮ ಸನ್ನಿಹಿತೋ ಭವಭವ ಸಂವೌಷಟ್ ಇತಿ ಸನ್ನಿಧೀಕರಣಂ" ಎಂದು ಹೇಳಿ ಭಗವಂತನನ್ನು ತನ್ನ ಪೂಜೆಗೆ ಅಭಿಮುಖನಾಗಲು ಪ್ರಾರ್ಥಿಸುವುದಕ್ಕೆ ಸನ್ನಿಧೀಕರಣವೆಂದು ಹೆಸರು.



ಪೂಜೆಯ ಮೊದಲು ಆಹ್ವಾನ, ಸ್ಥಾಪನೆ ಮತ್ತು ಸನ್ನಿಧೀಕರಣವನ್ನು ಅವಶ್ಯ ಮಾಡಲೇ ಬೇಕು. ಯಾರು ಆಹ್ವಾನಾದಿಗಳನ್ನು ಮಾಡದೆ ಪೂಜೆ ಮಾಡುತ್ತಾರೋ ಅದು ಶಾಸ್ತ್ರವಿಹಿತ ಮಾರ್ಗವಲ್ಲ.

ಆಹ್ವಾನಾದಿ ವಿಧಿಗಳನ್ನು ಮಾಡುವಾಗ ಪೂಜಕನು ತನ್ನ ಕೈಯಲ್ಲಿ ಈ ರೀತಿ ಮುದ್ರೆಗಳನ್ನು ಮಾಡಬೇಕು. ತನ್ನ ಎರಡೂ ಕೈಗಳನ್ನು ಸರಿಯಾಗಿ ಬಿಚ್ಚಿ ಒಂದಕ್ಕೊಂದು ಕೂಡಿಸಬೇಕು. ಅನಂತರ ಎರಡು ಹೆಬ್ಬೆರಳುಗಳನ್ನೂ ಅನಾಮಿಕಾ ಬೆರಳುಗಳ ಮೇಲೆ ಇಟ್ಟು ಭಗವಂತನನ್ನು ಆಹ್ವಾನಿಸಬೇಕು, ಆಮೇಲೆ ಕೈಗಳನ್ನು ಕೆಳಮುಖವಾಗಿ ಮಾಡಿ ಭಗವಂತನನ್ನು ಸ್ಥಾಪಿಸಬೇಕು. ಕೊನೆಗೆ ಎರಡು ಕೈಗಳನ್ನು ಮುಚ್ಚಿ ಸನ್ನಿಧೀಕರಣವನ್ನು ಮಾಡಬೇಕು. ಈ ಪ್ರಕಾರ ಶಾಸ್ತ್ರೋಕ್ತ ಮುದ್ರೆಯಿಂದಲೇ ಆಹ್ವಾನಾದಿ ವಿಧಿಗಳನ್ನು ಮಾಡಬೇಕು. ಹೀಗೆ ಮಾಡುವ ಉದ್ದೇಶವೇನೆಂದರೆ ಭಗವಂತನನ್ನು ಅನ್ಯ ಕ್ಷೇತ್ರದಿಂದ ತನ್ನ ಪೂಜೆಯ ಸ್ಥಾನದಲ್ಲಿ ಆಹ್ವಾನಿಸಿ ಸ್ಥಾಪಿಸುವುದಾಗಿದೆ.

**ಪೂಜೆ :–** ಅನಂತರ ಪೂಜಕನು ಭಗವಂತನನ್ನು ಅಷ್ಟ ದ್ರವ್ಯಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಬೇಕು. ಇದಕ್ಕೆ ಅಷ್ಟದ್ರವ್ಯಪೂಜೆಯೆಂದು ಹೆಸರು. ಅಷ್ಟದ್ರವ್ಯವೆಂದರೆ ಜಲ, ಗಂಧ, ಅಕ್ಷತೆ, ಪುಷ್ಪ, ನೈವೇದ್ಯ, ದೀಪ ಧೂಪ, ಫಲ-ಈ ಅಷ್ಟ ಮಹಾಮಂಗಲ ದ್ರವ್ಯಗಳಿಂದ ಪೂಜಿಸುವುದಾಗಿದೆ.

ನಿತ್ಯಪೂಜೆಯಲ್ಲಿ ದೇವ (ಅರಹಂತ), ಗುರು (ಗಣಧರ), ಶಾಸ್ತ್ರ-ಇವರುಗಳ ಪೂಜೆಯನ್ನೂ, ಯಕ್ಷಯಕ್ಷಿಯರ ಪೂಜೆಯನ್ನು ಮಾಡಬೇಕು.

**ವಿಸರ್ಜನೆ :–** ಪೂಜೆಯನ್ನು ಮಾಡಿದ ಮೇಲೆ ಭಗವಂತನಿಗೆ ಆರತಿಯನ್ನು ಮಾಡಿ, ಶಾಂತಿಪಾಠವನ್ನು ಹೇಳಿ ವಿಸರ್ಜನೆಯನ್ನು ಮಾಡಬೇಕು. ಆಹ್ವಾನಿಸಲ್ಪಟ್ಟ ಎಲ್ಲಾ ಪೂಜ್ಯರನ್ನು ಸ್ವಸ್ಥಾನಕ್ಕೆ ಹೋಗುವಂತೆ ನಿವೇದಿಸಿ ಪೂಜೆಯ ಸಮಾಪ್ತಿಯನ್ನು ಮಾಡುವುದಕ್ಕೆ ವಿಸರ್ಜನೆ ಎಂದು ಹೆಸರು. ವಿಸರ್ಜನೆಯಲ್ಲಿ ಕ್ಷಮಾಪಣೆಯೂ ಅಂತರ್ಭೂತವಾಗಿದೆ. ವಿಸರ್ಜನೆ ಮಂತ್ರವು ಈ ರೀತಿ ಇದೆ.

ಆಹ್ವಾನಂ ನೈವ ಜಾನಾಮಿ ನೈವ ಜಾನಾಮಿ ಪೂಜನಂ ।
ವಿಸರ್ಜನಂ ನ ಜಾನಾಮಿ ಕ್ಷಮಸ್ವ ಪರಮೇಶ್ವರ ॥
ಮಂತ್ರಹೀನಂ ಕ್ರಿಯಾಹೀನಂ ದ್ರವ್ಯಹೀನಂ ತಥೈವ ಚ ।
ತತ್ಸರ್ವಂ ಪೂರ್ಣಮೇವಾಸ್ತು ತತ್ವಸಾದಾಜ್ಜಿನೇಶ್ವರ ॥
ಆಹೂತಾ ಯೇ ಪುರಾ ದೇವಾ ಲಬ್ಧಭಾಗಾ ಯಥಾಕ್ರಮಂ ।
ತೇ ಮಯಾಭ್ಯರ್ಚಿತಾಸ್ಸರ್ವೇ ಸರ್ವೇ ಯಾಂತು ಯಥಾಸ್ಥಿತಿ ॥

ಓಂ ಹ್ರೀಂ ಶ್ರೀಂ ಕ್ಲೀಂ ಐಂ ಅರ್ಹಂ ಶ್ರೀಮದರ್ಹತ್ಪರಮೇಷ್ಠಿನೇ ಸ್ವಸ್ಥಾನಂ ಗಚ್ಛತ ಗಚ್ಛತ ಜಃ ಜಃ ಇತೀ ಪೂಜಾ ವಿಸರ್ಜನಂಕರೋಮಿ ಸ್ವಾಹಾ ।

**ಭಾವಾರ್ಥ :–** ಭಗವನ್ ನಾನು ಅಜ್ಞಾನಿಯಾಗಿದ್ದೇನೆ. ನನಗೆ ಆಹ್ವಾನ ವಿಧಿಯು ಗೊತ್ತಿಲ್ಲ. ಪೂಜಾ ವಿಧಿಯೂ ಗೊತ್ತಿಲ್ಲ. ವಿಸರ್ಜನೆಯ ಕ್ರಮವೂ ತಿಳಿಯದುದಾಗಿದೆ. ಆದುದರಿಂದ ಪರಮೇಶ್ವರನೇ, ನನ್ನನ್ನು ಕ್ಷಮಿಸು ನಾನು ಮಾಡಿದ ಪೂಜೆಯು ಮಂತ್ರಹೀನವಾಗಿರಬಹುದು. ಕ್ರಿಯಾಹೀನವಾಗಿರಬಹುದು. ಹಾಗೆಯೇ ದ್ರವ್ಯಹೀನವಾಗಿರಬಹುದು. ಅದೆಲ್ಲವೂ ಜಿನೇಶ್ವರನೇ, ನಿನ್ನ ಪ್ರಸಾದದಿಂದ ಪೂರ್ಣವಾಗಲಿ. ಇದುವರೆಗೆ ಯಾವ ಯಾವ ಪೂಜ್ಯರನ್ನು ನಾನು ಈ ಪೂಜೆಯಲ್ಲಿ ಆಹ್ವಾನಿಸಿದ್ದೆನೋ ಅವರೆಲ್ಲರೂ ನನ್ನಿಂದ ಪೂಜಿತರಾಗಿ ಸ್ವಸ್ಥಾನವನ್ನು ಅಲಂಕರಿಸಲಿ. ಎಂದು ಹೇಳಿ ಕ್ಷಮಾಪಣೆಯ ಪೂರ್ವಕವಾಗಿ ವಿಸರ್ಜನೆಯನ್ನು ಮಾಡತಕ್ಕದ್ದು. ಇದು ಪೂಜೆಯ ಸಂಕ್ಷಿಪ್ತ ವಿಧಿ. ಅಭಿಷೇಕ, ಆರಾಧನೆಗಳೂ ಪೂಜೆಯಲ್ಲಿ ಸೇರಿವೆ. ಆನಂತರ ಪ್ರಸಾದವನ್ನು ಸ್ವೀಕರಿಸಬೇಕು.

# 12. ಮಾನವ ಜೀವನದಲ್ಲಿ ಧರ್ಮದ ಮಹತ್ವ

ಈ ಪರಿವರ್ತನಶೀಲವಾದ ಚತುರ್ಗತಿ ಭವಭ್ರಮಣ ಸಂಸಾರೀ ಜೀವಿಗಳಲ್ಲಿ ಮಾನವ ಜನ್ಮವು ಸರ್ವ ಶ್ರೇಷ್ಠವೆಂದು ಪರಿಗಣಿಸಲಾಗಿದೆ. ಏಕೆಂದರೆ ಮಾನವ ವಿಚಾರಶೀಲನಾದವನು. ಒಳ್ಳೆಯದಾವುದು, ಕೆಟ್ಟದ್ದಾವುದು, ಹಿತ ಯಾವುದು ಅಹಿತ ಯಾವುದು, ಎಂಬ ವಿಚಾರವನ್ನು ವಿಮರ್ಶಿಸುವ ವಿವೇಕವೆಂಬ ಶಕ್ತಿಯು ಮಾನವನಿಗಿದೆ. ಈ ವಿವೇಕ ಅಥವಾ ವಿಚಾರಶೀಲವೆಂಬ ವಿದ್ಯಾಬಲವು ಯಾರಲ್ಲಿಲ್ಲವೋ ಅವರನ್ನು ಪಶುಸಮಾನವೆಂದು ತಿಳಿಯಲಾಗಿದೆ. "ವಿದ್ಯಾವಿಹೀನಃ ಪಶುಃ'' ಎಂಬಂತೆ. ಅದರಲ್ಲಿಯೂ ಯಾರು ತನ್ನ ಹಿತಾಹಿತಗಳನ್ನು ಸಮ್ಯಕ್ ರೀತಿಯಲ್ಲಿ ತಿಳಿದು ವರ್ತಿಸುವರೋ ಅವರನ್ನು ಮಾನವರಲ್ಲಿ ಉತ್ತಮರೆಂದು ಪರಿಗಣಿಸುತ್ತಾರೆ. ಅವರನ್ನೇ ಪುರುಷೋತ್ತಮರೆನ್ನುವುದು. ಒಂದು ವೇಳೆ ತನ್ನ ಜೀವನದ ಅಮೂಲ್ಯ ಸಮಯವನ್ನು ವಿಷಯಭೋಗ, ನಿದ್ರೆ, ಕಲಹ, ವ್ಯರ್ಥ ಕಾಲಹರಣ, ಆಲಸ್ಯ, ಪ್ರಮಾದ ಮುಂತಾದುವುಗಳಲ್ಲಿ ಕಳೆಯುವುದಾದರೆ, ಹೊತ್ತು



ತಂದ ಈ ಜನ್ಮ ಸಫಲವಾಗುವುದಿಲ್ಲ. ತನ್ನ ಜೀವಿತ ಕಾಲದಲ್ಲಿ ಒಮ್ಮೆಯಾದರೂ ನಾನು ಯಾರು? ನನ್ನ ಧರ್ಮವೇನು? ನನ್ನ ಹಿತ ಯಾವುದು? ನನ್ನ ಮುಂದಿನ ಗುರಿ ಏನು? ಈ ಜನ್ಮದಲ್ಲಿ ಪಡೆದಿರುವ ಜ್ಞಾನ-ಚೇತನ, ವಿದ್ಯೆ-ವಿವೇಕಗಳನ್ನು ಯಾವ ಮಾರ್ಗದಲ್ಲಿ ಉಪಯೋಗಿಸಬೇಕು? ಎಂಬ ವಿಚಾರಗಳ ಕಡೆಗೆ ಗಮನ ಹರಿಸಬೇಕು ಹಾಗೂ ಅರಿತು ನುರಿತವರ ನೆರವಿನಿಂದ ಜನ್ಮ ಸಾಫಲ್ಯದ ಮಾರ್ಗದಲ್ಲಿ ನಡೆಯಬೇಕು.

ಪ್ರಾಚೀನಕಾಲದಲ್ಲಿ ಮಾನವ ಜನ್ಮ ತಾಳುವುದು ದುರ್ಲಭವಾಗಿತ್ತು. ಆದರೆ ಇಂದು ಜನಸಂಖ್ಯೆಯು ಅಸಂಖ್ಯಾತವಾಗಿ ಬೆಳೆಯುತ್ತಿದೆ. ಈ ಬೆಳವಣಿಗೆಯನ್ನು ತಡೆಗಟ್ಟುವ ಕಾರ್ಯಕ್ರಮಗಳೂ ನಡೆಯುತ್ತಿವೆ. ಈ ದೃಷ್ಟಿಯಿಂದ ಇಂದು ಮಾನವಜನ್ಮವನ್ನು ಪಡೆಯುವುದು ದುರ್ಲಭವೆಂದಲ್ಲ ಸುಲಭವೆಂದೇ ಹೇಳಬಹುದು. ಆದರೆ ಮಾನವತ್ವವನ್ನೂ, ಮಾನವೀಯ ಗುಣವನ್ನೂ ಹೊಂದುವುದು ದುರ್ಲಭವೆಂದು ಹೇಳಬಹುದು. ಹಿಂದೆ ಜನ ಸಂಖ್ಯೆ ಕಮ್ಮಿ ಇದ್ದರೂ ಅವರು ಸುಖವಾಗಿಯೇ ಇದ್ದರು. ಏಕೆಂದರೆ ಅವರೆಲ್ಲ ಧಾರ್ಮಿಕರಾಗಿದ್ದರು. ಧರ್ಮವೆಂಬ ಸಾಧನವು ಅವರನ್ನು ಸುಖಿಗಳನ್ನಾಗಿ ಮಾಡಿತ್ತು. ಆದರೆ ಅಸಂಖ್ಯಾತವಾಗಿರುವ ಜನ ಆಧುನಿಕ ಸಾಧನ ಸಂಪತ್ತನ್ನು ಹೊಂದಿದ್ದರೂ ಬಹುತೇಕ ಮಂದಿ ಸುಖಿಗಳಾಗಿಲ್ಲ. ದುಃಖಕ್ಕೆ ಈಡಾಗಿದ್ದಾರೆ. ಕಾರಣ ಇವರು ಧರ್ಮಾರಾಧನೆಯಲ್ಲಿ ತೊಡಗಿಲ್ಲ. ಯಾರು ಧರ್ಮಾರಾಧನೆಯಲ್ಲಿ ತೊಡಗುತ್ತಾರೋ ಅಂತಹವರನ್ನು ಧರ್ಮವು ರಕ್ಷಿಸುತ್ತದೆ. ಆದುದರಿಂದ ಮಾನವರಾಗಿ ಜನ್ಮ ತಾಳುವುದು ಇಂದೂ ದುರ್ಲಭವೇ ಆಗಿದೆ. ಮಾನವನಾದರೂ ಸಹ ಸಜ್ಜಾತಿ, ಸದ್ ಗೃಹಸ್ಥ, ಸದ್ಧರ್ಮಿ, ಸದಾಚಾರಿ, ಸಾತ್ವಿಕ, ಶಾಂತ ಸ್ವಭಾವಿಯಾಗಿ ಬಾಳುವುದು ದುರ್ಲಭವಾಗಿದೆ. ಹೀಗಾಗಿ ಮಾನವಶ್ರೇಷ್ಠನೆಂದೆನಿಸಿ ಕೊಳ್ಳುವವರನ್ನು ಈ ವಿಪುಲ ಜನಸಮುದಾಯದಲ್ಲಿ ಕಾಣುವುದು ದುರ್ಲಭವಾಗಿದೆ. ಅಂದರೆ ಪುರುಷ ಪುರುಷಶ್ರೇಷ್ಠನೆನಿಸಲು, ಪುರುಷೋತ್ತಮನಾಗಲು ಧಾರ್ಮಿಕನಾಗಿ ಬಾಳಬೇಕಾಗಿದೆ.

ಈ ಮಾನವ ಜನ್ಮವನ್ನು ಪಡೆದುಕೊಂಡಿರುವುದರಿಂದ ಜನ್ಮ ಜನ್ಮದಲ್ಲಿಯೂ ರಕ್ಷಿಸಿ ಕೊನೆಗೊಮ್ಮೆ ಸದಾ ಸುರಕ್ಷಿತವಾದ ಸುಖ-ಸನ್ನಿಧಿಗೆ ಕೊಂಡೊಯ್ಯುವ ಧರ್ಮದ ಆಶ್ರಯ ಪಡೆದುಕೊಳ್ಳಬೇಕು. ಈ ನವೀನ ಕಾಲದಲ್ಲಿ ಈ ಗೊಂದಲಮಯ ವಾತಾವರಣದಲ್ಲಿ ವಿಶ್ರಾಂತಿಯಿಲ್ಲದೆ ಹೊಟ್ಟೆ ಪಾಡಿಗಾಗಿಯೆ ನಿರತರಾಗಿ ಇರುವವರಾಗಿದ್ದರೂ ದಿನಕ್ಕೆ ಒಂದರ್ಧ ಘಳಿಗೆಯಾದರೂ

ಮಾನವೋಚಿತವಾದ ಧರ್ಮಕಾರ್ಯದಲ್ಲಿ ತೊಡಗಬೇಕಾದುದು ನಮ್ಮ ಕರ್ತವ್ಯ.

ಧರ್ಮವೆಂಬ ಪದಕ್ಕೆ ಅನೇಕ ಆಚಾರ್ಯರು ಅನೇಕ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಅಹಿಂಸಾಪರಮೋ ಧರ್ಮಃ, ದಯಾಮೂಲೋ ಧರ್ಮಃ, ಚಾರಿತ್ತಂ ಖಲು ಧಮ್ಮೋ, ದಂಸಣಮೂಲೋ ಧಮ್ಮೋ, ವತ್ಥು ಸಹಾವೋ ಧಮ್ಮೋ ಎಂದು ವಿಧವಿಧವಾಗಿ ಹೇಳಿದ್ದರೂ ಎಲ್ಲ ವ್ಯಾಖ್ಯೆಗಳ ಗುರಿ ಒಂದೇ ಆಗಿದೆ. "ಯಃ ಉತ್ತಮೇ ಸುಖೇ ಧರತಿ ಸ ಧರ್ಮಃ" ಅಂದರೆ ಯಾವುದು ಪ್ರಾಣಿಗಳ ದುಃಖವನ್ನು ದೂರಮಾಡಿ ನಿರಂತರ ಸುಖವನ್ನುಂಟು ಮಾಡುವುದೋ ಅದೇ ಧರ್ಮ.

ಶ್ರೀಮದ್ ಉಮಾಸ್ವಾಮಿಗಳು ತಮ್ಮ ಶ್ರಾವಕಾಚಾರದಲ್ಲಿ ಧರ್ಮದ ಸ್ವರೂಪವನ್ನು ಹೀಗೆ ಹೇಳಿದ್ದಾರೆ :-

ಧರತ್ಯಪಾರಸಂಸಾರದುಃಖಾದುದ್ಧೃತ್ಯಯೋ ನರಾನ್।
ಮೋಕ್ಷೆವ್ಯಯೇ ಸುಖೇ ನಿತ್ಯೇ ತಂ ಧರ್ಮಂ ವಿದ್ಧಿ ತತ್ತ್ವತಃ ॥

ಯಾವುದು ಈ ಅಪಾರವಾದ ಸಂಸಾರದುಃಖದಿಂದ ಜೀವಿಗಳನ್ನು ನಿವೃತ್ತಿಪಡಿಸಿ ಎಂದೂ ನಾಶವಿಲ್ಲದುದೂ, ಅನಂತವೂ ಆದ ಮೋಕ್ಷಸುಖದಲ್ಲಿ ಸ್ಥಿರಪಡಿಸುವುದೋ ಅದಕ್ಕೆ ಯತಾರ್ಥವಾದ ಧರ್ಮವೆಂದು ಹೆಸರು.

ಸಂಸಾರದಲ್ಲಿ ಈ ಜೀವನು ಅನಾದಿಕಾಲದಿಂದಲೂ ಜನ್ಮ ಜರಾ ಮರಣ ರೂಪವಾದ ತಾಪತ್ರಯದಿಂದ ದುಃಖ ಪೀಡಿತನಾಗಿದ್ದಾನೆ. ಆ ದುಃಖದಿಂದ ದೂರವಾಗಬೇಕಾದರೆ ಅಹಿಂಸಾರೂಪವೂ, ದಯಾಮೂಲವೂ ಆದ ಧರ್ಮವನ್ನು ಧಾರಣೆ ಮಾಡಬೇಕು.

ಈಗಾಗಲೇ ಪತಿತರಾಗಿರುವವರನ್ನೂ, ಆಗುತ್ತಿರುವವರನ್ನೂ, ಮುಂದೆ ಆಗುವವರನ್ನೂ ಪಾವನರನ್ನಾಗಿ ಮಾಡುವ ಸಾಧನ ಯಾವುದೋ ಅದೇ ಧರ್ಮ. ಸುಖದ ಸಾಧನಗಳು ಯಾವು ಯಾವು ಇವೆಯೋ ಅವೆಲ್ಲ ಧರ್ಮದ ಆಶ್ರಯದಿಂದಲೇ ದೊರೆಯುತ್ತವೆ ಎಂಬುದನ್ನು ಒಬ್ಬ ಮಹಾತ್ಮರು ಹೇಳುತ್ತಾರೆ.

ವಿದ್ಯಾ ತಪೋ ಧನಂ ಶೌರ್ಯಂ ಕುಲೀನತ್ವಮರೋಗಿತಾ ।
ರಾಜ್ಯಂಸ್ವರ್ಗಶ್ಚ ಮೋಕ್ಷಶ್ಚ ಸರ್ವಂ ಧರ್ಮಾದವಾಪ್ಯತೆ ॥

ಅಂದರೆ ವಿದ್ಯೆ, ತಪಸ್ಸು, ಧನ, ಶೌರ್ಯ, ಸತ್ಕುಲತ್ವ, ಆರೋಗ್ಯ, ರಾಜ್ಯ, ಸ್ವರ್ಗ, ಮೋಕ್ಷಾದಿಗಳೆಲ್ಲವೂ ಧರ್ಮದಿಂದಲೇ ದೊರೆಯುತ್ತವೆ.



ಧರ್ಮದ ವ್ಯಾಖ್ಯೆಯನ್ನು ಮಾಡುತ್ತಾ ಸಮಂತ ಭದ್ರಾಚಾಯರರು ಹೇಳುತ್ತಾರೆ :-

ದೇಶಯಾಮಿ ಸಮೀಚೀನಂ । ಧರ್ಮಂ ಕರ್ಮನಿಬರ್ಹಣಂ ॥
ಸಂಸಾರದುಃಖತಃ ಸತ್ವಾನ್ । ಯೋ ಧರತ್ಯುತ್ತಮೇ ಸುಖೇ ॥
ಸದ್ದೃಷ್ಟಿಜ್ಞಾನವೃತ್ತಾನಿ । ಧರ್ಮಂ ಧರ್ಮೇಶ್ವರಾ ವಿದುಃ ॥
ಯದೀಯಪ್ರತ್ಯನೀಕಾನಿ । ಭವಂತಿ ಭವಪದ್ಧತಿ ॥

ಅಂದರೆ ಯಾವುದು ಪ್ರಾಣಿಗಳನ್ನು ಚತುರ್ಗತಿಭವ ಭ್ರಮಣರೂಪವಾದ ಸಂಸಾರದುಃಖದಿಂದ ಪಾರುಮಾಡಿ ಉತ್ತಮವಾದ ಸುಖದಲ್ಲಿರಿಸುತ್ತದೆಯೋ ಮತ್ತು ಯಾವುದು ಕರ್ಮಗಳನ್ನು ನಾಶಮಾಡುವುದೂ, ಉತ್ಕೃಷ್ಟವೂ ಆದುದೋ ಅಂತಹ ಧರ್ಮವನ್ನು ಹೇಳುತ್ತೇನೆ. ಆ ಧರ್ಮವು ಯತಾರ್ಥವಾದ ದೇವ ಶಾಸ್ತ್ರ ಗುರುಗಳಲ್ಲಿ ಭಕ್ತಿಯೂ, ಆತ್ಮಶ್ರದ್ಧೆಯೂ, ಉತ್ತಮ ಜ್ಞಾನವೂ, ಅವುಗಳಿಂದ ಉಂಟಾದ ಉತ್ತಮ ಚಾರಿತ್ರವೂ ಅಂದರೆ ನಿಜವಾದ ನಂಬಿಕೆ ತಿಳಿವಳಿಕೆ, ನಡವಳಿಕೆ ಇವುಗಳಿಗೆ ಸಮ್ಯಗ್ ದರ್ಶನ ಜ್ಞಾನ ಚಾರಿತ್ರಗಳೆಂದೂ, ರತ್ನತ್ರಯಗಳೆಂದೂ ಇವೇ ಧರ್ಮವೆಂದೂ, ಇವುಗಳಿಗೆ ವಿಪರೀತವಾದ ಮಿಥ್ಯಾ ದರ್ಶನ ಜ್ಞಾನ ಚಾರಿತ್ರಗಳಿಗೆ ಅಧರ್ಮವೆಂದೂ, ಅವು ಸಂಸಾರ ಪರಿಭ್ರಮಣಕ್ಕೆ ಕಾರಣವೆಂದೂ ತೀರ್ಥಂಕರರೂ, ಗಣಧರರೂ ಮೊದಲಾದ ಧರ್ಮೇಶ್ವರರು ಹೇಳಿದ್ದಾರೆ.

ರತ್ನತ್ರಯ ಧರ್ಮಾರಾಧನೆಯಲ್ಲಿ ತೊಡಗಿ ಚಾರಿತ್ರದ ಮುಖೇನ ಧರ್ಮವನ್ನು ಪಡೆದುಕೊಳ್ಳಬೇಕು. ಧರ್ಮವೆಂಬುದು ಕಣ್ಣಿಗೆ ಕಾಣಿಸುವುದಿಲ್ಲ. ಕೈಗೆ ಸಿಗುವುದಿಲ್ಲ. ಅದನ್ನು ಧಾರ್ಮಿಕರಲ್ಲಿ ಕಾಣಬಹುದು. ಅವರು ಮಾಡುವ ಕಾರ್ಯ, ಆಡುವ ಮಾತು ಇವುಗಳಿಂದ ಧರ್ಮಗೋಚರವಾಗುತ್ತದೆ. ಧಾರ್ಮಿಕರಿಲ್ಲದೆ ಧರ್ಮವಿಲ್ಲ. "ನ ಧರ್ಮೋ ಧಾರ್ಮಿಕೈರ್ವಿನಾ" ಎಂಬಂತೆ ಧರ್ಮ ಮತ್ತು ಧಾರ್ಮಿಕ ಇವೆರಡೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಒಂದಕ್ಕೊಂದು ಪೂರಕವಾಗಿವೆ.

ಧರ್ಮವು ಆಚಾರ ವಿಚಾರಗಳಿಂದ ವ್ಯಕ್ತವಾಗುತ್ತದೆ. ಅದನ್ನೇ ಶ್ರೀ ಕುಂದಕುಂದಾಚಾರ್ಯರು ತಮ್ಮ ಪ್ರವಚನಸಾರದಲ್ಲಿ ಹೇಳಿದ್ದಾರೆ :- ಚಾರಿತ್ತಂ ಖಲು ಧಮ್ಮೋ, ಧಮ್ಮೋ ಜೋ ಸೋಸಮೋತ್ತಿ ಣದ್ದಿಟ್ಠೋ। ಮೋಹಕ್ಖೋಹವಿಹೀಣೋ ಪರಿಣಾಮೋ ಅಪ್ಪಣೋ ಹಿ ಸಮೋ ॥

ಅಂದರೆ ನಿಶ್ಚಯದಿಂದ ಸಮ್ಯಕ್‌ಚಾರಿತ್ರವೇ ಧರ್ಮ. ನಿರ್ವಿಕಾರವಾದ ಆತ್ಮನ

ಪರಿಣಾಮವೇ ಧರ್ಮ. ಮೋಹ, ಕ್ಷೋಭೆ ಅಥವಾ ರಾಗ ದ್ವೇಷರಹಿತವಾದ ಆತ್ಮನ ಪರಿಣಾಮವೇ ಸಾಮ್ಯಭಾವ. ಈ ಸಾಮ್ಯ ಭಾವದಿಂದ ನಡೆಯುವುದೇ (ಪಾಲಿಸುವುದೇ) ಚಾರಿತ್ರ.

ಇದೇ ಆಚಾರ್ಯರು ಮೋಕ್ಷಪಾಹುಡದಲ್ಲಿ ಹೀಗೆ ಹೇಳಿದ್ದಾರೆ :-

ಚರಣಂ ಹವಇಂ ಸ ಧಮ್ಮೋ ಸೋ ಹವಇ ಅಪ್ಪಸಮಭಾವೋ ।
ಸೋ ರಾಗರೋಸಹಹಿಓ ಜೀವಸ್ಸ ಅಣಣ್ಣಪರಿಣಾಮ್ಮೋ ॥

ಅಂದರೆ ಆತ್ಮನ ಧರ್ಮ ಸಮ್ಯಕ್ ಚಾರಿತ್ರವಾಗಿದೆ. ಅದು ಆತ್ಮಶ್ರದ್ಧೆ ಮತ್ತು ಜ್ಞಾನಗಳಿಂದ ಕೂಡಿರುತ್ತದೆ. ಇದೇ ಆತ್ಮನ ಸಮರಸೀಭಾವ ಪರಿಣಾಮ. ರಾಗ-ದ್ವೇಷರಹಿತವಾದ ವೀತರಾಗಾತ್ಮನ ಏಕಾಗ್ರತೆಯ ಅವಲೋಕನವೇ ನಿಶ್ಚಯಚಾರಿತ್ರ. ಅದೇ ಸಮರಸೀಭಾವ. ಅದೇ ಧರ್ಮ ಇಂತಹ ಸಮ್ಯಕ್‌ಚಾರಿತ್ರದ ಎಡಬಿಡದ ಅಭ್ಯಾಸದಿಂದ ಮೋಹಕರ್ಮ ದಗ್ಧವಾಗುತ್ತದೆ. ನಂತರ ಜ್ಞಾನಾವರಣಾದಿ ಕರ್ಮಗಳ ನಾಶವಾಗುತ್ತದೆ. ಆಗ ಆತ್ಮನ ಸ್ವಗುಣಗಳಾದ ಅನಂತಜ್ಞಾನ, ದರ್ಶನ, ವೀರ್ಯ, ಸುಖಗಳ ಪ್ರಕಾಶವಾಗುತ್ತದೆ. ಈ ಧರ್ಮರೂಪೀ ಸಮ್ಯಕ್ ಚಾರಿತ್ರವೇ ಜೀವರನ್ನು ಜೀವನ್ಮುಕ್ತರನ್ನಾಗಿ ಮಾಡಿ ಸಿದ್ಧಾವಸ್ಥೆಗೆ ಎಳೆದೊಯ್ದು ಸಚ್ಚಿದಾನಂದ ಸ್ವರೂಪದಲ್ಲಿ ಸ್ಥಿರಪಡಿಸುತ್ತದೆ.

ಕ್ಷಮಾಗುಣ, ಮೃದುಸ್ವಭಾವ, ಸರಳವೃತ್ತಿ, ಸತ್ಯಭಾಷಣ, ಶೀಲಪಾಲನೆ, ಮನ ಮತ್ತು ಇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು, ಸ್ವಾಧ್ಯಾಯ, ತಪ, ತ್ಯಾಗ, ದೈವಭಕ್ತಿ, ಗುರುಸೇವೆ, ದಾನ, ಧರ್ಮ, ಪರೋಪಕಾರ, ಆತ್ಮಾವಲೋಕನ ಮುಂತಾದುವನ್ನು ಪಾಲಿಸುತ್ತ ಬರುವುದೇ ಧಾರ್ಮಿಕವೃತ್ತಿ. ಈ ವೃತ್ತಿಯುಳ್ಳವರಲ್ಲಿ ಧರ್ಮ ನೆಲೆಗೊಂಡು ಅವನನ್ನು ಉನ್ನತಸ್ಥಿತಿಗೆ ಕೊಂಡೊಯ್ಯುತ್ತದೆ. ಆದುದರಿಂದಲೇ 'ಧರ್ಮೋ ರಕ್ಷತಿ ರಕ್ಷಿತಃ' ಎಂದಿದ್ದಾರೆ ಪೂರ್ವಿಕ ಮಹಾನುಭಾವರು.

ಸಿರಿಸಂಪದಗಳು ಉಂಟಾಗುವುದು ಧರ್ಮದ ಬಲದಿಂದಲೇ. ಆ ಧರ್ಮ ಸಂಪಾದನೆಯನ್ನು ಹಿಂದೆ ಮಾಡಿದ್ದವರೇ ಇಂದು ಅದರ ಫಲವನ್ನು ಅನುಭವಿಸುತ್ತಿದ್ದಾರೆ. ಈ ಸಿರಿಸಂಪದಗಳು ಹೆಚ್ಚಿದಷ್ಟು ಧಾರ್ಮಿಕ ಸಂಪನ್ನತೆಯೂ ಹೆಚ್ಚುತ್ತಾ ಹೋಗಬೇಕು. ಸಾಧು-ಸಂತರನ್ನೂ, ವಿದ್ಯಾವಂತರನ್ನೂ, ಸದ್ಗುಣಿಗಳನ್ನೂ, ಸಂತುಷ್ಟಿಗೊಳಿಸುವುದೂ, ಪೂಜೆ, ಪಂಚಕಲ್ಯಾಣ, ಜೀರ್ಣೋದ್ಧಾರ ಕಾರ್ಯಗಳನ್ನು ನೆರವೇರಿಸುವುದೂ, ಹಸಿದವನಿಗೆ ಅನ್ನ ದಾನ ಮಾಡುವುದೂ, ಅಸಮರ್ಥರಿಗೆ



ಅಭಯದಾನ ಮಾಡುವುದೂ ಮುಂತಾದುವೆಲ್ಲ ಸುಕೃತಾನುಬಂಧೀಸುಕೃತಗಳು. ಇದು ಉತ್ತಮರ ನಡತೆಯಾಗಿದೆ. ಒದಗಿರುವ ಸಂಪತ್ತನ್ನು ದುರ್ವ್ಯಯ ಮಾಡುವುದಕ್ಕಿಂತ ಸುದುಪಯೋಗಮಾಡಿ ಧಾರ್ಮಿಕರೀತಿಯಲ್ಲಿ ವ್ಯಯಮಾಡಿದರೆ ಮುಂದಿನ ಸುಖಕ್ಕೆ ಬೀಜ ಬಿತ್ತಿದಂತಾಗುತ್ತದೆ. ಅದನ್ನೇ ಕವಿ ರತ್ನಾಕರ ಹೀಗೆ ಹೇಳಿದ್ದಾನೆ:-

ಧರ್ಮದಿಂದಾದುದು ಸಿರಿ ಎಂದು ಸುಖಿಸುತ್ತ ಧರ್ಮವ ಮರೆಯರುತ್ತಮರು॥
ಧರ್ಮವೇತರದೆಂದು ಭೋಗಕ್ಕೆ ಮರುಳಾಗಿ ಕರ್ಮಗಳಾಚರಿಸುವರು॥

ಇಲ್ಲಿ ಧರ್ಮಾಚರಣೆಯಿಂದ ಉತ್ತಮನೂ, ಅಧರ್ಮಾಚರಣೆಯಿಂದ ಅಧಮನೂ ಎಂದು ಪರಿಗಣಿಸಲಾಗಿದೆ.

'ಪಾಪಾದ್ದುಃಖಂ ಧರ್ಮಾತ್ಸುಖಂ' ಎಂಬ ಲೋಕೋಕ್ತಿಯಂತೆ ಸುಖಾಪೇಕ್ಷಿಗಳು ಪಾಪಾಚರಣೆಯನ್ನು ಬಿಟ್ಟು ಧರ್ಮಾಚಾರಿಗಳಾಗಬೇಕು. ಉತ್ತಮ ಗತಿಯ ಬಾಗಿಲ ಮುದ್ರೆಯನ್ನು ತೆಗೆಯಲು ಧರ್ಮವೇ ಬೀಗದ ಕೈ ಆಗಿದೆ. ಧರ್ಮದ ಅಂಗಗಳ ಪಾಲನೆಯ ಬಗ್ಗೆ ಶ್ರೀಮದುಮಾಸ್ವಾಮಿಗಳು ಹೇಳಿದ್ದಾರೆ:-

ಕ್ಷಮಾದಿದಶಭೇದೇನ ಭಿನ್ನಾತ್ಮಾ ಭುಕ್ತಿಮುಕ್ತಿದಃ।
ಜಿನೋಕ್ತಃ ಪಾಲನೀಯೋಽಯಂ ಧರ್ಮಶ್ಚೇದಸ್ತಿ ಚೇತನ॥

ಅಂದರೆ ಧರ್ಮವು ಉತ್ತಮಕ್ಷಮಾ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಿಂಚನ್ಯ, ಬ್ರಹ್ಮಚರ್ಯ ಎಂಬ ಹತ್ತು ಭೇದಗಳಿಂದ ಕೂಡಿದೆ. ಆತ್ಮನ ಗುಣ ಜ್ಞಾನ ಚೇತನರೂಪವಾದುದು. ಈ ಸ್ವಭಾವವನ್ನು ಈ ಹತ್ತು ಧರ್ಮಗಳ ಆರಾಧನೆಯಿಂದ ಕಂಡುಕೊಳ್ಳಬೇಕು. ಇವುಗಳ ಆರಾಧನೆಯಿಂದ ಇಹಲೋಕ ಸುಖವೂ ಪರಲೋಕ ಸುಖವೂ ಪರಂಪರೆಯಿಂದ ಮೋಕ್ಷವೂ ಉಂಟಾಗುತ್ತದೆ.

ಆದುದರಿಂದ ಸರ್ವರಿಗೂ ಧರ್ಮವೇ ಶರಣು. ಧರ್ಮದಿಂದ ಎಲ್ಲವೂ ಸಿದ್ಧಿಸುತ್ತದೆ.

ಧರ್ಮೋಽಯಂ ಧನವಲ್ಲಭೇಷು ಧನದಃ ಕಾಮಾರ್ಥಿನಾಂ ಕಾಮದಃ।
ಸೌಭಾಗ್ಯಾರ್ಥಿಷು ತತ್ಪ್ರದಃ ಕಿನುಪರಂ ಪುತ್ರಾರ್ಥಿನಾಂ ಪುತ್ರದಃ॥
ರಾಜ್ಯಾರ್ಥಿಷ್ವಪಿ ರಾಜ್ಯದಃ ಕಿಮಥವಾ ನಾನಾ ವಿಕಲ್ಪೈರ್ನೃಣಾಂ-
ತತ್ಕಿಂ ಯನ್ನ ದದಾತಿ ಕಿಂಚ ತನುತೇ ಸ್ವರ್ಗಾಪವರ್ಗಾವಪಿ॥

ಅಂದರೆ ಧರ್ಮವು ಧನವನ್ನಿಚ್ಛಿಸುವವರಿಗೆ ಧನವನ್ನೂ, ಇಷ್ಟಾರ್ಥವನ್ನಿಚ್ಛಿಸುವವನಿಗೆ ಇಷ್ಟಾರ್ಥವನ್ನೂ, ಸೌಭಾಗ್ಯವನ್ನಿಚ್ಛಿಸುವವರಿಗೆ ಸೌಭಾಗ್ಯವನ್ನೂ, ಪುತ್ರರನ್ನಿಚ್ಛಿಸುವವರಿಗೆ ಸುಪುತ್ರರನ್ನೂ, ರಾಜ್ಯವನ್ನಿಚ್ಛಿಸುವವರಿಗೆ ರಾಜ್ಯವನ್ನೂ ಕೊಡುವುದು. ಅಥವಾ ನಾನಾ ವಿಕಲ್ಪಗಳಿಂದೇನು? ಮನುಷ್ಯರಿಗೆ ಧರ್ಮವು ಕೊಡದಿರುವ ವಸ್ತುವಾವುದಿದೆ? ಧರ್ಮವು ಸ್ವರ್ಗ ಮೋಕ್ಷವನ್ನೂ ಕೊಡುವುದು. ಇನ್ನೇನಾಗಬೇಕು?

ಧರ್ಮಮಾಚರ ಯತ್ನೇನ ಮಾಭವತ್ವಂ ಮೃತೋಪಮಃ।
ಸದ್ಧರ್ಮಚೇತಸಾಂ ಪುಂಸಾಂ ಜೀವಿತಂ ಸಫಲಂ ಭವೇತ್॥
ಮೃತಾನ್ಯೆವ ಮೃತಾಸ್ತೇತು ಯೇ ನರಾ ಧರ್ಮಕಾರಿಣಃ।

ಅಂದರೆ ಹೇ ಪ್ರಾಣಿ! ನೀನು ಯತ್ನಪೂರ್ವಕವಾಗಿಯಾದರೂ ಧರ್ಮಾಚರಣೆಯನ್ನು ಮಾಡು. ನಿಶ್ಚೇತನನಾಗಬೇಡ. ಯಾರ ಚಿತ್ತದಲ್ಲಿ ನಿಜವಾದ ಧರ್ಮವಿದೆಯೋ ಅವನ ಜೀವನವೇ ಸಫಲವಾದುದು. ಧರ್ಮಾತ್ಮನು ಸತ್ತರೂ ಬದುಕಿದ್ದಂತೆಯೇ, ಅಮರನಾಗುತ್ತಾನೆ. ಪರಂತು ಯಾರು ಪಾಪಮಾರ್ಗದಲ್ಲಿ ನಡೆಯುತ್ತಾರೋ ಅವರು ಜೀವಿಸಿದ್ದರೂ ಸತ್ತಂತೆಯೇ ಸರಿ. ಧರ್ಮವೇ ಜೀವನ, ಅಧರ್ಮವೇ ಮೃತ್ಯು-ಹಾಗೂ,

ಮೋತ್ತೂಣಂ ಜಿಣಕ್ಖಾದಂ ಧಮ್ಮಂ ಸುಹ ಮಿಹದುಣತ್ಥಿ ಲೋಗಮ್ಮಿ।
ಸಮರಾಸುರೇನು ತಿರಿಪಿಸು ಣಿರಯಮಣುಪಿಸು ಚಿಂತೇಜ್ಜೋ॥

ಅಂದರೆ ದೇವ, ಅಸುರ, ತಿರ್ಯಂಚ, ನಾರಕಿ ಹಾಗೂ ಮಾನವರಿಂದ ತುಂಬಿರುವ ಈ ಲೋಕದಲ್ಲಿ ಜಿನೇಂದ್ರ ಪ್ರಣೀತ ಧರ್ಮವನ್ನು ಬಿಟ್ಟು ಮತ್ತಾವುದೂ ಶುಭವೂ ಪವಿತ್ರವೂ ಆದ ಧರ್ಮ ಇನ್ನೊಂದಿಲ್ಲ. ಆದುದರಿಂದ ಈ ಮಾನವ ಜನ್ಮದಲ್ಲಿ ಯತ್ನಪೂರ್ವಕವಾಗಿಯಾದರೂ ಚಾರಿತ್ರ ಪಾಲನೆಯನ್ನುಮಾಡಿ ರತ್ನತ್ರಯಧರ್ಮದಲ್ಲಿ ದೃಢಭಕ್ತಿಯನ್ನಿಡುವುದಾದರೆ ಆತ್ಮಶಾಂತಿಯನ್ನು ಹೊಂದಬಹುದು. ಈ ಲಬ್ಧಿ ಒದಗುವುದೆ ದುರ್ಲಭ. ಇದು ದೊರಕಿತೆಂದರೆ, ಆತನೇ ಕೃತಾರ್ಥ. ಶಾಸ್ತ್ರಸಾರ ಸಮುಚ್ಚಯದಲ್ಲಿ ಹೇಳಿದ್ದಾರೆ.

ಜೈನರ ನೆರೆ ಜೈನರ ಕೆಳೆ। ಜೈನರ ವ್ರತನಿಷ್ಠೆ ಜೈನಧರ್ಮಶ್ರವಣಂ॥
ಜೈನಪ್ರತಿಮಾರಾಧನೆ। ಜೈನಂಗಿವು ಕೂಡಿ ಬಂದೊಡೆ ಕೃತಾರ್ಥಂ॥

ದ್ವಾದಶಾನುಪ್ರೇಕ್ಷೆಯಲ್ಲಿ ಧರ್ಮದ ಭಾವನೆ ಹೀಗೆ ಇದೆ:-



ಧರ್ಮವೆ ಸಿರಿಯದು ಧರ್ಮವೆ ಗುರಿಯದು ನಿಜಜೀವನದಾಕೃತಿಯೆಲ್ಲಾ।
ಮರ್ಮವನರಿಯಲು ಸುರತರು ಚಿಂತಾಮಣಿ ಯಿದಕಾವುದು ಸಮನಿಲ್ಲ॥

ಅಡಿಗಡಿಗಾತ್ಮಗೆ ಸಾರುತಲಿರುವರು ಗುರುಗಳು ಸಂತತ ಶಾಂತಿಯಲಿ।
ಕುಡಿಕುಡಿ ಧರ್ಮಾವೃತವನು ಮರೆಯದೆ ಕೆಡದಿರು ತಿರುಗುತಭ್ರಾಂತಿಯಲಿ॥

ಇಂತಹ ಕಾಮಧೇನು, ಕಲ್ಪವೃಕ್ಷ, ಅಮೃತ, ಚಿಂತಾಮಣಿ, ರತ್ನದಂತಹ ಧರ್ಮದ ಆಶ್ರಯವನ್ನು ಪಡೆದುಕೊಂಡು ಕೃತಾರ್ಥರಾಗೋಣ.

ಧರ್ಮಂ ವಿಶ್ರುತ ಸುಶ್ರುತಾತಿಶಯಮಂ। ಧರ್ಮಂ ಬೃಹದ್ಭಾಗ್ಯಮಂ॥
ಧರ್ಮಂ ನಿರ್ಭರ ಸಾರ್ವಭೌಮಪದಮಂ। ಧರ್ಮಂ ಸುರೇಂದ್ರತ್ವಮಂ॥
ಧರ್ಮಂ ನಿರ್ಮಲ ಸದ್ಗುಣ ಪ್ರಕರಮಂ। ಧರ್ಮಂ ತಪಃಖ್ಯಾತಿಯಂ॥
ಧರ್ಮಂ ಧಾರ್ಮಿಕ ನಪ್ಪವಂಗೆ ಕೊಡುಗುಂ,। ನಿರ್ವಾಣಕಲ್ಯಾಣಮಂ॥

ಧರ್ಮದ ಮಹತ್ವವೆಂತಹುದೆಂದರೇ ಧರ್ಮವು ಅತಿಶಯವಾದ ಭೋಗ ಭಾಗ್ಯವನ್ನೂ, ಸಾರ್ವಭೌಮ ಪದವಿಯನ್ನೂ, ದೇವೇಂದ್ರಪದವಿಯನ್ನೂ, ಒಳ್ಳೆಯ ಗುಣವನ್ನೂ, ತಪಃಸಿದ್ಧಿಯನ್ನೂ ಉಂಟುಮಾಡಿ ಅದು ಮುಂದೆ ಶಾಶ್ವತವಾದ ಸುಖಸನ್ನಿಧಿಯಾದ ಮೋಕ್ಷಸ್ಥಾನವನ್ನು ತಲುಪಿಸುತ್ತದೆ.

ಸಾರಾಂಶ ಇಷ್ಟೇ:- ಜಡದಿಂದ ಚೇತನವನ್ನು ಬಿಡುಗಡೆ ಮಾಡಲು ಸಾಧನವಾದುದು ಧರ್ಮ ಜಡದೊಂದಿಗೆ ಚೇತನವು ಬೆರೆತು ಬಳಲುವಂತೆ ಮಾಡುವುದೇ ಕರ್ಮ. ಆದ್ದರಿಂದ ಧರ್ಮಬೇಕು, ಕರ್ಮ ಬೇಡ.

## 13. ಅನೇಕಾಂತಮಣಿ ದರ್ಪಣ

ಅನಾದಿಕಾಲದಿಂದ ಪ್ರತಿಯೊಂದು ಜೀವಾತ್ಮನೂ ತನಗೆ ಸುಖ ದೊರೆಯಬೇಕೆಂಬ ಅಪೇಕ್ಷೆಯಿಂದ ಚತುರ್ಗತಿ ಭ್ರಮಣರೂಪವಾದ ಈ ಸಂಸಾರ ಸಾಗರದಲ್ಲಿ ತೊಳಲಿ ಬಳಲುತ್ತಿದ್ದಾನೆ. ಈ ತೊಳಲಿಕೆಯಿಂದ ಬಿಡುಗಡೆಯಯಾಗುವ

ಆಸೆ ಪ್ರತಿಯೋರ್ವನಿಗೂ ಇದೆ. ಆದರೂ ಬಾಹ್ಯದಲ್ಲಿ ದೊರೆಯುವ ಅಲ್ಪಸುಖವೇ ಹೆಚ್ಚಿನದೆಂದು ಭ್ರಮಿಸಿ ಮರುಳಾಗುತ್ತಾನೆ. ಮೋಹನೀಯ ಕರ್ಮಕ್ಕೆ ಅಧೀನವಾದ ಜೀವಾತ್ಮನು ಬಿಡುಗಡೆ ಹೊಂದಲು ಹಂಬಲಿಸಿದರೆ ಏನು ಪ್ರಯೋಜನ? ಪ್ರತಿಯೊಂದು ಜೀವಿಯ ಆಜನ್ಮ ಸಿದ್ಧವಾದ ಹಕ್ಕು ಮೋಕ್ಷಫಲಾಪೇಕ್ಷೆಯಾದರೂ ಅದರ ಮಾರ್ಗವನ್ನರಿತು. ಐಹಿಕ ಭೋಗವನ್ನು ತ್ಯಜಿಸಿ, ನಿಜಸುಖ ಸಿದ್ಧಿಯ ಸಾಧನೆಯಲ್ಲಿ ತೊಡಗಿಲ್ಲ. ಅದರಿಂದಲೇ ನಿಜವಾದ ಸುಖಲಭಿಸಿಲ್ಲ. ಪ್ರಚಲಿತ ಪ್ರಪಂಚದಲ್ಲಿ ಜನ್ಮಿಸಿ ಗಮಿಸುತ್ತಿರುವ ಜೀವಿಗಳು ತರತಮಭಾವದಿಂದ ಸುಖದ ಅಪೇಕ್ಷೆಯನ್ನು ಮಾಡುತ್ತಲೇ ಇವೆ ತಮ್ಮ ಗಮನ ಉನ್ನತಿಯ ಕಡೆಗೇ ಇದೆ. ಕೆಲವರು ಧನಿಕರಾಗಬೇಕೆಂದೂ, ಕೆಲವರು ಪಂಡಿತರಾಗಬೇಕೆಂದೂ, ಕೆಲವರು ರಾಷ್ಟ್ರನಿರ್ಮಾಪಕರಾಗಬೇಕೆಂದೂ, ಇನ್ನೂ ಮುಂತಾದ ಕನಸಿನ ಜೀವನವನ್ನು ಮನಸ್ಸಿನಲ್ಲಿಯೇ ನಿರಂತರ ಅನುಭವಿಸಿ ವ್ಯರ್ಥರಾಗುತ್ತಾರೆ. ಕಾರಣ ಆ ಪದವಿಯನ್ನು ಪಡೆಯುವ ಯಾವ ಮಾರ್ಗವಿದೆಯೋ ಅದರಲ್ಲಿ ನಡೆಯುವುದಿಲ್ಲ. ಏನೇ ಇರಲಿ, ಪ್ರತಿಯೋರ್ವನ ಅಭಿಲಾಷೆಯೂ ಸುಖದಕಡೆಗೆ ಇದೆಯೇ ಹೊರತು ಕಷ್ಟದ ಅಪೇಕ್ಷೆಯ ಲೇಶಾಂಶವೂ ಯಾರಿಗೂ ಇಲ್ಲ. ಆದರೂ ಕಷ್ಟವೆಂಬ ಭೂತ ಸಂಸಾರಿಗೆ ಹಿಡಿಯದೇ ಬಿಟ್ಟಿಲ್ಲ ಮತ್ತು ಇದರ ಅರಿವು ಸಂಸಾರಿಗೆ ಆಗಿಲ್ಲ. ಕಾರಣ ಅಜ್ಞಾನದ ಆವರಣ. ಅದು ಪೂರ್ವ ಭವದಲ್ಲಿ ಆರ್ಜಿಸಿದ ಕರ್ಮಫಲದ ಪರ್ಯಾಯ, ಶುಭಾಶುಭ ಕರ್ಮಾರ್ಜನೆಯೇ ಸುಖದುಃಖಾನುಭವ ಸ್ವಾದವೆಂದು ಪ್ರತಿಯೋರ್ವನಿಗೂ ತಿಳಿಯಬೇಕು.

ಕರ್ಮ ಮತ್ತು ಆತ್ಮಗಳು ಅನಾದಿಯಾಗಿದ್ದರೂ ಸಹ ಕರ್ಮರಹಿತವಾದ ಆತ್ಮ ಸಾಕ್ಷಾತ್ಕಾರ ಹೊಂದಲು ಸಾಧ್ಯವಿದೆ.

ಈ ರೀತಿ ಆತ್ಮನ ನಿಜವಾದ ಅಪೇಕ್ಷೆಯನ್ನು ವ್ಯವಹಾರ ನಿಶ್ಚಯಗಳಿಂದ ನಿರ್ಧರಿಸಿಕೊಳ್ಳುವುದಕ್ಕೆ ಒಂದು ಕನ್ನಡಿಯ ಮುಂದೆ ನಿಲ್ಲಬೇಕು. ಅದೇ ಅನೇಕಾಂತ ಧರ್ಮದರ್ಪಣ. ಇದು ದೊರೆಯುವುದು ಜೈನಧರ್ಮದ ಸಿದ್ಧಾಂತಾಗಾರದಲ್ಲಿ. ಅಲ್ಲಿ ನಿಜವಾದ ನಂಬಿಕೆ, ಜ್ಞಾನ ಆಚರಣೆಯ ಮೆಟ್ಟಿಲನ್ನು ಹತ್ತಿ ಮುಂದುವರಿದರೆ ಅರ್ಹದ್ಧರ್ಮಪ್ರಕಾಶಿತವಾದ ಅನೇಕಾಂತ ಧರ್ಮದರ್ಪಣವು ಗೋಚರಿಸುತ್ತದೆ. ಅದರಲ್ಲಿ ತನ್ನತನವನ್ನು ಕಾಣಬಹುದು.

ಇದು ಭವಭ್ರಮಣೆಯಲ್ಲಿ ಬಳಲಿರುವ ಪಥಿಕನಿಗೆ ನೆರಳನ್ನು ನೀಡುವ ಕಲ್ಪವೃಕ್ಷವನ್ನು ತೋರಿಸಲು ಸಹಾಯಮಾಡುವ ಸ್ವಯಂಪ್ರಕಾಶಿತಮಣಿ ದರ್ಪಣ.



ಸುಖವನ್ನು ಹುಡುಕುತ್ತಿರುವವರಿಗೆ ಇದರ ನೆರವು ಬೇಕೇ ಬೇಕು. ಆದುದರಿಂದಲೇ ಜೈನಧರ್ಮಸಿದ್ಧಾಂತದಲ್ಲಿ ಇದರ ಸ್ಥಾನ ಮಹತ್ಪೂರ್ಣವಾದುದು. ಇಲ್ಲಿ ಇದಕ್ಕೆ "ಅನೇಕಾಂತ" ಎಂಬ ಸಿದ್ಧಾಂತ ವೈಜ್ಞಾನಿಕ ಶಿರೋನಾಮೆಯನ್ನು ಕೊಟ್ಟಿದ್ದಾರೆ.

ಒಂದು ವಸ್ತುವಿನ ಗುಣಪರ್ಯಾಯದ ಸ್ಥಿತಿ, ಲಯಗಳನ್ನು ದ್ರವ್ಯ, ಕ್ಷೇತ್ರ, ಕಾಲ, ಭಾವಗಳ ಆಧಾರದಿಂದ ಅದರ ಸ್ವಾಭಾವಿಕರೂಪವನ್ನು ಅನೇಕ ಅಪೇಕ್ಷೆ ಅಥವಾ ಅಭಿಪ್ರಾಯ ಅಥವಾ ಊಹೆಗಳು ಅವ್ಯಕ್ತವಾಗಿವೆ. ಇಂತಹ ಅಪೇಕ್ಷೆಗಳಿಗೆ ನಯ ಎನ್ನುತ್ತಾರೆ. ಆದುದರಿಂದ ಅನೇಕಾಂತ ನಿರ್ಣಯವು ಸತ್ಯವಾದುದು ಮತ್ತು ನಿಖರವಾದುದು. ಅನಪೇಕ್ಷಿತ ನಿರ್ಣಯದ ಏಕಾಂತವಾದವು ಮಿಥ್ಯವಾದುದು. ಒಟ್ಟಿನಲ್ಲಿ ಹೇಳುವುದಾದರೆ ಅನೇಕಾಂತವು ಜೈನದರ್ಶನದ ಪ್ರಾಣವೆಂದೇ ನಿರ್ಧರಿಸಬಹುದು.

ಜೈನಶಾಸ್ತ್ರದಲ್ಲಿರುವ ನಾಲ್ಕು ಅನುಯೋಗಗಳಲ್ಲಿ ಏನೇನು ರೂಪಿಸಲ್ಪಟ್ಟಿದೆಯೋ ಅದೆಲ್ಲಾ ಸ್ಯಾದ್ವಾದವೆಂಬ ಅಡಿಗಲ್ಲ ಮೇಲೆ ಅನೇಕ ಅಪೇಕ್ಷೆಗಳೆಂಬ ಸುತ್ತಿಗೆಯ ಏಟಿಗೆ ಸಿಕ್ಕಿರೂಪಿತವಾಗಿದೆ.

ಅನೇಕಾಂತದ ಶಬ್ದದ ಅರ್ಥವೇನೆಂದರೆ ಪ್ರತ್ಯೇಕ ವಸ್ತುವನ್ನು ಭಿನ್ನ ಭಿನ್ನ ದೃಷ್ಟಿಬಿಂದುವಿನಿಂದ ವಿಚಾರ ಮಾಡಿನೋಡಿ ನಿರ್ಣಯಿಸಿ ಹೇಳುವ ಸೂತ್ರ. ಒಂದು ವಸ್ತುವಿನ ಸ್ವರೂಪವನ್ನು ಯಾವಾಗಲೂ ಒಂದೇ ದೃಷ್ಟಿಕೋನದಿಂದ ಅವಲೋಕಿಸುವ ಪದ್ಧತಿಯನ್ನು ಅಪೂರ್ಣ ಮತ್ತು ಅಪ್ರಮಾಣಿತವೆಂದೂ, ಒಂದೇ ವಸ್ತುವಿನ ಯಥಾರ್ಥ ಸ್ವರೂಪವನ್ನು ಭಿನ್ನಭಿನ್ನ ಅಪೇಕ್ಷೆಯಿಂದ ಭಿನ್ನ ಭಿನ್ನ ಧರ್ಮಕಥನಮಾಡುವ ಪದ್ಧತಿಯನ್ನು ಪೂರ್ಣ ಮತ್ತು ಪ್ರಮಾಣಿತವೆಂದು ಜೈನಧರ್ಮವು ನಿರೂಪಿಸುತ್ತದೆ. ಇದಕ್ಕೆ ಅನೇಕಾಂತವೆಂದು ಹೆಸರು. ಈ ಅನೇಕಾಂತವಾದಕ್ಕೆ ಅಪೇಕ್ಷಾವಾದ, ಕಥಂಚಿತ್ವಾದ, ಮತ್ತು ಸ್ಯಾದ್ವಾದ ಎಂಬ ನಾಮಾಂತರಗಳಿವೆ.

ವಸ್ತುವಿನ ಕೇವಲ ಒಂದು ಗುಣ ಅಥವ ಧರ್ಮವನ್ನು ಅರಿತು ಅದು ಇಂತಹುದು ಎಂದು ನಿರ್ಧರಿಸುವುದು ಕೇವಲ ಭ್ರಮೆ. ಏಕೆಂದರೆ ಅದೇ ಕಾಲದಲ್ಲಿ ಆ ವಸ್ತುವಿನಲ್ಲಿ ಇತರ ಅನೇಕ ಗುಣ ಅಥವ ಧರ್ಮಗಳು ಅಡಕವಾಗಿರುವುದು.

ಉದಾಹರಣೆಗೆ ಒಂದು ಮಾವಿನಹಣ್ಣನ್ನು ತೆಗೆದುಕೊಳ್ಳಿ. ಅದರಲ್ಲಿ ರೂಪವಿದೆ. ರಸವಿದೆ, ವಾಸನೆ ಇದೆ. ಹಸಿವನ್ನು ನೀಗಿಸುವ ಶಕ್ತಿ ಇದೆ, ಸಿಹಿ ಇದೆ ಮತ್ತು ಕೆಲವು ರೋಗವನ್ನು ವಾಸಿಮಾಡುವ ಗುಣವಿದೆ. ಹೀಗೆ ಇನ್ನೂ ಎಷ್ಟೋ ಶಕ್ತಿ, ಗುಣ, ಧರ್ಮಗಳನ್ನು ಈ ಹಣ್ಣು ಹೊಂದಿದೆ ಎಂಬುದು ಸರ್ವರಿಗೂ

ಗೋಚರವಾಗುತ್ತದೆ. ಆದ್ದರಿಂದ ಪದಾರ್ಥವನ್ನು ಕೇವಲ ಒಂದೇಸಾರಿ ಒಂದೇ ದೃಷ್ಟಿಯಿಂದ ನಿರ್ಣಯಿಸಲಾಗುವುದಿಲ್ಲ. ಮೊದಲು ಅದನ್ನು ಭಿನ್ನದೃಷ್ಟಿಯಿಂದ ನೋಡಬೇಕು. ವಸ್ತುವಿನ ಧರ್ಮಗಳು ಒಂದು ಅಪೇಕ್ಷೆಯಿಂದ ಇರಬಲ್ಲವು ಎಂದು ತಿಳಿಸುವ ಈ ಅನೇಕಾಂತವಾದಕ್ಕೆ ಸ್ಯಾದ್ವಾದವೆಂದು ಹೆಸರು ಮತ್ತು ಅಹುದು ಅಲ್ಲ, ಇದೆ, ಇಲ್ಲ ಎಂಬ ಪರಸ್ಪರ ವಿರೋಧ ಧರ್ಮಗಳು ಒಂದೇ ವಸ್ತುವಿನಲ್ಲಿ ಇರಬಲ್ಲದೆಂಬ ನಿರ್ಣಯವನ್ನು ತೋರಿಸುವ ಏಳು ಅಂಗಗಳುಳ್ಳ ಈ ಅನೇಕಾಂತಕ್ಕೆ ಸಪ್ತಭಂಗಿ ಎಂದೂ ಹೆಸರುಂಟು. ಈ ವಾದವು ನಮ್ಮ ದೃಷ್ಟಿಕೋನವನ್ನು ವಿಸ್ತೃತಮಾಡಿ ವಿಚಾರಧಾರೆಯನ್ನು ಪೂರ್ಣತೆಯ ಒಂದು ನಿರ್ಣಯದ ಕಡೆಗೆ ಒಯ್ಯುತ್ತದೆ. ಪ್ರತಿ ವಸ್ತುವಿನಲ್ಲೂ ಅನೇಕ ಗುಣಧರ್ಮಗಳಿವೆ.

ಮಾವಿನಹಣ್ಣಿನ ಸಂಬಂಧದಲ್ಲಿ ಮೇಲೆ ಹೇಳಿರುವಂತೆ ರೂಪವು ಸಹ ಇದೆ, ರಸವೂ ಸಹ ಇದೆ ಗಂಧವೂ ಸಹ ಇದೆ ಮತ್ತು ಸಿಹಿಯಾಗಿಯೂ ಸಹ ಇದೆ ಎಂಬುದು ಅನೇಕಾಂತದ ಅವಲೋಕನೆ ಇದೆ ಮತ್ತು ಹಣ್ಣಿನ ನೈಜತೆಯ ನಿರೂಪಣೆಯಿದೆ. ಇದಕ್ಕೆ ಪ್ರತಿಯಾಗಿ ಏಕಾಂತ ಮುಷ್ಟಿಯಿಂದ ಹಣ್ಣಿನಲ್ಲಿ ಕೇವಲ ರೂಪಮಾತ್ರವಿದೆ, ರಸ ಮಾತ್ರವಿದೆ. "ಸಹ" ಎಂಬಲ್ಲಿ ಬೇರೆ ಧರ್ಮದ ಸ್ವೀಕಾರದ ಸ್ವರವು ಅಡಗಿದೆ. ಆದರೆ "ಮಾತ್ರ" ಎಂಬಲ್ಲಿ ಮತ್ತೊಂದರ ಸ್ಪಷ್ಟತೆಗೆ ನಿಷಿದ್ಧವಿದೆ.

ಒಂದೇ ಪದಾರ್ಥದಲ್ಲಿ ಏಕಕಾಲದಲ್ಲಿ ಅನಂತಗುಣ ಧರ್ಮಗಳಿದ್ದರೂ ಅವುಗಳ ಉಚ್ಚಾರಣೆಯು ಮಾತ್ರ ಏಕಕಾಲದಲ್ಲಿ ಆಗಲು ಸಾಧ್ಯವಿಲ್ಲವೆನ್ನಬಹುದು. ಆಗ ಅದು ಏಕಾಂತವೆನಿಸುವುದಿಲ್ಲ. ಏಕೆಂದರೆ ಮನುಷ್ಯನ ಬುದ್ಧಿ, ಶಕ್ತಿ, ಶಬ್ದ ಸಾಮರ್ಥ್ಯಗಳು ಪರಿಮಿತವಾಗಿವೆ. ಆದುದರಿಂದ ಪದಾರ್ಥಗಳಲ್ಲಿರುವ ಅನೇಕ ಧರ್ಮಗಳನ್ನು ನಾವು ಸಾಪೇಕ್ಷ ದೃಷ್ಟಿಯಿಂದ ತಿಳಿಯಬೇಕು. ಅಪೇಕ್ಷೆ ಇಲ್ಲದ ವಸ್ತುವಿಲ್ಲ. ಅಪೇಕ್ಷೆ ಇಲ್ಲದ ಗುಣಗಳೂ ಇಲ್ಲ. ಒಂದು ಪದಾರ್ಥದಲ್ಲಿ ಇರುವಿಕೆಯೂ, ಇಲ್ಲದಿರುವಿಕೆಯೂ ಆಗುತ್ತದೆ.

ಉದಾಹರಣೆಗೆ :- ಉಂಗುರವನ್ನು ಕರಗಿಸಿ ಓಲೆಯನ್ನು ಮಾಡಿಸಿದಾಗ ಸ್ವದ್ರವ್ಯ, ಕ್ಷೇತ್ರ, ಕಾಲ, ಭಾವ, ರೂಪಗಳಿಂದ ಓಲೆಯು ಇದೆ ಎಂದೂ ಅದೇ ಪರದ್ರವ್ಯ, ಕ್ಷೇತ್ರ, ಕಾಲ, ಭಾವ, ರೂಪಗಳಿಂದ ಇಲ್ಲವೆಂದೂ ಅದು ಉಂಗುರವೆಂದೂ ಹೇಳಬಹುದು. ಓಲೆಯ ಅಪೇಕ್ಷೆಯಿಂದ ಉಂಗುರದ ನಾಸ್ತಿಯೂ ಉಂಗುರದ ಅಪೇಕ್ಷೆಯಿಂದ ಓಲೆಯ ನಾಸ್ತಿಯೂ ಆಗುತ್ತದೆ. ದ್ರವ್ಯದ ಅಪೇಕ್ಷೆಯಿಂದ ಓಲೆಯ ಮತ್ತು ಉಂಗುರದ ಚಿನ್ನವೂ ನಿತ್ಯವೂ ಪರ್ಯಾಯದ



ಅಪೇಕ್ಷೆಯಿಂದ ಅನಿತ್ಯವೂ ಆಗಿದೆ.

ಸಾಪೇಕ್ಷ ಕಥನದಲ್ಲಿ ಒಂದು ವಿಷಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಅವುಗಳ ಧರ್ಮಗುಣಗಳನ್ನು ನಿರ್ಣಯಿಸಬೇಕು. ಆದರೆ ಆತ್ಮ ಅಥವಾ ಜೀವವು ಜಡವೂ ಚೇತನವೂ ಆಗಿದೆ ಎಂದಾಗಲೀ ನಿರ್ಣಯಿಸಲಾಗುವುದಿಲ್ಲ.

ಈ ಅನೇಕಾಂತವನ್ನು ನ್ಯಾಯಶಾಸ್ತ್ರದಲ್ಲಿ ಸಪ್ತಭಂಗೀ ನ್ಯಾಯವೆಂದೂ ಹೇಳುತ್ತಾರೆ. ಈ ವ್ಯವಹಾರವನ್ನು ಸುಲಭವಾಗಿ ತಿಳಿಯಲು ಈ ನ್ಯಾಯದಿಂದ ಸಾಧ್ಯ. ಅವು ಯಾವುವೆಂದರೆ 1) ಸ್ಯಾದಸ್ತಿ 2) ಸ್ಯಾನ್ನಾಸ್ತಿ 3) ಸ್ಯಾದಸ್ತಿ ನಾಸ್ತಿ 4) ಸ್ಯಾದವಕ್ತವ್ಯ 5) ಸ್ಯಾದಸ್ತಿ ಅವಕ್ತವ್ಯ 6) ಸ್ಯಾನ್ನಾಸ್ತಿಅವಕ್ತವ್ಯ 7) ಸ್ಯಾದಸ್ತಿನಾಸ್ತಿ ಅವಕ್ತವ್ಯ.

ಅಂದರೆ ಅಪೇಕ್ಷಾಭಾವದಿಂದ ಪದಾರ್ಥವು ವಿವಿಧ ರೂಪದಿಂದ ಇದೆ, ನಿಷೇಧರೂಪದಿಂದ ಇಲ್ಲ. ಏಕಕಾಲದಲ್ಲಿ ವಿಧಿ, ನಿಷೇಧರೂಪದಿಂದ ಪ್ರಯೋಗ ಮಾಡುವಾಗ ಇದ್ದೂ ಇಲ್ಲವೆಂದಾಗುತ್ತದೆ. ಆದರೆ ಎರಡರ ಕಥನವೂ ಒಂದೇ ಕಾಲದಲ್ಲಿ ಮಾಡಲು ಸಾಧ್ಯವಿಲ್ಲ. ಆಗ ಅದು ಅವಕ್ತವ್ಯ. ಆ ದೃಷ್ಟಿಯಿಂದ ಅವಕ್ತವ್ಯವಾಗಿದ್ದರೂ ಪದಾರ್ಥವು ಇದ್ದೇ ಇದೆ. ಆಗ ಅದು ಅಸ್ತಿಅವಕ್ತವ್ಯ. ಪರರೂಪದಿಂದ ಅವಕ್ತವ್ಯವೂ ಇಲ್ಲ. ಆದುದರಿಂದ ಆಗ ನಾಸ್ತಿ ಅವಕ್ತವ್ಯವಾಯಿತು. ಸ್ವಪರರೂಪವಾದ ದೃಷ್ಟಿಯಿಂದ ಅಸ್ತಿ-ನಾಸ್ತಿ-ಅವಕ್ತವ್ಯ. ಹೀಗೆ ಸಪ್ತಭಂಗಿಯ ಪ್ರಯೋಗವಾಗುತ್ತದೆ.

ಹೀಗೆ ಪದಾರ್ಥಗಳಲ್ಲಿರುವ ಅನಂತಧರ್ಮಗಳನ್ನು ಒಂದೇ ಸಾರಿ ತಿಳಿಯುವುದು ಸಂಸಾರಿ ಜೀವಿಗೆ ಅಸಾಧ್ಯವಾದುದು. ಆದುದರಿಂದ ಅಪೇಕ್ಷಾ ದೃಷ್ಟಿಯಿಂದಲೇ ಪದಾರ್ಥಗಳ ವಿಭಿನ್ನ ಅವಸ್ಥೆಗಳ ಜ್ಞಾನವನ್ನು ಮಾಡಿಕೊಳ್ಳಬೇಕು. ಈ ಸತ್ಯವನ್ನು ತಿಳಿಸುವುದೇ ಸ್ಯಾದ್ವಾದ ಅಥವಾ ಅನೇಕಾಂತ ಅಥವಾ ಸಪ್ತಭಂಗೀವಾದವೆನ್ನುತ್ತಾರೆ.

ಉದಾಹರಣೆಗೆ ಅನೇಕ ಕುರುಡರು ಆನೆಯ ವಿಭಿನ್ನ ಅವಯವಗಳನ್ನು ಮುಟ್ಟಿ ಆನೆಯು ಕಂಭದಂತಿದೆ, ಮರದ ಹಾಗೆ, ಹಾವಿನ ಹಾಗೆ, ಗೋಡೆಯ ಹಾಗೆ ಇದೆ ಎಂದು ವರ್ಣನೆ ಮಾಡುತ್ತಾರೆ. ವಿಭಿನ್ನ ಅವಯವಗಳ ದೃಷ್ಟಿಯಿಂದ ಆನೆಯು ಹಾಗೆಯೂ ಇದೆ. ಆದರೆ ಎಲ್ಲಾ ಅವಯವಗಳ ಸಮುದಾಯ ದೃಷ್ಟಿಯಿಂದ ಪೂರ್ಣ ಆನೆಯ ರೂಪದ ನಿರ್ಣಯವಾಗುತ್ತದೆ. ಹೀಗೆ ಸ್ಯಾದ್ವಾದವು ಸರ್ವಧರ್ಮ ಸಮನ್ವಯಕ್ಕೆ ಪ್ರಥಮಸಾಧನವೂ ಆಗುತ್ತದೆ. ಇದರಲ್ಲಿ ಸಹಿಷ್ಣುತೆ, ಉದಾರತೆ ಇದೆ. ಆದುದರಿಂದ ಇದು ಜೈನಧರ್ಮಾಗಮದ ಮೂಲವೂ ಆಗಿದೆ.

ಸ್ಯಾತ್-ವಾದ ಎಂಬ ಎರಡು ಪದಗಳ ಭಾವವೇನೆಂದರೆ ಕೆಲವು ದೃಷ್ಟಿಯಿಂದ ಹೀಗಿದೆ. ಹಾಗಿದೆ ಎಂದು ಕಥನಮಾಡುವುದು ಅಥವಾ ನಿರ್ಣಯಿಸುವುದು. ವಸ್ತುವಿನ ಅನೇಕ ಗುಣಧರ್ಮಗಳ ದೃಷ್ಟಿಯನ್ನು ಗೌಣವಾಗಿಟ್ಟುಕೊಂಡು ಕೆಲವೊಂದು ವಿಶೇಷ. ಗುಣಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟು ನಿರ್ಣಯಮಾಡುವುದೇ ಸ್ಯಾದ್ವಾದ. ಅಂದರೆ ಏಕಾಂತವನ್ನು ತ್ಯಾಗಮಾಡಿ ಅನೇಕಾಂತ ದೃಷ್ಟಿಯ ಪ್ರತಿಪಾದನೆ ಮಾಡುವುದು.

ಸರ್ವದೃಷ್ಟಿಯಿಂದಲೂ ಒಂದು ಪದಾರ್ಥವನ್ನು ಪರೀಕ್ಷಿಸಿ ಅದರ ಸಂಪೂರ್ಣ ಸತ್ಯವನ್ನು ಕಂಡುಕೊಳ್ಳುವ ಸ್ಥಿತಿಯೇ ಅನೇಕಾಂತ ಇದರ ಎದುರಿನಲ್ಲಿ ವ್ಯವಹಾರ ಮತ್ತು ನಿಶ್ಚಯಗಳ ಪರಿಚಯವಾಗುತ್ತದೆ. ಜೀವ ಅಜೀವಗಳ ಅರಿವೂ, ಪಾಪಪುಣ್ಯಗಳ ಜ್ಞಾನವೂ, ಗತಿ ಪರ್ಯಾಯಗಳ ನೆನಪೂ ಆಗುವುದಾದರೆ ಜೀವದ ಅಂತಿಮ ನೆಲೆಯಾದ ಮೋಕ್ಷದ ಹಾದಿಯೂ ಕಾಣುವುದು. ಆದುದರಿಂದ ಚಿದಾನಂದೈಕ ಸ್ವರೂಪದರ್ಶಕವಾದ ಅನೇಕಾಂತ ಮಣಿ ದರ್ಪಣದ ಮುಂದೆ ನಾವೆಲ್ಲಾ ಸಮ್ಯಗ್ದರ್ಶನ ಜ್ಞಾನ ಚಾರಿತ್ರಧಾರಿಗಳಾಗಿ ನಿಲ್ಲಬೇಕು. ಅನೇಕಾಂತವು ಜೈನದರ್ಶನದ ಆಧಾರಸ್ತಂಭ. ಜೈನ ತತ್ತ್ವ ಜ್ಞಾನದ ಎಲ್ಲಾ ನಿರ್ಧಾರವೂ ಈ ಅನೇಕಾಂತ ಸಿದ್ಧಾಂತದ ಮೇಲೆಯೇ ಅವಲಂಬಿತವಾಗಿದೆ.

# 14. ಕರ್ಮಸಿದ್ಧಾಂತ

ಪ್ರತಿ ಆತ್ಮನೂ ಪರಮಾತ್ಮನೆನಿಸುವ ಪರಮಗುಣವನ್ನು ಸ್ವಭಾವದಿಂದಲೇ ಹೊಂದಿದೆ. ಆದುದರಿಂದ ಆತ್ಮನನ್ನು ಜ್ಞಾನಮಯನೂ, ಚೇತನಮಯನೂ, ಪರಮಾನಂದಮಯನೂ, ಶುದ್ಧನೂ, ಬುದ್ಧನೂ, ಅಮೂರ್ತನೂ ಎಂದು ಹೇಳುವ ಮಾತು ಸತ್ಯವಿದೆ. ಈ ದೃಷ್ಟಿಯಲ್ಲಿ ಎಲ್ಲಾ ಆತ್ಮರು ಸ್ವಭಾವದಿಂದ ಸರಿಸಮಾನರಾಗಿದ್ದಾರೆ. ಪಾರಮಾರ್ಥಿಕ ದೃಷ್ಟಿಯಿಂದ ಅವಲೋಕಿಸಿದಾಗ ಈ ಸತ್ಯಾರ್ಥವು ಪ್ರಕಟವಾಗುತ್ತದೆ. ಆದರೆ ವ್ಯಾವಹಾರಿಕ ದೃಷ್ಟಿಯಿಂದ ಪರಿಶೀಲಿಸಿದರೆ ಈ ಸಂಸಾರಿ ಆತ್ಮರುಗಳಲ್ಲಿ ನಾನಾ ಪ್ರಕಾರದ ವಿಚಿತ್ರತೆ, ಏರು-ಪೇರು, ಸುಖ-ದುಃಖ,



ಮೇಲು-ಕೀಳು, ಹೀನ-ಅಧಿಕತೆ, ಜ್ಞಾನಿ-ಅಜ್ಞಾನಿ ಮುಂತಾದ ಅವಸ್ಥೆಗಳು ಕಂಡುಬರುತ್ತವೆ. ಪಶು-ಪಕ್ಷಿ, ಸ್ತ್ರೀ-ಪುರುಷ, ಸಬಲ-ದುರ್ಬಲ, ಶ್ರೀಮಂತ-ಬಡವ ಮುಂತಾದ ರೀತಿನೀತಿಗಳು ಕಂಡು ಬರುತ್ತವೆ. ಒಬ್ಬನು ಹೆಚ್ಚು ಕಾಲ ಬದುಕುತ್ತಾನೆ. ಮತ್ತೊಬ್ಬನು ಬೇಗ ಸಾಯುತ್ತಾನೆ. ಒಬ್ಬನು ಆರೋಗ್ಯವಂತನಿದ್ದರೆ, ಬೇರೊಬ್ಬನು ರೋಗಿಯಾಗಿರುತ್ತಾನೆ. ಒಬ್ಬನು ಶಾಂತನಾಗಿದ್ದರೆ, ಮಗದೊಬ್ಬನು ಕಡು ಕೋಪಿಷ್ಠನಾಗಿರುತ್ತಾನೆ. ಒಬ್ಬನು ಕಡು ಲೋಭಿಯಾದರೆ ಇನ್ನೊಬ್ಬನು ಧಾರಾಳಿಯಾಗಿರುತ್ತಾನೆ. ಒಬ್ಬ ಮೂರ್ಖ, ಇನ್ನೊಬ್ಬ ಚತುರ, ಹೀಗೆ ದೃಗ್ಗೋಚರವಾಗುವ ಜೀವರಾಶಿಗಳಲ್ಲಿ ವಿವಿಧ ರೀತಿಯ ಮೇಲುಕೀಳುಗಳು ಇವೆ. ಸ್ವಭಾವದಿಂದಲೇ ಪ್ರತಿ ಆತ್ಮರೂ ಸಮಾನ ಇವೆ. ಎಂದ ಮೇಲೆ ಈ ರೀತಿಯ ಭಿನ್ನತೆ ಮತ್ತು ವಿಚಿತ್ರತೆ ಇರಲು ಕಾರಣವೇನಿರಬಹುದು?

ಇದೆಲ್ಲ ಈಶ್ವರನ ಲೀಲೆ ಎಂದೂ,. ಮಾಯಾ ಜಗತ್ತಿನ ಆಟ ಎಂದೂ, ಆ ನಿಯಾಮಕನ ವಿಚಿತ್ರವೆಂದೂ, 'ಮಾಡಿದ್ದುಣ್ಣೋ ಮಹಾರಾಯಾ' ಎಂಬಂತೆ ಹೊತ್ತು ತಂದ ಕರ್ಮ ಎಂದೂ ಅನೇಕರು ಅನೇಕ ರೀತಿಯಲ್ಲಿ ಹೇಳುತ್ತಾರೆ.

ಇದೆಲ್ಲ ಒಬ್ಬನಿಂದ ನಡೆಯುವ ಲೀಲೆ, ಆಟ, ಮಾಯೆ, ವಿಚಿತ್ರ ಎನ್ನುವುದಾದರೆ ಒಬ್ಬನಂತೆ ಇನ್ನೊಬ್ಬ, ಒಂದುಪ್ರಾಣಿಯಂತೆ ಮತ್ತೊಂದು ಪ್ರಾಣಿಯ ರೀತಿ-ನೀತಿಗಳು, ಸುಖ-ದುಃಖಗಳು, ಜೀವನದ ಆಗು-ಹೋಗುಗಳು ಒಂದೇ ರೀತಿ ಏಕಿಲ್ಲ? ಇದಕ್ಕೆ ಕಾರಣ ಕೇಳಿದಾಗ ಸರ್ವ ಸಾಮಾನ್ಯವಾಗಿ ಬರುವ ಉತ್ತರವೆಂದರೆ ಅವರವರು ಮಾಡಿದ ಕರ್ಮ ಎಂದು ಹೇಳಿಬಿಡುತ್ತಾರೆ. ಆದರೆ ಆ ಕರ್ಮ ಎಂದರೇನು? ಕರ್ಮ ಮತ್ತು ಆತ್ಮರ (ಜೀವರ) ಸಂಬಂಧವೆಂತಹುದು? ಕರ್ಮದ ಕಾರ್ಯವೇನು? ಎಂಬುದನ್ನು ಅರಿವು ಮಾಡಿ ಕೊಡುವವರು ದೊರೆಯುವುದು ವಿರಳ. ಕರ್ಮಸಿದ್ಧಾಂತದ ಪರಿಚಯ ಮಾಡಿಕೊಳ್ಳಲು ಇಷ್ಟವುಳ್ಳವರು ಜೈನ ಧರ್ಮದ ಆಶ್ರಯ ಪಡೆಯಬೇಕು.

ಜೈನ ದರ್ಶನವೊಂದೇ ಕರ್ಮ ಮತ್ತದರ ಬಂಧ ಬಿಡುಗಡೆಯ ಸಂಬಂಧವು ಜೀವನಿಗೆ ಹೇಗೆ ಎಂಬುದನ್ನು ವೈಜ್ಞಾನಿಕ ರೀತಿಯಲ್ಲಿ ನಿರೂಪಿಸುತ್ತದೆ. ಆದರೆ ಅನ್ಯ ದರ್ಶನಗಳಲ್ಲಿ ಈ ಜೀವದ ಏರುಪೇರುಗಳಿಗೆ ಬೇರೊಬ್ಬನ ಕಡೆ ಕೈ ತೋರಿಸಿ ಜಾರಿಕೊಳ್ಳುವ ಅಂಶವಿದೆ. ಮತ್ತು ಅಸ್ಪಷ್ಟವಿದೆ. ಆದುದರಿಂದ ಈ ಕರ್ಮಸಿದ್ಧಾಂತ ನಿರೂಪಣೆ ಜೈನ ದರ್ಶನದಲ್ಲಿ ಮಾತ್ರವೇ ದೊರೆಯುವುದು.

ಏಕೆಂದರೆ ಕೆಲವರು ಹೇಳುತ್ತಾರೆ- 'ದೇವರೇ! ನೀನಿಲ್ಲದೆ, ನಿನ್ನ ಆಜ್ಞೆಯಿಲ್ಲದೆ

ಹುಲ್ಲುಕಡ್ಡಿಯೂ ಅಲುಗಾಡದು. ಇದೆಲ್ಲ ನಿನ್ನ ಲೀಲೆ'' ಎಂದು ಹೀಗೆ ಹೇಳಿದವರೇ ಮತ್ತೊಮ್ಮೆ ''ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೋ ಹರಿಯೇ'' ಎಂದು ತನ್ನ ಅವ್ಯಕ್ತ ಕರ್ಮದ ಕಡೆ ಕೈ ಮಾಡಿದ್ದಾರೆ. ಆದುದರಿಂದ ಕರ್ಮದ ಬಗ್ಗೆ ಸ್ಪಷ್ಟ ನಿರೂಪಣೆಯು ಅನ್ಯದರ್ಶನದಲ್ಲಿ ದೊರೆಯಲಾರದು.

ಜೈನಸಿದ್ಧಾಂತವು ಜಗತ್ ಸೃಷ್ಟಿಯಾಗಲೀ, ಹುಟ್ಟು-ಸಾವುಗಳಾಗಲೀ ಸುಖ-ದುಃಖಗಳಾಗಲೀ ದೇವನೊಬ್ಬನಿಂದ ಆಗುತ್ತವೆ ಎಂಬುವುದನ್ನು ಒಪ್ಪುವುದಿಲ್ಲ. ಹಾಗೆಂದ ಮಾತ್ರಕ್ಕೆ ದೇವರೇ ಇಲ್ಲವೆಂದಲ್ಲ, ದೇವರೂ, ಶಾಸ್ತ್ರವೂ, ಗುರುಗಳೂ, ಪಾಪ-ಪುಣ್ಯ, ಇಹ-ಪರ, ಸ್ವರ್ಗ-ನರಕ, ಸಂಸಾರ-ಮೋಕ್ಷ ಇವುಗಳನ್ನು ಒಪ್ಪುತ್ತದೆ. ಆದುದರಿಂದ ಜೈನ ಧರ್ಮವು ಆಸ್ತಿಕ ಧರ್ಮವೇ ಆಗಿದೆ.

ಯಾರು ಯಾವ ಕರ್ಮ ಮಾಡುವರೋ ಅವರು ಅದಕ್ಕೆ ತಕ್ಕಂತಹ ಫಲವನ್ನು ಅನುಭವಿಸುತ್ತಾರೆ. ಆದ್ದರಿಂದಲೇ ಸತ್ಕರ್ಮದಿಂದ ಸದ್ಗತಿ ಮತ್ತು ದುಷ್ಕರ್ಮದಿಂದ ದುರ್ಗತಿ ಎಂದೂ, ಆ ಕರ್ಮವನ್ನು ನಾಶಮಾಡಿರುವುದರಿಂದ ಅಥವಾ ಕರ್ಮದಿಂದ ಆತನನ್ನು ಬಿಡುಗಡೆ ಮಾಡುವುದೇ ಮುಕ್ತಿ ಎಂದೂ ಜೈನಧರ್ಮ ಸಾರಿದೆ. ಸಾಧಾರಣವಾಗಿ ಊಟ ಮಾಡುವುದೂ, ಕೆಲಸ ಮಾಡುವುದೂ, ನಡೆಯುವುದೂ, ನಗುವುದೂ, ಯೋಚಿಸುವುದೂ ಮುಂತಾದ ಕ್ರಿಯೆಗಳಿಗೆ ಕರ್ಮ ಎನ್ನುವುದುಂಟು. ಆದರೆ ಜೈನದರ್ಶನದಲ್ಲಿ ಕರ್ಮದ ವ್ಯಾಖ್ಯಾನವು ಇದಕ್ಕೆ ಭಿನ್ನವಾಗಿದೆ.

ರಾಗ-ದ್ವೇಷಯುಕ್ತವಾದ ಜೀವನ ಮಾನಸಿಕ, ವಾಚನಿಕ, ಕಾಯಿಕ (ಮನ, ವಚನ, ಕಾಯ) ಕ್ರಿಯೆಗಳಿಂದಾಗಿ ಬಾಹ್ಯದ ಸೂಕ್ಷ್ಮ (ಕಣ್ಣಿಗೆ ಕಾಣದ) ಪುದ್ಗಲ (ಜಡ) ದ್ರವ್ಯಾಣುಗಳು ಜೀವನಲ್ಲಿಗೆ ಬಂದು ಬೆರೆತು ಅವು ಕಾಲಕ್ರಮವಾಗಿ ಫಕ್ವಕ್ಕೆ ಬಂದು ಒಳ್ಳೆಯ ಅಥವಾ ಕೆಟ್ಟ ಫಲಗಳನ್ನು ಕೊಡುತ್ತವೆ. ಜೀವಿಯ ಕ್ರಿಯಾಕಾರಣದಿಂದಾಗಿ ಅನಾದಿ ಕಾಲದಿಂದಲೂ ಪುದ್ಗಲ ವಸ್ತುವು ಒಂದಲ್ಲ ಒಂದು ರೀತಿಯಲ್ಲಿ ಆತ್ಮನಿಗೆ ಅಂಟಿಕೊಂಡೇ ಬಂದಿರುತ್ತದೆ. ಆದರಿಂದಲೇ ಈ ಜೀವನು ಸಂಸಾರದಲ್ಲಿ ಭ್ರಮಿಸುತ್ತಾ ತನ್ನ ನೈಜತೆಯನ್ನು ಕಳೆದುಕೊಂಡಿದ್ದಾನೆ.

ಪುದ್ಗಲಾಣುಗಳು ಪ್ರಪಂಚದ ಎಲ್ಲೆಡೆಯಲ್ಲೂ ನಿಬಿಡವಾಗಿ ತುಂಬಿ ತುಳುಕಾಡುತ್ತಿವೆ. ಅವುಗಳ ಸಂಪರ್ಕವು ಸಂಸಾರಿ ಜೀವಿಗಳೊಂದಿಗೆ ಅನಾದಿಕಾಲದಿಂದಲೂ ಹೊಂದಿಕೊಂಡು ಬಂದಿದೆ. ಅವು ಸಂಸಾರಿ ಜೀವಿಗಳೊಂದಿಗೆ ಸೇರುವ ಮತ್ತು ಬಿಡುವ ಸ್ವಭಾವವನ್ನು ಹೊಂದಿದೆ. ಸಂಸಾರಿ ಜೀವಿಗೆ ಮನಸ್ಸು, ವಚನ, ಕಾಯಗಳೆಂಬ ತ್ರಿಕರಣಗಳುಂಟು. ಅವುಗಳ ಕ್ರಿಯೆಯು ನಿರಂತರ ನಡೆಯುತ್ತಲೇ



ಇರುತ್ತದೆ. ಈ ಮನ ವಚನ ಕಾಯಗಳ ಕ್ರಿಯೆಗೆ ಯೋಗವೆನ್ನುತ್ತಾರೆ. ಜೀವನು ಈ ಕರಣಗಳ ಮೂಲಕ ತನ್ನ ಚಟುವಟಿಕೆಯಲ್ಲಿ ತೊಡಗಿರುತ್ತಾನೆ, ಈ ಯೋಗವು ಶುಭವಿದ್ದಾಗ ಶುಭಯೋಗವೆಂತಲೂ ಅಶುಭವಿದ್ದಾಗ ಅಶುಭಯೋಗವೆಂತಲೂ ಹೆಸರು. ಜೀವಿಗೆ ಇರುವ ಉಪಯೋಗವೆಂಬ ಗುಣವು ಈ ಮೂಲಕ ನಿರಂತರವಾಗಿ ಶುಭೋಪಯೋಗ ಅಥವಾ ಅಶುಭಪಯೋಗದಲ್ಲಿ ಕಾರ್ಯತತ್ಪರತೆ ಇದ್ದೇ ಇರುತ್ತದೆ. ಜೀವಿಯ ಈ ಮನ ವಚನ ಕಾಯಗಳ ಕ್ರಿಯೆಯನ್ನನುಸರಿಸಿ, ಹೊರಪ್ರಪಂಚದಲ್ಲಿನ ಪುದ್ಗಲಾಣುಗಳು ಜೀವಿಯೊಂದಿಗೆ ಆಕರ್ಷಿತವಾಗಿ ಹಾಲು ನೀರಿನಂತೆ ಬೆರೆತುಬಿಡುತ್ತವೆ. ಈ ಮನ ವಚನ ಕಾಯಗಳ ಕ್ರಿಯೆಯು ಒಂದು ರೀತಿಯ ಚುಂಬಕ ಶಕ್ತಿ ಇದ್ದ ಹಾಗೆ (Magnet Power) ಜೀವಿಯ ಮನ ವಚನ ಕಾಯಗಳ ಕ್ರಿಯೆಯು ತನಗೂ, ಇತರರಿಗೂ, ಇಹಪರಕ್ಕೂ, ಒಳ್ಳೆಯವಾಗಿದ್ದರೆ ಅಥವಾ ಶುಭ ಭಾವನೆ, ಶುಭವಾದ ಮಾತು, ಶುಭವಾದ ಕಾರ್ಯಗಳು ನಡೆದಾಗ ಜೀವನೊಂದಿಗೆ ಬೆರೆತ ಅಣುಗಳು ಪುಣ್ಯ ರೂಪ ಕರ್ಮಗಳಾಗಿ ಬಂಧವಾಗುತ್ತವೆ. ಹಾಗೆಯೇ ಮನ, ವಚನ, ಕಾಯಗಳ ಕ್ರಿಯೆಯು ಕೆಟ್ಟದಾಗಿದ್ದರೆ ದುರ್ಭಾವನೆ, ದುಷ್ಟವಚನ, ಕೆಟ್ಟನಡತೆ ಇದ್ದರೆ ಆ ಸಮಯದಲ್ಲಿಬಂದ ಪುದ್ಗಲಾಣುಗಳು ಪಾಪರೂಪ ಕರ್ಮಗಳಾಗಿ ಬಂಧವಾಗುತ್ತವೆ. ಯಾವಾಗ ಯಾವ ಪರಿಣಾಮವಿರುತ್ತದೋ ಅದಕ್ಕೆ ತಕ್ಕಂತಹ ಕರ್ಮಾಸ್ರವವಾಗಿ ಆತ್ಮನೊಂದಿಗೆ ಬೆರೆತುಬಿಡುತ್ತವೆ. ಅವುಗಳು ಕಾಲಕ್ರಮದಲ್ಲಿ ಆತ್ಮಪ್ರದೇಶದಲ್ಲಿ ಪರಿಪಾಕ ಹೊಂದಿ ಸುಖ ದುಃಖವನ್ನು ಜೀವನಿಗೆ ಉಂಟುಮಾಡುತ್ತವೆ. ಇದರಿಂದಲೇ ಜೀವನು ಜನನ ಮರಣಗಳನ್ನು ಹೊಂದಿ ಸಂಸಾರದಲ್ಲಿ ತೊಳಲಬೇಕಾಗಿದೆ. ಹೀಗೆ ಸುತ್ತಿಸುವ ಶಕ್ತಿಯು ಆ ಪುದ್ಗಲದ ಸಂಯೋಜನೆಯಿಂದ ಜೀವನಿಗೆ ಆಗುತ್ತದೆ. ಹಾಗೆಯೇ ಒಂದು ಕಾಲಕ್ಕೆ ಇವುಗಳ ಪರಿಭ್ರಮಣೆಯಿಂದ ಎಚ್ಚೆತ್ತ ಜೀವಿಯು ಆ ಕರ್ಮಗಳು ಆತ್ಮಪ್ರದೇಶಕ್ಕೆ ಬರುವುದನ್ನು ತಡೆದು ಮೊದಲೇ ಬಂದಂಟಿದ್ದ ಕರ್ಮಗಳನ್ನು ಕಳೆದುಕೊಂಡು ಶುದ್ಧಯೋಗಿ ಎನಿಸಿ ಶುದ್ಧಾತ್ಮ ಸಾಕ್ಷಾತ್ಕಾರವನ್ನು ಪಡೆದು-ಮೋಕ್ಷವನ್ನು ಹೊಂದಬಹುದು. ಹೀಗೆ ಜೀವ, ಪುದ್ಗಲಗಳ ಸಂಯೋಜನೆ, ವಿಸರ್ಜನೆಗಳ ನಿಯಮವನ್ನು ಜೈನ ದರ್ಶನವು ವಿಶದವಾಗಿ ವಿವರಿಸಿದೆ. ಹೀಗೆ ಕರ್ಮ ಕಟ್ಟಿಕೊಳ್ಳುವುದೂ, ಕರ್ಮಫಲವನ್ನು ಅನುಭವಿಸುವುದೂ ತಾನೇ ಆದ ಕಾರಣ ಇದು ಇನ್ನೊಬ್ಬ ಈಶ್ವರ ಶಕ್ತಿ, ಬ್ರಹ್ಮ ಮುಂತಾದವರಿಂದ ನಡೆಯುವ ಕೈವಾಡವೇನಲ್ಲ. ತನ್ನಲ್ಲಿನ ಶುದ್ಧ ಚೈತನ್ಯ ಜ್ಞಾನಮಯ ಶಕ್ತಿಗೇನೇ ಶಿವ, ಬ್ರಹ್ಮನೆಂಬ ಹೆಸರಿರುವುದರಿಂದ ಅದನ್ನು ಪ್ರತ್ಯೇಕವೆಂದು ಭಾವಿಸಿ ಬೇರೆಯವರು

ಹೀಗೆ ಬೇರೊಬ್ಬ ನಿಂದಾಗುವುದೆಂದು ಊಹಿಸಿರಬೇಕು.

ಹೊರಜಗತ್ತಿನಲ್ಲಿರುವ ಪುದ್ಗಲಾಣುಗಳಿಗೆ ಕಾರ್ಮಣ ವರ್ಗಣಗಳೆಂದು ಹೆಸರು. ಅವು ಆತ್ಮಪ್ರದೇಶಕ್ಕೆ ಆಕರ್ಷಿತವಾಗಿ ಬಂದು ಅಂಟಿದ ನಂತರ ಕರ್ಮಬಂಧವೆನ್ನುತ್ತಾರೆ. ಈ ಕರ್ಮಸಿದ್ಧಾಂತವನ್ನು ಪ್ರತಿಪಾದಿಸುವ ಜೈನ ಸಿದ್ಧಾಂತಾನುಸಾರ ಅನಾದಿಕಾಲದಿಂದಲೂ ಪ್ರತ್ಯೇಕ ಆತ್ಮನೊಂದಿಗೆ ಸೂಕ್ಷ್ಮ ಪುದ್ಗಲ ಪರಮಾಣುವಿನಿಂದ ರೂಪಿತವಾದ ಒಂದು ಸೂಕ್ಷ್ಮ ಶರೀರವು ಹೊಂದಿಕೊಂಡೇ ಬಂದಿದೆ. ಹೇಗೆಂದರೆ, ಬೀಜದ ಅಥವಾ ಚಿನ್ನದೊಂದಿಗೆ ಬೆರೆತ ಕಿಟ್ಟ ಕಾಲಿಕೆಯಂತೆ ಮೇಲಿನ ಸಿಪ್ಪೆಯಂತೆ ಕರ್ಮವು ಆತ್ಮಪ್ರದೇಶವನ್ನು ಆವರಿಸಿ, ಅನಾದಿಕಾಲದಿಂದಲೂ ಸಂಬಂಧಿಸಿಕೊಂಡೇ ಬಂದಿದೆ. ಇದು ಎಂದು ಸೇರಿತು ಎಂದು ಹೇಳಲು ಸಾಧ್ಯವಿಲ್ಲ. ಹೇಗೆಂದರೆ, ಗಣಿಯಲ್ಲಿ ಸಿಗುವ ಚಿನ್ನದ ಅದುರಿನಂತೆ ಚಿನ್ನದೊಂದಿಗೆ ಮಣ್ಣು ಮಣ್ಣಿನೊಂದಿಗೆ ಚಿನ್ನ, ಚಿನ್ನದೊಂದಿಗೆ ಕಿಟ್ಟಕಾಲಿಕೆ ಯಾವಾಗ ಬೆರೆತುವು ಎಂದು ಹೇಗೆ ಹೇಳುವುದು? ಮಣ್ಣಿನ ಗುಣ ಚಿನ್ನದ ಗುಣ ಬೇರೆಯಾಗಿಯೇ ಇವೆ. ಹಾಗೆಯೇ ಆತ್ಮ ಮತ್ತು ಕರ್ಮಗಳ ಗುಣವು ಪ್ರತ್ಯೇಕವಾಗಿಯೇ ಇದ್ದು, ಎಂದು ಬೆರೆತುವು ಎಂಬುದನ್ನು ತಿಳಿಸಲು ಸಾಧ್ಯವಿಲ್ಲ. ಹಾಗೆ ಬೆರತ ಚಿನ್ನವನ್ನು ಶೋಧಿಸಿ ಪ್ರತ್ಯೇಕಿಸಿದ ನಂತರ ಮತ್ತೆ ಚಿನ್ನವು ಮಣ್ಣಿನೊಂದಿಗೆ ಬೆರೆಯುವುದಿಲ್ಲ. ಹಾಗೆಯೇ ಕರ್ಮದಿಂಧ ಪೂರ್ಣಬಿಡುಗಡೆ ಹೊಂದಿದ ನಂತರ ಜೀವಿಯು ಮುಕ್ತನಾಗುತ್ತಾನೆ ಹೊರತು ಮತ್ತೆ ಕರ್ಮಬಂಧ ಮಾಡಿಕೊಳ್ಳುವುದಿಲ್ಲ. ಈ ಬಿಡುಗಡೆ ಹೊಂದುವವರೆಗೆ ಈ ಜೀವನು ಸಂಸಾರಿಯಾಗಿಯೇ ಇರಬೇಕಾಗುತ್ತದೆ. ಹೀಗೆ ಅನಾದಿಯಿಂದಲೂ ಅನುಗಾಮಿಯಾಗಿ ಬೆರೆತುಬಂದ ಈ ಸೂಕ್ಷ್ಮ ಆವರಣಕ್ಕೆ ಕಾರ್ಮಣ ಶರೀರ (Karmic body) ಎಂದು ಹೆಸರುಂಟು. ಆ ಸೂಕ್ಷ್ಮಾಣುಗಳ ಸಂಯೋಜನೆಯಿಂದ ಕಾಲಾಂತರದಲ್ಲಿ ಫಲಕೊಡುವ ಶಕ್ತಿಯುಂಟು. ಹೇಗೆಂದರೆ, ವಿದ್ಯುತ್ ಕೋಶ (Battery Cell) ಗಳಲ್ಲಿ ಶಕ್ತಿ ಅಡಕವಾಗಿದ್ದು ಅದಕ್ಕೆ ಸಂಬಂಧಿಸಿದ ವಸ್ತು ಸಂಯೋಜನೆಯಾದಾಗ ತನ್ನ ಶಕ್ತಿಯನ್ನು ಹೊರಸೂಸುವಂತೆ ದೇಶ, ಕಾಲ, ಸ್ಥಿತಿ ವರ್ತಮಾನಗಳಿಗೆ ಅನುಸಾರವಾಗಿ ಪೂರ್ವಕೃತ ಕರ್ಮವು ಫಲಕ್ಕೆ ಬಂದು ಜೀವಿಯು ಸುಖ-ದುಃಖವನ್ನು ಭೋಗಿಸುವಂತೆ ಮಾಡುತ್ತದೆ.

ಶಕ್ತಿರೂಪದಿಂದ ಆತ್ಮನು ಅನಂತಜ್ಞಾನ, ಅನಂತದರ್ಶನ, ಅನಂತಸುಖ, ಅನಂತವೀರ್ಯ ಉಳ್ಳವನಾಗಿದ್ದಾನೆ.ಕಾರ್ಮಣವರ್ಗಣಗಳಿಂದಾದ ಕಾರ್ಮಣ ಶರೀರವು ಆತ್ಮನನ್ನು ಆವರಿಸಿ ಆತ್ಮನ ನೈಜಗುಣ, ಶಕ್ತಿ, ಚೇತನವನ್ನು ವಿಕಾರ ಮಾಡಿ ಪ್ರಕಾಶಕ್ಕೆ ಬಾರದಂತೆ ಮಾಡಿದೆ. ದೀಪವನ್ನು ಕಬ್ಬಿಣದ ಪಾತ್ರೆಯಿಂದ ಮುಚ್ಚಿದರೆ ಅದರ



ಪ್ರಕಾಶವು ಹೇಗೆ ಹೊರಬರಲಾರದೋ ಅದರಂತೆಯೇ ಕಾರ್ಮಣ ಶರೀರದ ಆವರಣದಿಂದ ಆತ್ಮನ ನೈಜ ಗುಣಗಳು ಪ್ರಕಟವಾಗುವುದಿಲ್ಲ.

ದೇವ, ಮಾನವ, ತಿರ್ಯಂಚ, ನಾರಕಿಗತಿಗಳಲ್ಲಿ ಅಲ್ಪಜ್ಞಾನ, ದರ್ಶನ, ಸುಖ ಬಲಗಳನ್ನು ಹೊಂದಿರುತ್ತವೆಯೇ ಹೊರತು ನೈಜತೆಯು ಕಂಡುಬರಲಾರದು. ನಿಜವಾಗಿ ಇರಬೇಕಾದ ಆತ್ಮೀಕ ಸುಖ ಶಾಂತಿ ಸ್ವರೂಪವು ವಿಕೃತಿ ಹೊಂದಿ ರಾಗ-ದ್ವೇಷಾದಿ ಭಾವನೆಗಳಿಂದ ವರ್ತಿಸುತ್ತ ಕ್ರೂರ ಕಾರ್ಯಗಳಲ್ಲಿ ಪ್ರವರ್ತಿಸುತ್ತ ದುಃಖಭಾಜನನಾಗಿರುವುದು ಕಂಡುಬರುತ್ತದೆ. ಸ್ವಚ್ಛ ನೀರಿಗೆ ಯಾವ ಬಣ್ಣ ಬೆರಕೆಯಾಗುತ್ತದೋ ಅದರಂತೆ ನೀರು ಕಾಣುವಂತೆ ಕರ್ಮದ ಆವರಣದಿಂದ ಸ್ವಭಾವವು ವಿಕೃತವಾಗಿಯೇ ಇರುತ್ತದೆ. ಜೀವಿಯ ಇಂದಿನ ಕಾರ್ಯ, ಭಾವನೆ, ಸುಖ, ದುಃಖಗಳಿಗೆ ಪ್ರಾಕೃತ ಕರ್ಮವೇ ಕಾರಣವಾದರೂ ಆ ಕರ್ಮವನ್ನು ಸುಡುವ-ಕಳೆದುಕೊಳ್ಳುವ ಸಂದರ್ಭವೂ ಆತ್ಮನಿಗೆ ಉಂಟು. ಆದರೆ ಅದನ್ನು ಒದಗಿಸಿಕೊಳ್ಳುವ ಜೀವಿಗಳು ವಿರಳ. ಮರಣಹೊಂದಿದ ನಂತರ ಕಾರ್ಮಣವರ್ಗಣವೆಂಬ ಪರಮಾಣುಗಳಿಂದ ಮಾಡಲ್ಪಟ್ಟ ಸೂಕ್ಷ್ಮ ಶರೀರವು ಆತ್ಮನನ್ನು ಒಂದು ಗತಿಯಿಂದ ಮತ್ತೊಂದು ಗತಿಗೆ ತೆಗೆದುಕೊಂಡು ಹೋಗಿ ಹುಟ್ಟಿಸುತ್ತದೆ. ಈ ಕರ್ಮದಿಂದಲೇ ಜೀವನು ನವೀನ ಶರೀರವನ್ನು ಧಾರಣೆ ಮಾಡುತ್ತಾನೆ. ನಂತರ ಹೊತ್ತುತಂದ ಸುಕೃತ, ದುಷ್ಕೃತ ಕರ್ಮಫಲವನ್ನು ಅನುಭವಿಸುತ್ತಾ ಹೊಸ ಕರ್ಮವನ್ನು ಕಟ್ಟಿಕೊಳ್ಳುತ್ತದೆ. ಈ ಪರಿಪಾಟಿಯು ಈ ಸಂಸಾರೀ ಜೀವನಿಗೆ ಅನಾದಿಯಿಂದಲೂ ಬಂದಿದೆ. ಈ ಕರ್ಮ ಶಕ್ತಿಯೇ ಜೀವನು ಹೊತ್ತ ಶರೀರದ ಆಯುಷ್ಯವನ್ನು ನಿರ್ಧರಿಸುತ್ತದೆ. ಸಬಲ, ದುರ್ಬಲ, ರೋಗಿ, ನಿರೋಗಿ, ರೂಪಿ, ಕುರೂಪಿ, ಸುಖಿ, ದುಃಖಿಯನ್ನಾಗಿ ಮಾಡುತ್ತದೆ. ಹೀಗೆ ಜೀವಿಯು ಕರ್ಮಚಕ್ರಕ್ಕೆಸಿಕ್ಕಿ ಪುನರಪಿ ಜನನಂ ಪುನರಪಿ ಮರಣಂ ಹೊಂದಿ ತಿರ್ರನೆ ತಿರುಗುತ್ತಲಿದೆ.

ಕಡಲೇಬೀಜವನ್ನು ಬಿತ್ತಿದರೆ ಅದು ಕಡಲೆಕಾಯಿಯ ರೂಪದಲ್ಲಿ ಹೊರ ಬರುವಂತೆ ಕಡಲೇಬೀಜದ ಮೇಲಿನ ಕೆಂಪು ಸಿಪ್ಪೆಯಂತೆಯೇ ಆತ್ಮನ ಮೇಲೆ ಆವರಿಸಿರುವ ಕರ್ಮ. ಆ ಕರ್ಮ ಸಹಿತ ಜೀವವು ಒಂದು ಗತಿಯಿಂದ ಇನ್ನೊಂದು ಗತಿಗೆ ಸೇರಿ ಶರೀರ ಸಹಿತ ಗರ್ಭದಿಂದ ಹೊರ ಬರುವುದನ್ನು ಕಾಣುವುದಿಲ್ಲವೇ! ಹಾಗೆ ಜೀವನಿಗೆ ಜಡದ ಸಂಪರ್ಕವನ್ನು ಮಾಡುವುದೂ ಕರ್ಮವೇ ಆಗಿದೆ.

ಇಂತಹ ಕರ್ಮ ಶಕ್ತಿಯು ಪುದ್ಗಲ (ಜಡ) ಪರಮಾಣುವಿನಲ್ಲಿ ಹೇಗೆ ಉತ್ಪನ್ನವಾಗುತ್ತದೆ ಎಂಬ ಅನುಮಾನ ಬರಬಹುದು. ಅದಕ್ಕೆ ಪರಿಹಾರ ಹೀಗಿದೆ ಎಂಭತ್ತುನಾಲ್ಕು ಲಕ್ಷ ಯೋನಿಗಳಲ್ಲಿ ಹುಟ್ಟಿ ಸಾಯುವ ದೇವ, ಮಾನವ, ನರಕ, ತಿರ್ಯಂಚ ಗತಿಗಳಲ್ಲಿನ ಜೀವಿಗಳು ಮನ ವಚನ ಕಾಯಗಳ ಮೂಲಕವೇ ಯಾವುದಾದರೊಂದು ಕ್ರಿಯೆಯನ್ನು ಮಾಡಲು ಸಾಧ್ಯ. ಈ ಮನ ವಚನ ಕಾಯಗಳ ಕ್ರಿಯೆಯಿಂದ ಆತ್ಮ ಪ್ರದೇಶವು ಪರಿಸ್ಪಂದನ ಅಥವಾ ಕಂಪನವಾಗುತ್ತದೆ. ಆ ಸಂದರ್ಭದಲ್ಲಿ ಸುತ್ತಲೂ ನಿಬಿಡವಾಗಿ ತುಂಬಿರುವ ಕಾರ್ಮಣವರ್ಗಗಳೆಂಬ ಪುದ್ಗಲಾಣುಗಳು ಆತ್ಮ ಪ್ರದೇಶವನ್ನು ಸೇರಿಬಿಡುತ್ತವೆ. ಆ ಅಣುಸಮುದಾಯವೇ ಆಯಾಸಮಯದಲ್ಲಿನ ಜೀವಿಯಪರಿಣಾಮದಂತೆ ರೂಪಿತವಾಗಿ ಬಂಧವಾಗುತ್ತವೆ. ಅಂದರೆ ಶುಭಯೋಗವಿದ್ದರೆ ಪುಣ್ಯಕರ್ಮವಾಗಿಯೂ, ಅಶುಭ ಯೋಗವಿದ್ದರೆ ಪಾಪಕರ್ಮವಾಗಿಯೂ ಪರಿಣಮಿಸುತ್ತವೆ. ಭಾವನೆ, ಮಾತು, ಕೆಲಸಗಳಿಗೆ ಅನುಸಾರವಾಗಿ ಆಕರ್ಷಿತವಾದ ಕಾರ್ಮಣ ವರ್ಗಣಗಳು ಒಂದರಮೇಲೊಂದರಂತೆ ಪದರು ಪದರಾಗಿ ಆತ್ಮನನ್ನು ಸುತ್ತಿಕೊಂಡು ಕರ್ಮದ ಸೂಕ್ಷ್ಮ ಶರೀರವೇ ಆಗಿಬಿಡುತ್ತದೆ. ಅದಕ್ಕೆ ಜೀವಿಗೆ ಒಳ್ಳೆಯ ಮತ್ತು ಕೆಟ್ಟ ಫಲವನ್ನು ಕೊಡುವಂತಹ ಒಂದು ಪ್ರಕಾರದಶಕ್ತಿ ಉಂಟಾಗುತ್ತದೆ. ಅಂದರೆಕರ್ಮದ ಆವರಣದಿಂದ ಜೀವವು ವಿಕೃತಿ ಹೊಂದಿ ಸುಖ ದುಃಖವನ್ನು ಅನುಭವಿಸುತ್ತದೆ. ಕುಡಿದು ಅಮಲೇರಿದವನು ದಾರಿ ತಪ್ಪಿ ಹಳ್ಳಕ್ಕೆ ಬಿದ್ದಂತೆ ದುಃಖ ಮತ್ತು ಊಟ ಮಾಡಿದಾಗ ಹೊಟ್ಟೆ ತುಂಬಿ ತೃಪ್ತನಾದಂತೆ ಸುಖ ಆಗುವಂತೆ ಆಯಾ ಸಂದರ್ಭದಲ್ಲಿ ದೇಶ, ಕಾಲ ವರ್ತಮಾನಕ್ಕನುಸಾರವಾಗಿ ಪೂರ್ವಕೃತ ಕರ್ಮದ ಶಕ್ತಿಯು ಉದಯಕ್ಕೆ ಬಂದು ತತ್ ಸಂಬಂಧೀಜೀವಿಯನ್ನು ಸುಖಿ, ದುಃಖಿಯನ್ನಾಗಿ ಮಾಡಿಬಿಡುತ್ತದೆ. ಆದರೂ ಕರ್ಮದಆಟವೆಂದರೆ ಸುಖವೂ ದುಃಖವೂ ಸ್ಥಿರ-ಶಾಶ್ವತವಲ್ಲ. ಬಂಧಿತವಾದ ಕರ್ಮ ಇಂತಿಷ್ಟು ಅವಧಿಯವರೆಗೆ ತನ್ನ ಆಟವಾಡಿ ನಶಿಸಿ ಹೋಗುತ್ತದೆ. ಒಂದಾದಮೇಲೊಂದರಂತೆ ಪುಸ್ತಕದ ಪುಟಗಳನ್ನು ತಿರುವಿ ಹಾಕಿದಂತೆ, ಚಕ್ರದ ಅರೆಕಾಲುಗಳು ಒಂದರ ನಂತರ ಮತ್ತೊಂದು ಉರುಳುವಂತೆ ಬಂದು ಹೋಗುತ್ತವೆ.

ಕೆಲವು ಸಂದರ್ಭದಲ್ಲಿ ಬಂಧಿತವಾದ ಕರ್ಮವು ತತ್ಕ್ಷಣದಲ್ಲೇ ಫಲಕೊಟ್ಟು ನಾಶವಾಗುತ್ತದೆ. ಮತ್ತೆ ಕೆಲವು ಸಂದರ್ಭದಲ್ಲಿ ಕರ್ಮವು ಕೆಲವಾರು ಭವಗಳಲ್ಲಿ ಉದಯಕ್ಕೆ ಬರುತ್ತದೆ. ಕರ್ಮವು ಜೀವಿಗೆ ಫಲ ಕೊಟ್ಟು ಅನುಭವಿಸಿ ನಾಶವಾದರೂ ಆ ಕ್ಷಣದಲ್ಲಿ ಅಥವಾ ಆ ಭವದಲ್ಲಿ ಮತ್ತೆ ಕರ್ಮವು ಬಂಧವಾಗುತ್ತಲೇ ಇರುತ್ತದೆ. ಜೀವಿಗೆ ಗುರೂಪದೇಶ, ಸ್ವಾಧ್ಯಾಯಗಳ ಬಲದಿಂದ ಜ್ಞಾನ, ಧ್ಯಾನ,



ತಪೋನಿರತನಾದರೆ ಕೆಲವು ಕರ್ಮಗಳು ಉದಯಕ್ಕೆ ಬರದೆ ತಾವಾಗಿಯೇ ನಶಿಸಿ ಹೋಗುವುದೂ ಉಂಟು. ಈ ಗುಟ್ಟನರಿತ ಜೀವಿಯು ಹಳೆಯ ಕರ್ಮದ ನಾಶಕ್ಕೆ ಪ್ರಯತ್ನಿಸಿ ಹೊಸ ಕರ್ಮ ಕಟ್ಟಿಕೊಳ್ಳುವುದಿಲ್ಲ. ಹಳೆಯ ಕರ್ಮದಿಂದ ಬಂದ ಸುಖವನ್ನಾಗಲೀ ದುಃಖವನ್ನಾಗಲೀ ಸಮತಾಭಾವದಿಂದ ಅನುಭವಿಸಿ, ಇವೆರಡನ್ನೂ ಕಳೆದುಕೊಂಡು ತನ್ನ ನೈಜ ಆತ್ಮಚೈತನ್ಯದ ಅವಲೋಕನೆಯಲ್ಲಿ ತೊಡಗುತ್ತಾನೆ.

ಹೀಗೆ ಜೀವಿಯು ನಿರಂತರ ಭಾವನೆ, ಮಾತು, ಕಾರ್ಯಗಳೇ ಕರ್ಮಬಂಧಕ್ಕೆ ಕಾರಣ. ಹಾಗೆಯೇ ಜ್ಞಾನ, ಧ್ಯಾನ, ತಪಸ್ಸುಗಳೇ ಕರ್ಮನಿರ್ಜರೆಗೆ ಅಂದರೆ ಕರ್ಮನಾಶಕ್ಕೆ ಕಾರಣವೆಂದು ಜೈನಧರ್ಮವು ನಿರೂಪಿಸಿದೆ. ಜೀವಿಯ ಸುಖ-ದುಃಖದ ಅನುಭವವು ಕರ್ಮದಿಂದಲೇ ಎಂಬುದು ನಿರ್ವಿವಾದವಾದುದು. ಚೈತನ್ಯಕ್ಕೆ ಪುದ್ಗಲಾಣುಗಳ ಸಂಯೋಗದಿಂಧ ಈ ಆಟವು ಸಂಸಾರ ರಂಗದಲ್ಲಿ ನಡೆಯುತ್ತಿದೆಯೇ ವಿನಃ ಇದಕ್ಕೊಬ್ಬ ಸೂತ್ರಧಾರಿ ಪರಮಾತ್ಮ, ಸೃಷ್ಟಿಕರ್ತ, ಲೀಲಾವಿನೋದಿ ಯಾರು ಪ್ರತ್ಯೇಕವಾಗಿ ಇಲ್ಲ. ಇದೆಲ್ಲ ತನಗೆ ತಾನೇ ಹಾಕಿಕೊಂಡ ತೊಡಕು, ಸಂಕೋಲೆ. ಇದರಿಂದ ಪಾರಾಗದ ವಿನಃ, ಇದನ್ನು ಬಿಡಿಸಿಕೊಳ್ಳದ ವಿನಃ ಜೀವಿಗೆ ಸುಖವೆಂಬುದಿಲ್ಲ.

ಆ ಬಿಡುಗಡೆಯ ಮಾರ್ಗವೆಂದರೆ ನಿಜವಾದ ನಂಬಿಕೆ. ನಿಜವಾದ ಜ್ಞಾನ ನಿಜವಾದ ಆಚರಣೆಯನ್ನು ನಿರೂಪಿಸುವ ಜೈನಧರ್ಮದ ಆಶ್ರಯ ಬೇಕೇ ಬೇಕು. ಇಲ್ಲಿ ನಿಜವೆಂದರೆ ಆತ್ಮಚೈತನ್ಯದ ಪರಿಚಯ. ಅದರ ಪರಿಚಯ ಮಾಡಿಕೊಳ್ಳುತ್ತಾ ಹೋದರೆ ಕರ್ಮ ಕಟ್ಟುವುದು ಕಮ್ಮಿಯಾಗುತ್ತಾ ಹೋಗುತ್ತದೆ.

**ಕರ್ಮದ ಅಂಗಗಳು:–**

ಕರ್ಮವು ಮೂರು ವಿಧವಾಗಿ ವರ್ಗವಾಗಿದೆ:-

1)ದ್ರವ್ಯಕರ್ಮ, 2)ಭಾವಕರ್ಮ, 3)ನೋಕರ್ಮ.

ಇವು ಸಂಸಾರ ಇಜೀವಿಗಳಿಗೆ ಒಂದಕ್ಕೊಂದು ಪೂರಕವಾಗಿವೆ. ಅನಂತ ಪುದ್ಗಲ ಪರಮಾಣು ರೂಪವಾಗಿ ಬಂದು ಆತ್ಮಪ್ರದೇಶದಲ್ಲಿ ಅಂಟುವುದೇ ದ್ರವ್ಯಕರ್ಮ. ಮೋಹಾದಿಗಳ ನಿಮಿತ್ತದಿಂದ ಕ್ರೋಧಾದಿ ರೂಪ ಪರಿಣಾಮವೇ ಭಾವಕರ್ಮ: ಜೀವನು ಹೊತ್ತಿರುವ ಶರೀರವೇ ನೋಕರ್ಮ. ಈ ಶರೀರವೂ ಕೂಡ ಪುದ್ಗಲ ಪರಮಾಣುಗಳ ಪಿಂಡವೇ ಆಗಿದೆ. ದ್ರವ್ಯಕರ್ಮದಲ್ಲಿ ಪ್ರಕೃತಿ, ಸ್ಥಿತಿ, ಅನುಭಾಗ ಮತ್ತು ಪ್ರದೇಶವೆಂದು ನಾಲ್ಕು ಭಾಗ ಉಂಟು.

'ತತ್ತ್ವ ಜ್ಞಾನಪ್ರಚ್ಛಾದನಾದಿಸ್ವಭಾವಃ ಪ್ರಕೃತಿಃ' ಎಂದರೆ ಆತ್ಮನ ಜ್ಞಾನಾದಿಗುಣಗಳನ್ನು ಅದುಮಿ ಮರೆ ಮಾಡಿರುವ ಕರ್ಮ ಆವರಣವೇ ಪ್ರಕೃತಿ ಎಂದು, ಈ ಪ್ರಕೃತಿ ಕರ್ಮದಲ್ಲಿ ಮೂಲಪ್ರಕೃತಿ, ಉತ್ತರ ಪ್ರಕೃತಿ ಮತ್ತು ಉತ್ತರೋತ್ತರ ಪ್ರಕೃತಿ ಎಂದು ಮೂರು ಭಾಗಉಂಟು. ಅವುಗಳಲ್ಲಿ ಮೂಲ ಪ್ರಕೃತಿಯ ಕರ್ಮಗಳು ಎಂಟು ಭೇದ ಉಂಟು.

1)ಜ್ಞಾನಾವರಣೀಯ 2) ದರ್ಶನಾವರಣೀಯ 3)ವೇದನೀಯ 4)ಮೋಹನೀಯ 5)ಆಯು 6) ನಾಮ 7) ಗೋತ್ರ 8) ಅಂತರಾಯ.

ಇವುಗಳಲ್ಲಿ ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ ಮತ್ತು ಅಂತರಾಯಗಳೆಂಬ ನಾಲ್ಕು ಘಾತಿಕರ್ಮಗಳು. ವೇದನೀಯ, ಆಯುಷ್ಯ, ನಾಮ, ಗೋತ್ರ ಎಂಬ ನಾಲ್ಕು ಅಘಾತಿಕರ್ಮಗಳು. ಜ್ಞಾನವನ್ನು ಮರೆಮಾಡಿರುವ ಕರ್ಮಜ್ಞಾನಾವರಣೀಯ ಕರ್ಮ, ದೀಪದ ಪ್ರಕಾಶವನ್ನು ಮುಚ್ಚಿದ ಕಬ್ಬಿಣದ ಕವಚದ ಹಾಗೆ. ದರ್ಶನ ಗುಣವನ್ನು ಮರೆಮಾಡಿರುವುದು ದರ್ಶನಾವರಣೀಯ ಕರ್ಮ, ಸೂರ್ಯನಿಗೆ ಮೋಡವು ಮರೆಯಾದಂತೆ. ಇಂದ್ರಿಯ ಸುಖ-ದುಃಖವನ್ನುಂಟುಮಾಡುವುದು ವೇದನೀಯ ಕರ್ಮ. ಅದು ಕತ್ತಿಯ ಮೊನೆಯಮೇಲಿನ ಜೇನನ್ನು ನೆಕ್ಕಿದರೆ ಆಗುವ ಅಲ್ಪ ಸುಖದಂತೆ ನಿರಂತರ ದುಃಖಕರವಾಗಿದೆ. ಆತ್ಮನನ್ನು ಭ್ರಮಿಸುವಂತೆ ಮಾಡಿ ಅಮಲೇರಿಸುವುದೇ ಮೋಹನೀಯ ಕರ್ಮ. ಕೈಗೆ ತೊಡಿಸಿರುವ ಸಂಕೋಲೆಯ ಹಾಗೆ ಜೀವಿಯನ್ನು ಗತಿಗಳಲ್ಲಿ ಹಿಡಿದಿರಿವುದು ಆಯುಕರ್ಮ ನಾನಾ ಗತಿಗಳಲ್ಲಿ ನಾನಾ ಹೆಸರಿನಿಂದ ಸುತ್ತುವಂತೆ ಮಾಡುವುದು ನಾಮಕರ್ಮ. ನಾನಾ ಗತಿಗಳಲ್ಲಿ, ಉಚ್ಚ ನೀಚ ಕುಲಗಳಲ್ಲಿ ಹುಟ್ಟಿಸುವುದು ಗೋತ್ರಕರ್ಮ. ನಾನಾ ಕಾರ್ಯಗಳಿಗೆ ಅನೇಕ ವಿಘ್ನಗಳನ್ನು ಉಂಟುಮಾಡುವುದು ಅಂತರಾಯ ಕರ್ಮ. ಹೀಗೆ ಜೀವನು ಮನ, ವಚನ, ಕಾಯಗಳ ಕ್ರಿಯಾ ಯೋಗದಿಂದ ಬಂಧಿಸಿಕೊಂಡ ಕರ್ಮಾಂಗಗಳು ಮೂಲವಾಗಿ ಎಂಟಾದರೂ ಅವುಗಳ ಒಳಭೇದಗಳು 148 ಇವೆ. ಅವುಗಳೆಲ್ಲ ಆತ್ಮನ ಜ್ಞಾನ, ಶಕ್ತಿ, ಸುಖ, ದರ್ಶನಾದಿ ಗುಣಗಳನ್ನು ಮುಚ್ಚಿವೆ. ಇವುಗಳಿಂದ ಆತ್ಮನು ಅಜ್ಞಾನಿ, ರಾಗದ್ವೇಷಿ, ಮಿಥ್ಯಾದೃಷ್ಟಿ ಮುಂತಾದ ಪರಿಣಾಮಿಯಾಗಿದ್ದಾನೆ. ಇವುಗಳನ್ನು ವಿರಾಗಿಯಾಗಿ ಜಯಿಸಿದರೆ ಮುಕ್ತಿ ಲಭಿಸುತ್ತದೆ. ಜೀವಿಗೆ ಕರ್ಮಬಂಧನದಿಂದ ಸಂಸಾರ. ಕರ್ಮದ ಬಿಡುಗಡೆಯಿಂದ ಮುಕ್ತಿ ದೊರೆಯುತ್ತದೆ.



# 15. ಷಡ್ದ್ರವ್ಯಸಿದ್ಧಾಂತ

ಅನಂತಾನಂತ ದ್ರವ್ಯಗಳ ಸಮುದಾಯವೇ ಜಗತ್ತು. ದ್ರವ್ಯವೆಂಬುದಕ್ಕೆ ವಸ್ತು, ಪದಾರ್ಥ ಎಂಬ ಶಬ್ದಗಳ ವಾಚ್ಯಾರ್ಥವುಂಟು. ಪ್ರತ್ಯೇಕ ವಸ್ತುವೂ ಎರಡು ಅಂಶಗಳಿಂದ ಕೂಡಿರುತ್ತದೆ. ಅವೆಂದರೆ ಸ್ಥಾಯಿ ಮತ್ತು ಅಸ್ಥಾಯಿ. ಸ್ಥಾಯಿ ಎಂದರೆ ಸದಾ ಸ್ಥಿರವಿದ್ದು ನಾಶವಾಗದೇ ಇರುವುದು. ಅಸ್ಥಾಯಿ ಎಂದರೆ ಕಾಲಕಾಲಕ್ಕೆ ಬದಲಾಗುತ್ತಾ (ರೂಪಪರಿವರ್ತನ) ಇರುವುದು. ಇವುಗಳಲ್ಲಿ ಸ್ಥಾಯಿ ಅಂಶವನ್ನು **ಗುಣವೆಂದೂ**, ಅಸ್ಥಾಯಿ ಅಂಶವನ್ನು **ಪರ್ಯಾಯ**ವೆಂದೂ ಕರೆಯಬಹುದು. ಯಾವುದರಲ್ಲಿ ಈ ಗುಣ-ಪರ್ಯಾಯ ಲಕ್ಷಣವಿದೆಯೋ ಅದೇ ದ್ರವ್ಯ. ಇದನ್ನೇ ಪೂರ್ವಾಚಾರ್ಯರು "ಗುಣಪರ್ಯಯವತ್ ದ್ರವ್ಯಂ" ಎಂದಿದ್ದಾರೆ. ಪ್ರತಿ ವಸ್ತುವೂ ಸ್ಥಿರವಿರುವುದು. ಹಾಗೂ ಅದರ ಹಳೆಯ ಸ್ಥಿತಿ ಬದಲಾಗಿ ಹೊಸ ಸ್ಥಿತಿಯು ಉತ್ಪನ್ನವಾಗುತ್ತಾ ಇರುತ್ತದೆ. ಹೇಗೆಂದರೆ-ಚಿನ್ನದ ಒಂದು ಉಂಗುರವು ಹಿಂದೆ ಓಲೆಯ ರೂಪದಲ್ಲಿತ್ತು. ಈಗ ಉಂಗುರದ ರೂಪದಲ್ಲಿದೆ. ಅದನ್ನೇ ಮುಂದೆ ಮತ್ತೊಂದು ಒಡವೆಯನ್ನು ಮಾಡಿಸಲು ಆಗುತ್ತದೆ. ಆಗ ಈಗಿನ ಉಂಗುರದ ರೂಪ ಮಾಯವಾಗುತ್ತದೆ. ಒಂದು ಹೊಸ ರೂಪ ಉತ್ಪನ್ನವಾಗುತ್ತದೆ. ಹಿಂದಿನ ಓಲೆಯ ಸ್ಥಿತಿ ಮಾಯವಾಗಿ ಈಗಿನ ಉಂಗುರದ ರೂಪ ಉತ್ಪನ್ನವಾಗಿದೆ. ಹೀಗೆ ಸ್ಥಿತಿ ಬದಲಾದರೂ ವಸ್ತುವಿನ ಮೂಲರೂಪ ಅಂದರೆ ಚಿನ್ನದ ಗುಣ ನಾಶವಾಗಲಿಲ್ಲ. ಆಗುವುದೂ ಇಲ್ಲ. ಹೀಗೆಯೇ ಬಾಲ್ಯಾವಸ್ಥೆಯ ನಾಶ ಯೌವನಾವಸ್ಥೆಯ ಉತ್ಪನ್ನ. ಮತ್ತದರ ನಾಶ ವೃದ್ಧಾವಸ್ಥೆಯ ಉತ್ಪತ್ತಿ ಆಗುತ್ತಿದ್ದರೂ ಆತ್ಮವು ಸ್ಥಿರವಾಗಿಯೇ ಇರುತ್ತದೆ. ಹೀಗೆ ಮೂಲರೂಪವು ಇದ್ದುಕೊಂಡೇ ಅವಸ್ಥೆಯು ಪರಿವರ್ತನವಾಗುತ್ತಿರುತ್ತದೆ. ಇದೇ ದ್ರವ್ಯದ ಗುಣಪರ್ಯಾಯ ದ್ರವ್ಯದ ಪೂರ್ಣ ಲಕ್ಷಣವನ್ನು ಆಚಾರ್ಯಉಮಾ ಸ್ವಾಮಿಯವರು.

"ಗುಣಪರ್ಯಯವತ್ ದ್ರವ್ಯಂ। ಸತ್ ದ್ರವ್ಯಲಕ್ಷಣಂ । ಉತ್ಪಾದ ವ್ಯಯ ಧ್ರೌವ್ಯಯುಕ್ತಂ ಸತ್ ॥" ಎಂಬ ಮೂರು ಸೂತ್ರಗಳೇ ದ್ರವ್ಯದ ಸಿದ್ಧಾಂತವೆಂದಿದ್ದಾರೆ.

ಮೂಲತಃ ದ್ರವ್ಯವು ಎರಡು ಭೇಧ ಉಳ್ಳದ್ದಾಗಿದೆ. 1. ಜೀವದ್ರವ್ಯ 2. ಅಜೀವದ್ರವ್ಯ.

**ಜೀವದ್ರವ್ಯ** :– ಜ್ಞಾನ, ಹಲನ, ಚಲನ ಲಕ್ಷಣವುಳ್ಳದೇ ಜೀವದ್ರವ್ಯ. ಇದನ್ನು ಜೀವ, ಚೇತನ, ಆತ್ಮ, ಪ್ರಾಣ ಎಂದು ಕರೆಯುವುದುಂಟು. ಜೀವವು ಒಂದು ಅಮೂರ್ತಿಕ ಅಂದರೆ ಕೈಗೆ ಸಿಕ್ಕದ, ಕಣ್ಣಿಗೆ ಕಾಣದ ವಸ್ತು. ಏಕೆಂದರೆ ಜೀವನಿಗೆ ರೂಪ, ರಸ, ಗಂಧ, ವರ್ಣಾದಿಗಳು ಇಲ್ಲ. ಶರೀರವು ಜೀವದ ಮನೆಯಸಮಾನ ಅಷ್ಟೆ. ಶರೀರ ಕಣ್ಣಿಗೆ ಕಂಡರೂ ಶರೀರವೇ ಬೇರೆ ಜೀವವೇ ಬೇರೆ ಜೀವವಿಲ್ಲದ ಶರೀರ ಅಪ್ರಯೋಜಕ, ಜಡ, ಶವ.

ಜೀವ ದ್ರವ್ಯಕ್ಕೆ ಒಂಬತ್ತು ಅಧಿಕಾರಗಳುಂಟು. 1. ಜೀವತ್ವ 2. ಉಪಯೋಗಮಯತ್ವ 3. ಕರ್ತೃತ್ವ 4. ಸ್ವದೇಹ ಪರಿಮಾಣತ್ವ 5. ಭೋಕ್ತೃತ್ವ 6. ಸಂಸಾರಿತ್ವ 7. ಅಮೂರ್ತತ್ವ 8. ಸಿದ್ಧತ್ವ, 9. ಊರ್ಧ್ವ ಗಮನತ್ವ.

ಜೀವದ್ರವ್ಯಕ್ಕೆ ಪ್ರಾಣಸಮುದಾಯ ರೂಪವಾದ ಸೂಕ್ಷ್ಮ ಶರೀರವೊಂದು ಇರುತ್ತದೆ. ಇದು ಸ್ಥೂಲ ಶರೀರದೊಂದಿಗೆ ನಾಶವಾಗುವುದಿಲ್ಲ. ಹೇಗೆಂದರೆ ಕಡಲೆಕಾಯಿಯೊಳಗಣ ಕೆಂಪು ಸಿಪ್ಪೆಯೊಳಗೆ ಇರುವ ಬೀಜದಂತೆ. ಕಾಯಿಯ ಹೊಟ್ಟು ಹೋದರೂ ಬೀಜವಿರಬಲ್ಲದು. ಆದರೆ ಕೆಂಪು ಸಿಪ್ಪೆ ಹೋದರೆ ಬೀಜ ಮೊಳೆಯಲಾರದು, ಹೇಗೋ ಹಾಗೇ ಜೀವದ ಸೂಕ್ಷ್ಮ ಶರೀರಕ್ಕೂ ಸ್ಥೂಲ ಶರೀರಕ್ಕೂ ಇರುವ ಸಂಬಂಧ. ಇದಕ್ಕನುಸಾರವಾಗಿ ಜೀವದ ಅವಸ್ಥೆಗಳು ಎರಡು. 1. ಸಂಸಾರಿಜೀವ, 2. ಮುಕ್ತಜೀವ.

**ಸಂಸಾರಿಜೀವ** :– ಚೈತನ್ಯ ಮತ್ತು ಜಡಗಳ ಕೂಡುವಿಕೆಯಿಂದ ಸೃಷ್ಟಿ ನಿರ್ಮಾಣವಾಗಿದೆ. ಇದಕ್ಕೆ ಸಿಕ್ಕಿರುವ ಆತ್ಮನು ಜೀವನೆನಿಸಿದ್ದಾನೆ. ಮತ್ತು ನಾನಾ ರೂಪದಿಂದ ಕಾಣಿಸಿಕೊಂಡಿದ್ದಾನೆ. ಜೀವದ ಪರಿಣಾಮದ ಸಮಯವನ್ನು ಸಾಧಿಸಿ ಕರ್ಮ ರೂಪ ಪುದ್ಗಲಾಣುಗಳು ಆತ್ಮ ಪ್ರದೇಶವನ್ನು ಪ್ರವೇಶಿಸುತ್ತವೆ. ಆಗ ಜೀವಕ್ಕೆ ಕರ್ಮದ ಸಂಬಂಧ ಉಂಟಾಗುತ್ತದೆ. ಈ ಸಂಬಂಧವು ಜೀವನಿಗೆ ಅನಾದಿಕಾಲ ದಿಂದಲೂ ಅಂಟಿ ಬಂದಿವೆ. ಈ ಸಂಬಂಧವು ರಾಗದ್ವೇಷಾದಿ ಭಾವನೆಗಳಿಂದಲೂ, ಕ್ರೋಧ, ಮಾನ, ಮಾಯ, ಲೋಭಾದಿ ಕಷಾಯದಿಂದಲೂ ಉಂಟಾಗುವುದು. ಈ ಕರ್ಮ ಬಂಧನದಿಂದ ಆತ್ಮವು ಪರಾಧೀನವಾಗಿ ಭವಚಕ್ರದಲ್ಲಿ ಸಿಲುಕಿ, ಭಿನ್ನ ಭಿನ್ನ ಯೋನಿಗಳಲ್ಲಿ, ಭಿನ್ನ ಭಿನ್ನ ಶರೀರಗಳನ್ನು ಪಡೆದು ಹುಟ್ಟುತ್ತಾ, ಸುಖ ದುಃಖಗಳನ್ನು ಅನುಭವಿಸುತ್ತಾ, ಸಾಯುತ್ತಾ ಇರುತ್ತದೆ. ಇದೇ ಸಂಸಾರಚಕ್ರ. ಈ ಚಕ್ರಕ್ಕೆ ಸಿಲುಕಿರುವ ಜೀವನಿಗೆ ಸಂಸಾರಿಜೀವಿ ಎಂದು ಹೆಸರು.

"ಜಾತಾಃ ಪುಷ್ಟಾಃ ಪುನರ್ನಷ್ಟಾ ಇತಿ ಪ್ರಾಣಭೃತಾಂ ಪ್ರಥಾಃ" ಎಂಬಂತೆ ಹುಟ್ಟಿ



ಬೆಳೆದು ಸಾಯುವ ಜೀವನ ಸ್ಥಿತಿಯು ಜೀವನಿಗೆ ಅನಂತ ಕಾಲದಿಂದಲೂ ಅಂಟಿ ಬಂದಿದೆ. ಸಂಸಾರಿ ಜೀವಿಗಳಲ್ಲಿ ಎರಡು ವಿಧ :- 1. ಸ್ಥಾವರಜೀವ, 2. ತ್ರಸಜೀವ.

**ಸ್ಥಾವರಜೀವ** :– ಸ್ಪರ್ಶನೇಂದ್ರಿಯ ಉಳ್ಳ ಶರೀರಸ್ಥವಾದ ಜೀವಿಗಳಿಗೆ ಸ್ಥಾವರ ಜೀವಿಗಳೆಂದು ಹೆಸರು. ಇವು ಐದು ಪ್ರಕಾರವಾಗಿವೆ :-

1. ಪೃಥ್ವಿಕಾಯಕ 2. ಜಲಕಾಯಕ 3. ಅಗ್ನಿಕಾಯಕ 4. ವಾಯುಕಾಯಕ 5. ವನಸ್ಪತಿಕಾಯಕ, ಈ ಸ್ಥಾವರಜೀವಿಗಳು ಹುಟ್ಟುವುವು, ಬೆಳೆಯುವುವು ಸಾಯುವುವು ಇವಕ್ಕೆ ಸ್ಪರ್ಶನೇಂದ್ರಿಯ ಕಾಯಬಲ, ಶ್ವಾಸೋಚ್ಛ್ವಾಸ ಮತ್ತು ಆಯುಷ್ಯ ಎಂಬ ನಾಲ್ಕು ಪ್ರಾಣಗಳು ಇರುತ್ತವೆ. ಉತ್ಪತ್ತಿಸ್ಥಾನದಿಂದ ಬೇರೆಯಾದೊಡನೆ ಇವು ನಿರ್ಜೀವಿಗಳಾಗುವುವು. ಇವುಗಳಲ್ಲಿ ಸ್ಥೂಲಜೀವಿಗಳೂ ಸೂಕ್ಷ್ಮ ಜೀವಿಗಳೂ ಉಂಟು.

**ತ್ರಸಜೀವ** :– ಹುಟ್ಟುವುದು, ಬೆಳೆಯುವುದು, ಸಂಚರಿಸುವುದು, ಆಹಾರವನ್ನು ತಿನ್ನುವುದು ಮತ್ತು ಸುಖದ ಇಚ್ಛೆಯುಳ್ಳದೂ ಎರಡರಿಂದ ಐದು ಇಂದ್ರಿಯಗಳನ್ನು ಹೊಂದಿರುವುದೂ ಆದ ಕ್ರಿಮಿ, ಕೀಟ, ಇರುವೆ, ನೊಣ, ಪಶು, ಪಕ್ಷಿ, ದೇವ, ಮನುಷ್ಯ, ನಾರಕ ಮೊದಲಾದ ಜೀವಿಗಳು ತ್ರಸಜೀವಿಗಳು. ಇವಕ್ಕೆ 2 ರಿಂದ 10 ಪ್ರಾಣಗಳು ಇರುತ್ತವೆ. ಅವಾವೆಂದರೆ ದ್ವೀಂದ್ರಿಯ ತ್ರಸಜೀವಕ್ಕೆ ಸ್ಪರ್ಶನೇಂದ್ರಿಯ, ರಸನೇಂದ್ರಿಯ, ಶರೀರಬಲ, ವಚನಬಲ, ಆಯುಷ್ಯ ಮತ್ತು ಶ್ವಾಸೋಚ್ಛ್ವಾಸ ಎಂಬ ಆರು ಪ್ರಾಣಗಳಿರುತ್ತವೆ.

**ಉದಾ** :– ಕ್ರಿಮಿ, ಶಂಖದಹುಳು, ಹೇನು ಮುಂತಾದುವು. ತ್ರೀಂದ್ರಿಯ ಜೀವಕ್ಕೆ ಮೇಲ್ಕಂಡ ಆರರ ಜೊತೆಗೆ ಘ್ರಾಣೇಂದ್ರಿಯವೂ ಸೇರಿ ಏಳು ಪ್ರಾಣಗಳಿರುತ್ತವೆ. ಉದಾ :- ಇರುವೆ, ಗೆದ್ದಲು, ತಿಗಣೆ ಮುಂತಾದವು. ಚತುರಿಂದ್ರಿಯ ಜೀವಕ್ಕೆ ಮೇಲಿನ ಏಳರ ಜೊತೆಗೆ ಚಕ್ಷುರಿಂದ್ರಿಯವೂ ಸೇರಿ ಎಂಟು ಪ್ರಾಣಗಳಿರುತ್ತವೆ. ಉದಾ :- ದುಂಬಿ, ಪತಂಗ, ನೊಣ, ಸೊಳ್ಳೆ ಮುಂತಾದುವು. ಪಂಚೇಂದ್ರಿಯ ಜೀವಿಗಳಲ್ಲಿ ಎರಡು ಬಗೆ. 1. ಅಸಂಜ್ಞಿ ಪಂಚೇಂದ್ರಿಯ 2.ಸಂಜ್ಞಿ ಪಂಚೇಂದ್ರಿಯ. ಅಸಂಜ್ಞಿ ಪಂಚೇಂದ್ರಿಯ ಜೀವಕ್ಕೆ ಮೇಲ್ಕಂಡ ಎಂಟು ಪ್ರಾಣಗಳ ಜೊತೆಗೆ ಶ್ರೋತ್ರೇಂದ್ರಿವು ಸೇರಿ ಒಂಭತ್ತು ಪ್ರಾಣಗಳಿರುತ್ತವೆ. ಉದಾ : ನೀರಿನಲ್ಲಿರುವ ಸರ್ಪ, ಹಸು, ಎಮ್ಮೆ ಮುಂತಾದುವು.

ಸಂಜ್ಞಿ ಪಂಚೇಂದ್ರಿಯ ಜೀವಕ್ಕೆ ಮೇಲ್ಕಂಡ ಒಂಭತ್ತರ ಜೊತೆಗೆ

ಮನೋಬಲವು ಸೇರಿ ಹತ್ತು ಪ್ರಾಣಗಳಿರುತ್ತವೆ. ಉದಾ : ದೇವ, ನಾರಕಿ ಮನುಷ್ಯ, ಆನೆ, ಕುದುರೆ, ಪಾರಿವಾಳ, ಮಂಗ, ಕೋಳಿ ಮುಂತಾದುವು.

ಹೀಗೆ ತ್ರಸ-ಸ್ಥಾವರ ಜೀವಿಗಳು ತಮ್ಮ ತಮ್ಮ ಶರೀರ ಪ್ರಮಾಣಾನುಸಾರ ಇರುತ್ತವೆ. ಆನೆಯ ಶರೀರವನ್ನು ಹೊಂದಿದ್ದ ಜೀವಿಯ ಸತ್ತು ಇರುವೆಯ ಶರೀರವನ್ನು ಹೊಂದಬಹುದು. ಇರುವೆಯು ಸತ್ತು ಆನೆಯ ಶರೀರವನ್ನು ಪಡೆಯಬಹುದು. ಇದು ಸ್ವಭಾವ ಕರ್ಮಾನುಸಾರ ಸ್ಥಿತಿ ಮತ್ತು ಅವಸ್ಥೆಗಳು ಉಂಟಾಗುತ್ತವೆ. ಆದುದರಿಂದ ಜೀವಿಯು ಸ್ವದೇಹ ಪರಿಮಾಣ ಮತ್ತು ಸರ್ವಾಂಗ ಸಂಪೂರ್ಣವೂ ಆಗಿರುತ್ತದೆ.

ಸಂಸಾರಿ ಜೀವಿಗಳು ತಮ್ಮ ಕರ್ಮಾನುಸಾರ ಚತುರ್ಗತಿ ಭವಭ್ರಮಣೆಗೆ ಸಿಕ್ಕಿರುತ್ತವೆ.

ಗತಿಗಳು ನಾಲ್ಕು : 1) ಮನುಷ್ಯಗತಿ 2) ದೇವಗತಿ 3) ನರಕಗತಿ 4) ತಿರ್ಯಂಚಗತಿ.

ಈ ಚತುರ್ಗತಿಗಳಲ್ಲೆಲ್ಲಾ ಮನುಷ್ಯಗತಿಯು ಶ್ರೇಷ್ಠವಾದುದು. ಸುಖ ದುಃಖಗಳ ಮಿಶ್ರ ಅನುಭವ ಉಳ್ಳದ್ದು. ಈ ಗತಿಯಲ್ಲಿ ಶುಭಭಾವನೆ, ಸತ್ಕಾರ್ಯ, ಸದಾಚಾರದಿಂದ ಅನಾದಿಯಿಂದ ಅಂಟಿರುವ ಕರ್ಮಗಳನ್ನು ಕಿತ್ತೊಗೆದು ಮುಕ್ತನಾಗಬಹುದು. ಇದಕ್ಕೆ ಪ್ರತಿಯಾದರೆ ನರಕಾದಿ ದುಃಖವನ್ನು ಹೊಂದಬಹುದು. ಈ ಮನುಷ್ಯಗತಿ ಎಂಬುದು ಒಂದು ರೈಲ್ವೆ ಜಂಕ್ಷನ್ ಇದ್ದಂತೆ. ಇಲ್ಲಿಂದ ಯಾವ ಗತಿಗಾದರೂ ಹೋಗಬಹುದು.

ದೇವಗತಿ ಎಂದರೆ ಮುಕ್ತಾತ್ಮ ಸ್ಥಿತಿಯಲ್ಲ, ಪುಣ್ಯಾತ್ಮಸ್ಥಿತಿ. ದೇವಗತಿಯಲ್ಲಿನ ಜೀವಿಗಳು ಆಯುಃಪೂರ್ತಿ ಸುಖಾನುಭವಿಗಳಾಗಿ ಅವಧಿಜ್ಞಾನ ಸಂಪನ್ನವಾಗಿ ಹುಟ್ಟುವಾಗ ಸಾಯುವಾಗ ವೇದನೆಯನ್ನು ಅನುಭವಿಸದೆ ಸುಂದರ ಶರೀರಧಾರಿಯಾಗಿ ಇಚ್ಛಿತ ರೂಪ ಹೊಂದುವ ವೈಕ್ರಿಯಕ ಋದ್ಧಿಯುಳ್ಳವಾಗಿ ಇರುತ್ತವೆ.

ಮನುಷ್ಯಗತಿಯಲ್ಲಿ ಅಹಿಂಸೆ, ಬ್ರಹ್ಮಚರ್ಯ, ದಾನಧರ್ಮ ಮುಂತಾದ ಸದಾಚಾರದ ಪುಣ್ಯದಿಂದ ದೇವಗತಿಯನ್ನು ಪಡೆಯುತ್ತವೆ. ಪುಣ್ಯದ ಫಲದಿಂದ ಜೀವನವು ಸುಖಮಯವಾಗುತ್ತದೆ. ಈ ದೇವಗತಿಯಲ್ಲಿ ಭವನವಾಸಿ, ವ್ಯಂತರ, ಜ್ಯೋತಿಷ್ಕ ಮತ್ತು ವೈಮಾನಿಕ ಎಂಬ ನಾಲ್ಕು ವಿಧವುಂಟು. ಇಲ್ಲಿಯೂ ಶುಭಭಾವನೆ ಮತ್ತು ಆಚರಣೆಯಿಂದ ಮತ್ತೆ ಮನುಷ್ಯ ಗತಿಯನ್ನು



ಹೊಂದಬಹುದು. ಇಲ್ಲದಿದ್ದರೆ ಪಶುಗತಿಯುಂಟಾಗುತ್ತದೆ. ಆದರೆ ದೇವಗತಿಯಿಂದಾ ಸೀದಾ ನರಕಗತಿಯನ್ನಾಗಲಿ ಮತ್ತೆ ದೇವಗತಿಯನ್ನಾಗಲಿ ಪಡೆಯುವುದಿಲ್ಲ.

ಜೀವನು ಮನುಷ್ಯಗತಿಯಲ್ಲಿ ಮಾಡಿದ ಅಶುಭ, ಭಾವನೆ, ಅನಾಚಾರ, ಕೊಲೆ, ಹುಸಿ, ಕಳುವು, ಲಂಪಟತೆ, ಅತಿಕಾಂಕ್ಷೆ ಮುಂತಾದ ಪಾಪಗಳ ಫಲವನ್ನು ನರಕ ಗತಿಯಲ್ಲಿ ಅನುಭವಿಸುವನು. ಇದು ಅಧೋಗತಿ ಮತ್ತು ದುಃಖಮಯ ಸ್ಥಾನ. ಕ್ಷಣವೂ ಶಾಂತಿಯಿಲ್ಲದೆ ದುಃಖಭೋಗದಲ್ಲಿಯೇ ಸಮಾಪ್ತವಾಗುವುದು. ಅಲ್ಲಿಯೂ ಶುಭಭಾವನೆ ಮತ್ತು ಪಶ್ಚಾತ್ತಾಪಕ್ಕೆ ಅವಕಾಶವುಂಟು. ಇದರಿಂದ ನರಕಾಯುಷ್ಯಾನಂತರ ಮನುಷ್ಯಗತಿಯನ್ನು ಹೊಂದಬಹುದು.

ತಿರ್ಯಂಚಗತಿಯೂ ಕೂಡ ಜೀವಿಯ ಅಶುಭ ಪರಿಣಾಮದ ಕರ್ಮ ಫಲ. ಕ್ರಿಮಿಕೀಟದಿಂದ ಆನೆಯವರೆಗೂ ಶರೀರಾದಿಗಳನ್ನು ಹೊಂದಬಹುದು.

ಹೀಗೆ ಸಂಸಾರಿ ಜೀವಿಯು ಚತುರ್ಗತಿ ಭ್ರಮಣ ಚಕ್ರಕ್ಕೆ ಸಿಲುಕಿ ಪಾರುಗಾಣದೆ ಪರಾವಲಂಬಿಯಾಗಿ ಪರದಾಡುತ್ತದೆ. ಇದರಿಂದ ಬಿಡುಗಡೆ ಹೊಂದಬೇಕೆಂಬುದೇ ಜೀವದ ಆಸೆ.

**ಮುಕ್ತಜೀವ** :– ಭವಭ್ರಮಣೆ, ದುಃಖಾದಿಗಳಿಗೆ ಕಾರಣವಾದ ಕರ್ಮ ಬಂಧನದಿಂದ ಸಂಪೂರ್ಣ ಬಿಡುಗಡೆ ಹೊಂದಿರುವ ಪವಿತ್ರಾತ್ಮವೇಮುಕ್ತಜೀವ.

ಆತ್ಮನಲ್ಲಿ ಉಂಟಾಗಿದ್ದ ರಾಗದ್ವೇಷಾದಿ ದೋಷಗಳು ನಷ್ಟವಾಗಿ ಆತ್ಮನನ್ನು ಘಾತಿಸುವ ಕ್ರೂರ ಕರ್ಮಗಳಿಂದ ಬಿಡುಗಡೆ ಹೊಂದುವುದು ಭಾವ ಮೋಕ್ಷ. ಈ ಮೋಕ್ಷ ಹೊಂದಿದ ಜೀವಿಯು ಸುಖದುಃಖಾದಿ ವಿಕಾರಗಳಿಂದ ರಹಿತನಾಗಿ ಅರಹಂತನೆಂದೆನಿಸಿ ಲೋಕಕಲ್ಯಾಣದೊಂದಿಗೆ ಆತ್ಮಕಲ್ಯಾಣವನ್ನೂ ಬಯಸಿ ಓಂಕಾರರೂಪಿಯಾಗಿ ಶುದ್ಧಸ್ವರೂಪ ಧ್ಯಾನದಲ್ಲಿ ಲೀನನಾದಾಗ ಉಳಿದಿರುವ ಸಕಲಬಂಧನಗಳೂ ಜಾರಿಹೋಗುವುವು. ಇದೆ ದ್ರವ್ಯ ಮೋಕ್ಷ. ಹೀಗೆ ಮುಕ್ತರಾದ ಸಾಧಕರು ಸಿದ್ಧರೆನಿಸಿ ಲೋಕದ ತುತ್ತ ತುದಿಯಲ್ಲಿರುವ ಸಿದ್ಧಸ್ಥಾನವನ್ನು ತಲುಪಿ ಶಾಶ್ವತ ಆತ್ಮಾನಂದಾನುಭವಿಗಳಾಗುವರು. ಇದೇ ಆತ್ಮನ ಶುದ್ಧಾವಸ್ಥೆ, ನಿಜಾವಸ್ಥೆ, ಪರಮಾತ್ಮಾವಸ್ಥೆ. ಈ ಅವಸ್ಥೆಯನ್ನು ಮನುಷ್ಯಗತಿಯಿಂದಲೇ ಸಾಧಿಸಬೇಕು. ತಪ, ಜ್ಞಾನ, ವೈರಾಗ್ಯ, ತ್ಯಾಗದ ಪ್ರತೀಕವಾದ ದಿಗಂಬರರಾಗಲೇಬೇಕು. ಇದೇ ಆತ್ಮದ ಕೊನೆಯ ಅವಸ್ಥೆ.

**ಅಜೀವದ್ರವ್ಯ** :– ಜೀವ, ಚೇತನ, ಪ್ರಾಣವಿಲ್ಲದ ವಸ್ತುವೇ ಅಜೀವದ್ರವ್ಯ.

ಇದು ಐದು ಪ್ರಕಾರವಾಗಿದೆ. 1. ಪುದ್ಗಲ 2. ಧರ್ಮ 3. ಅಧರ್ಮ 4. ಆಕಾಶ 5. ಕಾಲ.

**ಪುದ್ಗಲದ್ರವ್ಯ** :– ಜಡಪದಾರ್ಥವೇ ಪುದ್ಗಲ. ಇದು ಸ್ಪರ್ಶ, ರಸ, ಗಂಧ, ವರ್ಣ ಎಂಬ ನಾಲ್ಕು ಗುಣವುಳ್ಳದಾಗಿದೆ. ಹೇಗೆಂದರೆ ಮಾವಿನ ಹಣ್ಣಿನಲ್ಲಿ ಕೋಮಲ ಸ್ಪರ್ಶವೂ, ಸಿಹಿರಸವೂ, ಸುವಾಸನಾ ಗಂಧವೂ, ಹಳದಿ ಬಣ್ಣವೂ ಇದೆ. ಹೀಗೆ ಕಣ್ಣಿಗೆ ಕಾಣುವ ಎಲ್ಲಾ ಪದಾರ್ಥಗಳಲ್ಲಿಯೂ ಈ ಗುಣವಿರುತ್ತದೆ.

ಸ್ಪರ್ಶವು ಶೀತ, ಉಷ್ಣ, ಹಸಿಯ, ಒಣಗಿದ, ಮೃದು, ಒರಟು, ಹಗುರ, ಭಾರ ಎಂದು ಎಂಟು ಪ್ರಕಾರವಿದೆ. ರಸವು ಸಿಹಿ, ಕಾರ, ಉಪ್ಪು ಹುಳಿ, ಕಹಿ, ಒಗರು ಎಂದು ಆರು ಪ್ರಕಾರವಿದೆ.

ಗಂಧವು ಸುಗಂಧ, ದುರ್ಗಂಧ, ಎಂದು ಎರಡು ಪ್ರಕಾರ. ವರ್ಣವು ಬಿಳುಪು, ಕಪ್ಪು, ಹಳದಿ, ನೀಲಿ, ಕೆಂಪು ಎಂದು ಐದು ಪ್ರಕಾರವಾಗಿರುತ್ತದೆ.

ಹೀಗೆ ಸ್ಪರ್ಶದ 8, ರಸದ 6, ಗಂಧದ 2, ವರ್ಣದ 5, ಪ್ರಕಾರಗಳು ಸೇರಿ ಪುದ್ಗಲವು 21 ಗುಣವುಳ್ಳದಾಗಿದೆ. ಪುದ್ಗಲದ್ರವ್ಯವನ್ನು ಎರಡು ವಿಧವಾಗಿ ವಿಂಗಡಿಸಬಹುದು. 1. ಪರಮಾಣು 2. ಸ್ಕಂಧ.

**ಪರಮಾಣು** :– ಮತ್ತೆ ಎರಡಾಗಿ ವಿಭಾಗ ಮಾಡಲಾಗದಂತಹ ಅತಿ ಸೂಕ್ಷ್ಮ ವಸ್ತುವೇ ಪರಮಾಣು. ಇದರಲ್ಲಿ ತುದಿ, ಮಧ್ಯ ಮತ್ತು ಮೊದಲು ಎಂಬ ಭೇದವಿಲ್ಲ. ಇಂದ್ರಿಯಗಳ ಮೂಲಕ ತಿಳಿಯಲೂ ಅಸಾಧ್ಯವಾದ ಅವಿಭಾಗ ವಸ್ತುವೇ ಪರಮಾಣು. ಇದಕ್ಕೂ ತನ್ನದೇ ಆದ ಪ್ರದೇಶ, ರೂಪು, ರಸ, ಗಂಧ, ವರ್ಣ ಇದ್ದೇ ಇದೆ.

**ಸ್ಕಂದ** : ಎರಡು ಅಥವಾ ಅನೇಕ ಪರಮಾಣುಗಳಿಂದ ಕೂಡಿದ ಪಿಂಡವೇ ಸ್ಕಂದ. ಇವೆಲ್ಲಾ ಕಣ್ಣಿಗೆ ಗೋಚರವಾಗುತ್ತದೆ. ಹೊಗೆ, ಆವಿ, ಧೂಳು, ಇವುಗಳಲ್ಲಿರುವ ಕಣಗಳೆಲ್ಲವೂ ಸ್ಕಂಧವೇ ಆಗಿವೆ. ಸ್ಕಂಧದಲ್ಲಿ ಆರು ಭೇಧವುಂಟು. 1 ಸ್ಥೂಲದಿಂದ ಸ್ಥೂಲ 2. ಸ್ಥೂಲ 3. ಸ್ಥೂಲಸೂಕ್ಷ್ಮ 4. ಸೂಕ್ಷ್ಮಸ್ಥೂಲ 5. ಸೂಕ್ಷ್ಮ 6. ಸೂಕ್ಷ್ಮ ಸೂಕ್ಷ್ಮ.

ಭೇದನ ಭೇಧನವಾಗುವಂತಹ, ಸ್ಥಳಾಂತರಿಸುವಂತಹ, ಹರಿದು ಮುರಿದು ಒಡೆದ ನಂತರ ತಾನಾಗಿಯೇ ಮತ್ತೆ ಕೂಡಿಕೊಳ್ಳದಂತಹ ಕಾಗದ, ಕಲ್ಲು, ಸೌದೆ, ಮುಂತಾದುವು ಸ್ಥೂಲ ಸ್ಥೂಲ ಸ್ಕಂದವು.



ಭೇದನ ಭೇದನ ವಾಗುವಂತಹ, ಭೇರ್ಪಡಿಸಿದರೂ ಮತ್ತೆ ಕೂಡಿ ಕೊಳ್ಳುವಂತಹ ದ್ರವರೂಪದ ವಸ್ತುವೇ ಸ್ಥೂಲ ಸ್ಕಂದವು.

ಕಣ್ಣಿಗೆ ಕಂಡರೂ ಮುರಿದು ಚೂರು ಮಾಡಲು ಸಾಧ್ಯವಾಗುವಂತಹ ಹೊಗೆ, ನೆರಳು, ಬೆಳಕು ಮುಂತಾದುವು ಸ್ಥೂಲ ಸೂಕ್ಷ್ಮ ಸ್ಕಂದವು.

ಕಣ್ಣಿಗೆ ಮಾತ್ರ ಕಾಣದೆ ಮಿಕ್ಕ ನಾಲ್ಕು ಇಂದ್ರಿಯಗಳಿಗೆ ಗೋಚರವಾಗುವಂತಹ ಗಾಳಿ, ರುಚಿ, ವಾಸನೆ, ಶಬ್ದ ಮುಂತಾದುವು ಸೂಕ್ಷ್ಮ ಸ್ಥೂಲಸ್ಕಂದವು.

ಇಂದ್ರಿಯ ಗೋಚರವಲ್ಲದ ಕೇವಲಜ್ಞಾನ ಗಮ್ಯವಾದ ಕಾರ್ಮಣ ವರ್ಗಣ, ಭಾಷಾವರ್ಗಣ, ತೈಜಸವರ್ಗಣ ಮುಂತಾದುವುಗಳು ಸೂಕ್ಷ್ಮ ಸ್ಕಂಧವು.

ಕೇವಲ ಎರಡೇ ಪರಮಾಣುಗಳಿಂದ ಕೂಡಿದ ಕಾರ್ಮಣವರ್ಗಕ್ಕಿಂತ ಸೂಕ್ಷ್ಮವಾದುದೇ ಸೂಕ್ಷ್ಮ ಸೂಕ್ಷ್ಮ ಸ್ಕಂಧವು.

ಹೀಗೆ ಕಣ್ಣಿಗೆ ಕಾಣುವ, ಕೈಗೆ ಸಿಕ್ಕುವ ಎಲ್ಲಾ ಪದಾರ್ಥಗಳೂ ಮತ್ತು ಕಣ್ಣಿಗೆ ಕಾಣದ, ಕೈಗೆ ಸಿಕ್ಕದ ಪಾಪ ಪುಣ್ಯ, ಕರ್ಮ ಮುಂತಾದುವೂ ಪುದ್ಗಲ ದ್ರವ್ಯಗಳು. ಇವು ಜಗತ್ತಿನ ತುಂಬಾ ತುಂಬಿ ತುಳುಕಾಡುತ್ತಿವೆ.

**ಧರ್ಮದ್ರವ್ಯ** : ಅಜೀವದ ಎರಡನೆಯ ದ್ರವ್ಯ. ಇದು ಲೋಕ ಪ್ರಮಾಣದ ಅಖಂಡ ಅಮೂರ್ತದ್ರವ್ಯ. ಇದು ಗತಿಹೇತುತ್ವ ಗುಣವುಳ್ಳದು. ಅಂದರೆ ಜೀವ, ಪುದ್ಗಲಗಳಿಗೆ ಹಲನ ಚಲನಾದಿಗಳಲ್ಲಿ ಸಹಕಾರಿಯಾಗಿದೆ. ಮೀನಿನ ಚಲನೆಗೆ ನೀರೂ, ಪತಂಗದ ಚಲನೆಗೆ ಗಾಳಿಯೂ ಸಹಾಯವಾಗುವಂತೆ ಪ್ರತ್ಯೇಕ ವಸ್ತುವಿನ ಹಲನ ಚಲನಗಳಿಗೆ ಧರ್ಮದ್ರವ್ಯವು ಅವಶ್ಯಕವೂ ಸಹಾಯಕವೂ ಆಗಿದೆ. ಇಲ್ಲಿ ಧರ್ಮದ್ರವ್ಯವೆಂದರೆ ಪಾಪ ಪುಣ್ಯವೆಂದಾಗಲಿ ಮುಕ್ತಿಮಾರ್ಗವೆಂದಾಗಲಿ ಅಲ್ಲ. ಜೀವಪುದ್ಗಲಗಳ ಚಲನೆಗೆ ಧರ್ಮದ್ರವ್ಯವು ಪ್ರೇರಕವಲ್ಲ. ತಾನಾಗಿಯೇ ಚಲಿಸುವಂತೆ ಮಾಡುವುದಿಲ್ಲ. ಆದರೆ ಮೀನಿಗೆ ನೀರಿನಂತೆ ಉದಾಸೀನ ನಿಮಿತ್ತ ಮಾತ್ರ ಸಹಾಯಕವಾಗಿರುತ್ತದೆ.

**ಅಧರ್ಮದ್ರವ್ಯ** : ಇದೂ ಕೂಡ ಲೋಕಪ್ರಮಾಣದ ಅಜೀವ, ಅಮೂರ್ತದ್ರವ್ಯ. ಜೀವ, ಪುದ್ಗಲಗಳು ಸ್ಥಿಮಿತವಾಗಿ ನಿಲ್ಲಲು ಅಧರ್ಮ ದ್ರವ್ಯ ಸಹಕಾರಿಯಾಗಿದೆ. ಇದು ಸ್ಥಿತಿಹೇತುತ್ವ ಗುಣವುಳ್ಳದ್ದು. ಹೇಗೆಂದರೆ ಬಿಸಿಲಿನಿಂದ ಬಳಲಿ ಬಂದ ಪ್ರಮಾಣಿಕನು ಮರದ ನೆರಳಿನಲ್ಲಿ ನಿಂತಂತೆ. ಆದರೆ ಆ ನೆರಳು ತಾನಾಗಿಯೇ ಪ್ರಮಾಣಿಕರನ್ನು ಕರೆಯಲಿಲ್ಲ. ನಿಂತವನನ್ನು ದೂಡಲಿಲ್ಲ. ಆದರೂ

ನಿಲ್ಲಲು ಸಹಾಯಕವಾಗಿದೆ. ಇಲ್ಲಿ ಅಧರ್ಮವೆಂದರೆ ಅನಾಚಾರ, ಅನ್ಯಾಯವೆಂದರ್ಥವಲ್ಲ.

**ಆಕಾಶದ್ರವ್ಯ** : 'ಅವಕಾಶದಾನಯೋಗ್ಯಂ ಆಕಾಶಮ್' ಅಂದರೆ ಸಕಲ ದ್ರವ್ಯಗಳೂ ಇರುವುದಕ್ಕೆ ಅವಕಾಶ ಕೊಟ್ಟಿರುವ ಸ್ಥಾನವೇ ಆಕಾಶ. ಇದು ಅವಗಾಹನ ಹೇತುತ್ವ ಗುಣವುಳ್ಳದ್ದು. ಇದೂ ಅಮೂರ್ತದ್ರವ್ಯ. ಇದರಲ್ಲಿ ಎರಡು ಭೇದ ಉಂಟು : 1. ಲೋಕಾಕಾಶ 2. ಅಲೋಕಾಕಾಶ.

ಜೀವ ಪುದ್ಗಲ ಧರ್ಮ ಅಧರ್ಮ ಮತ್ತು ಕಾಲ ಎಂಬ ದ್ರವ್ಯಗಳು ಇರುವ ಸ್ಥಾನವೇ ಲೋಕಾಕಾಶ. ಇದರಿಂದ ಹೊರಗೆ ಇರುವುದೇ ಅಲೋಕಾಕಾಶ. ಹೀಗಿದ್ದೂ ಎರಡೂ ಪ್ರತ್ಯೇಕವಾಗಿಲ್ಲ. ಅನಂತಾಕಾಶದ ಮಧ್ಯೆ ಲೋಕವಿದೆ.

**ಕಾಲದ್ರವ್ಯ** :– ದ್ರವ್ಯಗಳ ಪರಿವರ್ತನೆಗೆ ಸಹಾಯಕವಾಗಿರುವುದೇ ಕಾಲದ್ರವ್ಯ. ವಿಶ್ವದ ಸಕಲ ಪದಾರ್ಥಗಳೂ ಕಾಲದ್ರವ್ಯದ ಸಹಾಯವಿಲ್ಲದೆ ಪರಿವರ್ತನೆ ಹೊಂದಲಾರವು. ಅಂದರೆ ಹಳೆಯ ಪರ್ಯಾಯವನ್ನು ಬಿಟ್ಟು ಹೊಸ ಪರ್ಯಾಯವನ್ನು ಹೊಂದಲು ಬೇಕಾದ ಸಮಯಾಂತರ ಸಹಾಯವನ್ನು ದ್ರವ್ಯಗಳಿಗೆ ಒದಗುವುದೇ ಕಾಲದ್ರವ್ಯ. ಆದರೆ ಇದು ದ್ರವ್ಯಗಳ ಪರಿವರ್ತನೆಯನ್ನು ತಾನೆ ಮಾಡಿಸುವುದಿಲ್ಲ; ಪ್ರೇರಕವೂ ಅಲ್ಲ. ಆದರೂ ಸ್ವಯಂ ಪರಿಣಮನ ಹೊಂದುವ ದ್ರವ್ಯಗಳಿಗೆ ಸಹಾಯಕವಾಗಿದೆ.

ಈ ಕಾಲದ್ರವ್ಯದಲ್ಲಿ ಎರಡು ವಿಧ :- 1 ವ್ಯವಹಾರ ಕಾಲ 2. ನಿಶ್ಚಯಕಾಲ.

ನಾವು ಎಣಿಸುವ ನಿಮಿಷ, ಗಂಟೆ, ದಿನ, ವರ್ಷ ಮುಂತಾದ ಸಮಯದಲೆಕ್ಕವು ವ್ಯವಹಾರಕಾಲ. ಇದನ್ನು ದ್ರವ್ಯಗಳ ಪರಿಮಣದ, ಕ್ರಿಯೆ, ಪರತ್ವ, ಅಪರತ್ವ ಮುಂತಾದುವುಗಳಿಂದ ತಿಳಿಯಬಹುದು.

ಸ್ವಯಂ ಪರಿಣಮನ ಶೀಲವಾದ ದ್ರವ್ಯಗಳ ಪರಿವರ್ತನೆಯಲ್ಲಿ ಸಹಾಯಕವಾದ ವರ್ತನಾ ಸಮಯವೇ ನಿಶ್ಚಯಕಾಲ.

ರತ್ನರಾಶಿಯಲ್ಲಿ ಅನೇಕ ರತ್ನಗಳು ಇರುವಂತೆ ಲೋಕಾಕಾಶದ ಪ್ರತಿ ಪ್ರದೇಶದಲ್ಲೂ ಕಾಲಾಣುಗಳು ಭಿನ್ನ ಭಿನ್ನವಾಗಿ ಪ್ರತಿಕ್ಷಣವೂ ಪರಿವರ್ತನೆ ಹೊಂದುತ್ತಲೇ ಇರುತ್ತವೆ.

ಕಾಲದ್ರವ್ಯವೊಂದನ್ನು ಬಿಟ್ಟು ಮಿಕ್ಕ ಐದು ದ್ರವ್ಯಗಳನ್ನು ಪಂಚಾಸ್ತಿ-



ಕಾಯವೆಂದು ಕರೆದಿದ್ದಾರೆ. ಅಸ್ತಿ+ಕಾಯ. ಅಸ್ತಿ=ಇದೆ, ಕಾಯ=ಶರೀರ. ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶ ದ್ರವ್ಯಗಳು ಸ್ಥಿತವಿದ್ದು ಬಹು ಪ್ರದೇಶೀ ಗುಣವನ್ನು ಹೊಂದಿ ಅಸ್ತಿಕಾಯವೆನಿಸಿವೆ. ಕಾಲದ್ರವ್ಯ ಮಾತ್ರ ಅಸ್ತಿಕಾಯವಲ್ಲ. ಕಾರಣವೇನೆಂದರೆ ಪ್ರತ್ಯೇಕ ಕಾಲಾಣುವೂ ಸ್ವತಂತ್ರ ದ್ರವ್ಯವಿದ್ದು ಭಿನ್ನ ಭಿನ್ನವಾಗಿದೆ. ಇವು ಬಹುಪ್ರದೇಶಿತ್ವ ಗುಣವನ್ನು ಹೊಂದಿಲ್ಲ.

ಒಂದೇ ಜೀವವು ಸಮಸ್ತ ಲೋಕವನ್ನು ಆವರಿಸಬಲ್ಲದು. ಆದುದರಿಂದ ಜೀವವು ಅಸಂಖ್ಯಾತ ಪ್ರದೇಶೀ ಗುಣವುಳ್ಳದ್ದಾಗಿದೆ. ಧರ್ಮ ಅಧರ್ಮ ದ್ರವ್ಯಗಳೂ ಇಡಿ ಲೋಕಾಕಾಶವನ್ನೆಲ್ಲಾ ಆವರಿಸಿವೆ ಆಕಾಶವು ಅನಂತ ಪ್ರದೇಶವುಳ್ಳದ್ದಾಗಿದೆ. ಪುದ್ಗಲವು ಸಂಖ್ಯಾತವೂ, ಅಸಂಖ್ಯಾತವೂ ಅನಂತ ಪ್ರದೇಶತ್ವವೂ ಆಗಿದೆ. ಆದುದರಿಂದ ಮೇಲ್ಕಂಡ ಐದು ದ್ರವ್ಯಗಳೂ ಬಹು ಪ್ರದೇಶಿತ್ವ ಗುಣವುಳ್ಳದ್ದರಿಂದ ಅಸ್ತಿಕಾಯವೆನಿಸಿದೆ. ಕಾಲದ್ರವ್ಯಕ್ಕೆ ಈ ಗುಣವಿಲ್ಲ.

ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲವೆಂಬ ಆರು ದ್ರವ್ಯಗಳು ನಿತ್ಯವೂ ಅವಿನಾಶಿಯೂ ಆಗಿವೆ. ಈ ಆರರಲ್ಲಿ ಯಾವುದೂ ನಾಶವಾಗುವುದಿಲ್ಲ. ಅಥವಾ ಹೊಸ ದ್ರವ್ಯ ಬಂದು ಸೇರುವುದಿಲ್ಲ. ಎಲ್ಲಾ ದ್ರವ್ಯಗಳೂ ಭಿನ್ನ ಭಿನ್ನವಾಗಿಯೇ ಇವೆ. ಒಂದು ಇನ್ನೊಂದರಲ್ಲಿ ಬೆರೆತು ಹೋಗಿಲ್ಲ. ಶರೀರದಲ್ಲಿ ಜೀವನಿದ್ದರೂ ಜೀವನೇ ಬೇರೆ; ಶರೀರವೇ ಬೇರೆ. ಈ ದ್ರವ್ಯಗಳೆಲ್ಲಾ ತಮ್ಮ ತಮ್ಮ ಸ್ವಭಾವಗುಣಕ್ಕನುಸಾರವಾಗಿ ಸದಾ ಕಾರ್ಯನಿರತವಾಗಿವೆ. ಇವಕ್ಕೆ ಮತ್ತಾರ ಪ್ರೇರಣೆಯೂ ಇಲ್ಲ; ಪ್ರೇರಕರೂ ಇಲ್ಲ. ವಸ್ತುವಿನ ಸ್ಥಿತಿಯೇ ಹೀಗಿದೆ.

ಹೀಗೆ ಆರು ದ್ರವ್ಯಗಳ ಸಮೂಹವೇ ವಿಶ್ವವೆಂದು ಹೇಳುತ್ತಾ ಈ ರೀತಿಯಾಗಿ ದ್ರವ್ಯ ಸಿದ್ಧಾಂತವನ್ನು ಜೈನ ದರ್ಶನವು ನಿರೂಪಿಸಿದೆ.

ತ್ರೈ ಕಾಲ್ಯಂ ದ್ರವ್ಯಷಟ್ಕಂ ನವಪದಸಹಿತಂ ಜೀವ ಷಟ್ಕಾಯಲೇಶ್ಯಾಃ ।
ಪಂಚಾನ್ಯೇಚಾಸ್ತಿಕಾಯಾ ವ್ರತಸಮಿತಿ ಗತಿ ಜ್ಞಾನಚಾರಿತ್ರ ಭೇದಾಃ ॥
ಇತ್ಯೇತನ್ಮೋಕ್ಷಮೂಲಂ ತ್ರಿಭುವನ ಮಹಿತೈಃ ಪ್ರೋಕ್ತಮರ್ಹದ್ಭಿರೀಶೈಃ ।
ಪ್ರತ್ಯೇತಿ ಶ್ರದ್ಧಧಾತಿ ಸ್ಪೃಶತಿಚಮತಿಮಾನ್‌ಯಃ ಸವೈಶುದ್ಧದೃಷ್ಟಿಃ ॥